Swabhimani Sahakari

Pages : 32 / 12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 18
Issue - 04
April - 2021


ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



## ಯುಗಾದಿ ಹಬ್ಬದ ಶುಭಾಶಯಗಳು

ಹೊಂಗೆ ಹೂವ ತೊಂಗಲಲ್ಲಿ
ಭೃಂಗದ ಸಂಗೀತ ಕೇಳಿ
ಮತ್ತೆ ಕೇಳ ಬರುತಿದೆ
ಬೇವಿನ ಕಹಿ ಬಾಳಿನಲ್ಲಿ
ಹೂವಿನ ನಸುಗಂಪು ಸೂಸಿ
ಜೀವಕಳೆಯ ತರುತಿದೆ.

– ದ.ರಾ. ಬೇಂದ್ರೆ

ಏಪ್ರಿಲ್ – 13
ಯುಗಾದಿ ಹಬ್ಬ



ಏಪ್ರಿಲ್ – 2
ಗುಡ್ ಫ್ರೈಡೇ



ಏಪ್ರಿಲ್ – 14
ಅಂಬೇಡ್ಕರ್ ಜಯಂತಿ



ಏಪ್ರಿಲ್ – 17
ದೇವರ ದಾಸಿಮಯ್ಯ ಜಯಂತಿ



ಏಪ್ರಿಲ್ – 18
ರಾಮಾನುಜಾಚಾರ್ಯರ ಜಯಂತಿ



ಏಪ್ರಿಲ್ – 21
ಶ್ರೀರಾಮ ನವಮಿ



ಏಪ್ರಿಲ್ – 25
ಮಹಾವೀರ ಜಯಂತಿ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5215

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1373

ಸ್ವಾಭಿಮಾನಿ ಸಹಕಾರಿ

ಅಧ್ಯಕ್ಷರ ನುಡಿ



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

> ಪ್ರಸ್ತುತ ಕಳೆದ 2–3 ವರ್ಷಗಳಿಂದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿ ಮಾಡಿಕೊಡುವಂತೆ ಸರಕಾರವನ್ನು ಕೇಳಿಕೊಳ್ಳುತ್ತಿದ್ದು ಅದಕ್ಕಾಗಿ ಹಲವು ಬಾರಿ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಹಕಾರ ಮಂತ್ರಿಗಳನ್ನು ಹಾಗೂ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರನ್ನು ಸಹಕಾರಿಗಳ ನಿಬಂಧಕರನ್ನು ಭೇಟಿ ಮಾಡುತ್ತಲೇ ಇದ್ದು ಪ್ರಸ್ತುತ ಸಹಕಾರ ಇಲಾಖೆಯ ಮೂಲಕ ಹಲವು ಬಾರಿ ಸಭೆ ನಡೆಸಿ ಸಿದ್ಧಪಡಿಸಲಾಗಿರುವ ಈ ತಿದ್ದುಪಡಿಗಳನ್ನು ರಾಜ್ಯದ ಸಚಿವ ಸಂಪುಟ ಅನುಮೋದಿಸಿದೆ.

# ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ : ವಿಧಾನ ಸಭೆಯಲ್ಲಿ ಮಂಡನೆ – ಅನುಮೋದನೆ ಬಾಕಿ

**ಆತ್ಮೀಯರೆ,**

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಪ್ಲವ ನಾಮ ಸಂವತ್ಸರದ, ಯುಗಾದಿಯ ಹಬ್ಬದ, ಶ್ರೀ ದೇವರ ದಾಸೀಮಯ್ಯ ಜಯಂತಿ, ಶ್ರೀ ಅಂಬೇಡ್ಕರ ಜಯಂತಿ, ಶ್ರೀ ರಾಮಾನುಜಾಚಾರ್ಯರ ಜಯಂತಿ, ಶ್ರೀ ರಾಮನವಮಿ, ಶ್ರೀ ಮಹಾವೀರ ಜಯಂತಿ, ಹಾಗೂ ನೂತನ ಆರ್ಥಿಕ ವರ್ಷದ ಹಾರ್ದಿಕ ಶುಭಾಶಯಗಳು. ನೂತನ ಸಂವತ್ಸರದ ಚೈತ್ರಮಾಸದಲ್ಲಿ ಯುಗಾದಿ ಹಾಗೂ ಶ್ರೀ ರಾಮನವಮಿ ಎರಡೂ ನಮ್ಮೆಲ್ಲರ ಬಾಳಲ್ಲಿ ನೂತನ ವಿಶೇಷ ಉತ್ಸಾಹವನ್ನು ಹಾಗೂ ಶಕ್ತಿಯನ್ನು ತುಂಬುವಂತಹ ಹಬ್ಬಗಳು. ಇಂತಹ ಹಬ್ಬಗಳ ಆಚರಣೆಯಿಂದ ನಾವೆಲ್ಲ ಸೌಹಾರ್ದ ಸಹಕಾರಿಗಳು ನೂತನ ಆರ್ಥಿಕ ವರ್ಷದಲ್ಲಿ ಸ್ಫೂರ್ತಿ ಪಡೆದು ಅಭಿವೃದ್ಧಿ ಪಥದತ್ತ ಸಾಗೋಣ.

ಪ್ರಸ್ತುತ ಕಳೆದ 2–3 ವರ್ಷಗಳಿಂದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿ ಮಾಡಿಕೊಡುವಂತೆ ಸರಕಾರವನ್ನು ಕೇಳಿಕೊಳ್ಳುತ್ತಿದ್ದು ಅದಕ್ಕಾಗಿ ಹಲವು ಬಾರಿ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಹಕಾರ ಮಂತ್ರಿಗಳನ್ನು ಹಾಗೂ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರನ್ನು ಸಹಕಾರಿಗಳ ನಿಬಂಧಕರನ್ನು ಭೇಟಿ ಮಾಡುತ್ತಲೇ ಇದ್ದು ಪ್ರಸ್ತುತ ಸಹಕಾರ ಇಲಾಖೆಯ ಮೂಲಕ ಹಲವು ಬಾರಿ ಸಭೆ ನಡೆಸಿ ಸಿದ್ಧಪಡಿಸಲಾಗಿರುವ ಈ ತಿದ್ದುಪಡಿಗಳನ್ನು ರಾಜ್ಯದ ಸಚಿವ ಸಂಪುಟ ಅನುಮೋದಿಸಿದೆ. ಇದಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು, ಗೃಹ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿಯವರು, ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರವರರನ್ನು ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ತುಷಾರ ಗಿರಿನಾಥ, ಸಹಕಾರಿಗಳ ನಿಬಂಧಕರಾದ ಶ್ರೀ ಎಸ್ ಜಿಯಾಉಲ್ಲಾ, ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀ ಎಮ್.ಡಿ. ನರಸಿಂಹಮೂರ್ತಿ ಇವರುಗಳನ್ನು ರಾಜ್ಯದ ಎಲ್ಲ ಸಹಕಾರಿಗಳ ಪರವಾಗಿ ಅಭಿನಂದಿಸುತ್ತೇನೆ. ಪ್ರಾಸ್ತಾವಿಕ ತಿದ್ದುಪಡಿಯು ವಿಧಾನ ಸಭೆಯಲ್ಲಿ ಮಂಡನೆಯಾಗಿದೆ. ಆದರೆ ಕಾರಣಾಂತರಗಳಿಂದ ಸದನವು ಒಂದು ವಾರ ಮುಂಚಿತವಾಗಿಯೇ ಮುಕ್ತಾಯಗೊಳಿಸಿ ಅನಿರ್ದಿಷ್ಟ ಅವಧಿಗೆ ಮುಂದೂಡಲ್ಪಟ್ಟಿರುವುದರಿಂದ ಅನುಮೋದನೆಯಾಗಲಿಲ್ಲ. ಮುಂದಿನ ಅಧಿವೇಶನದಲ್ಲಿ ಅನುಮೋದನೆ ಆಗಬಹುದು ಎಂಬ ವಿಶ್ವಾಸವಿದೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿರುವ ವಿಶೇಷವಾಗಿ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಘಗಳೇ ಅಲ್ಲ ಎಂಬ ಆದಾಯ ತೆರಿಗೆ ಇಲಾಖೆಯವರ ವಾದಕ್ಕೆ ಹೈಕೋರ್ಟಿನ ಏಕ ಸದಸ್ಯ ಪೀಠದ ತೀರ್ಪನ್ನು ಪ್ರಶ್ನಿಸಿ ದ್ವಿಸದಸ್ಯ ಮೇಲ್ಮನವಿ ಪೀಠಕ್ಕೆ ಹೋಗಿದ್ದಾರೆ. ಮತ್ತೆ ಸೌಹಾರ್ದ ಸಹಕಾರಿಗಳಿಗೆ ನೋಟೀಸ ನೀಡುತ್ತಿದ್ದಾರೆ. ಈ ಬಗ್ಗೆ ಕೇಂದ್ರದ ಹಣಕಾಸು ಸಚಿವರನ್ನು ಭೇಟಿ ಮಾಡಿ ವಿವರಣೆ ನೀಡಿದ ನಂತರ ಆದಾಯ ಇಲಾಖೆಯ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿ ವಿವರಣೆ ನೀಡಲಾಗಿದೆ. ನೀವುಗಳು ಆದಷ್ಟು ಬೇಗ ರಾಜ್ಯದ ನಿಮ್ಮ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿ ಮಾಡಿಸಿ. ಎಂಬುದಾಗಿ ಆದಾಯ ತೆರಿಗೆ ಇಲಾಖೆಯವರು ತಿಳಿಸಿದ್ದಾರೆ. ಸದ್ಯಕ್ಕೆ ಒಂದು ರೀತಿಯ ತಾತ್ಕಾಲಿಕ ಸಮಾಧಾನವಾಗಿದೆ. ಆದರೆ ಸೌಹಾರ್ದ ಸಹಕಾರಿ ಕಾಯ್ದೆಯಂತೂ ತಿದ್ದುಪಡಿಯಾಗಲೇಬೇಕು. ತಿದ್ದುಪಡಿಯಾಗುತ್ತದೆ ಎಂಬ ವಿಶ್ವಾಸ ಸಂಯುಕ್ತ ಸಹಕಾರಿಗೆ ಇದೆ. ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿ ಹಗಲಿರುಳು ಪ್ರಯತ್ನಿಸುತ್ತಿದೆ. ಇದಕ್ಕೆ ಸಂಯುಕ್ತ ಸಹಕಾರಿ ನಿಮ್ಮೆಲ್ಲರ ಸಂಪೂರ್ಣ ಸಹಕಾರವನ್ನು ಅಪೇಕ್ಷಿಸುತ್ತದೆ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop


## ಒಳಪುಟಗಳಲ್ಲಿ. . .


ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 5–17
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 18–24
**ಲೇಖನಗಳು :**
ಸಹಕಾರ ಸಂಘಗಳ ಪದಾಧಿಕಾರಿಗಳಲ್ಲಿ ಅವಿಶ್ವಾಸ ನಿರ್ಣಯ – ಒಂದು ವಿಮರ್ಶೆ .... ........................................ 25–26
ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ–12) ................................ 30–32


# ಸಂಪಾದಕೀಯ

## ನೂತನ ಆರ್ಥಿಕ ವರ್ಷದಲ್ಲಿ ಹೊಸ ಹಾಗೂ ವಿನೂತನ ಯೋಜನೆಗಳ ಅನುಷ್ಠಾನಕ್ಕೆ ಆದ್ಯತೆಯಿರಲಿ.

ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ವಿನೂತನ ಯೋಜನೆಗಳ ಅನುಷ್ಠಾನಕ್ಕೆ ಕಾಲ ಈಗ ಪಕ್ವವಾಗಿದೆ. ಸಾಮಾನ್ಯವಾಗಿ ಸಹಕಾರಿ ಕ್ಷೇತ್ರ ಎಂದಾಕ್ಷಣ ಸಾರ್ವಜನಿಕರಲ್ಲಿ ಸಾಲಕೊಡುವ ಸಂಸ್ಥೆಗಳು/ಬ್ಯಾಂಕುಗಳು ಎಂದೇ ಗುರುತಿಸುತ್ತಾರೆ. ಸಹಕಾರಿ ಸಂಸ್ಥೆಗಳು ಏನೆಲ್ಲ ಸಾಧನೆ ಮಾಡಿವೆ, ಮಾಡುತ್ತಿವೆ ಮತ್ತು ಮಾಡಬಹುದು ಎಂಬುದರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದಾಗ ಮಾತ್ರ ಸಹಕಾರಿಗಳ ಬಗ್ಗೆ ಸಾರ್ವಜನಿಕರಲ್ಲಿ ವಿಶ್ವಾಸಾರ್ಹತೆ ಹೆಚ್ಚುತ್ತದೆ ಹಾಗೂ ಸಹಕಾರಿ ಕ್ಷೇತ್ರದಿಂದ ಉಪಯೋಗ ಪಡೆಯಲು ಮುಂದೆ ಬರುತ್ತಾರೆ.

ಸಹಕಾರ ಕ್ಷೇತ್ರಕ್ಕೆ 117 ವರ್ಷಗಳ ಇತಿಹಾಸ ಹಾಗೂ ಕರ್ನಾಟಕದ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ 21 ವರ್ಷಗಳ ಇತಿಹಾಸವಿದೆ. ಸಹಕಾರಿ ಕ್ಷೇತ್ರದ ಸಾಧನೆ ಕೃಷಿ, ಹೈನುಗಾರಿಕೆ, ಕುರಿ ಸಾಗಾಣಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಮೀನುಗಾರಿಕೆ, ರೇಷ್ಮೆ, ನೇಕಾರಿಕೆ ಮುಂತಾದ ವ್ಯವಸಾಯಕ್ಕೆ ಪೂರಕವಾಗಿರುವ ಅನೇಕ ಕಸಬುಗಳನ್ನು ಮಾಡಲು ಸಹಕಾರ ಕ್ಷೇತ್ರದಿಂದ ಸಾಕಷ್ಟು ನೆರವನ್ನು ನೀಡುತ್ತ ಬಂದಿದೆ ಈ ಸಹಕಾರಿ ಕ್ಷೇತ್ರ. ಅಷ್ಟೆ ಸಾಧನೆಗಳನ್ನು ಈ ಕ್ಷೇತ್ರ ಮಾಡಿದೆ. ಇವೆಲ್ಲವುಗಳ ಮೂಲಕ ದೇಶದಲ್ಲಿ ಅಹಾರ ಸ್ವಾವಲಂಬನೆಯನ್ನು ಸಾಧಿಸಿರುವುದು ಸಾಮಾಜಿಕ, ಆರ್ಥಿಕ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಲು ಸಹಕಾರಿ ಕ್ಷೇತ್ರದ ಕೊಡುಗೆ ಅಪಾರ ಇದು ಹೆಮ್ಮೆಯ ವಿಷಯ. ಇಷ್ಟು ವರ್ಷಗಳಾದರೂ ಈ ಕ್ಷೇತ್ರದ ಸೇವೆಗೆ ಸಾಟಿಯಾಗುವ ಪರಿಕಲ್ಪನೆ ಮತ್ತು ವ್ಯವಸ್ಥೆಗಳು ಬರದಿರುವುದು ಈ ಕ್ಷೇತ್ರಕ್ಕೆ ವರದಾನವಾಗಿದೆ. ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವ ಸಮಯ ಈಗ ಬಂದಿದೆ.

ಪ್ರಸ್ತುತ ಹಣಕಾಸು ವರ್ಷ 2021–22 ಇದೇ ಏಪ್ರಿಲ್ ನಿಂದ ಪ್ರಾರಂಭವಾಗಿರುವುದು ತಮಗೆ ತಿಳಿದಿದೆ. ಸಹಕಾರಿ ಕ್ಷೇತ್ರದ ಹೆಗ್ಗಳಿಕೆ ಹೆಚ್ಚಾಗಬೇಕು ಈ ಕ್ಷೇತ್ರ ಜನಸಾಮಾನ್ಯರ ಎಲ್ಲ ಬೇಕು ಬೇಡಿಕೆಗಳಿಗೆ ಸ್ಪಂದಿಸುವಂತಾಗಬೇಕಿದೆ. ಈ ಕ್ಷೇತ್ರಕ್ಕೆ ಹೆಚ್ಚಿನ ಮನ್ನಣೆ ದೊರಕುವಂತಾಗಲು ಸಹಕಾರಿಗಳು ಪ್ರತಿ ವರ್ಷದಂತೆ ಈ ವರ್ಷವೂ ಸಾಮಾನ್ಯ ಕಾರ್ಯಚಟುವಟಿಕೆಗಳ ಜೊತೆಗೆ ಹೊಸ ಹಾಗೂ ವಿನೂತನ ಕಾರ್ಯಚಟುವಟಿಕೆಗಳ ಅನುಷ್ಠಾನದ ಅಗತ್ಯವಿದೆ. ಬಡ್ಡಿಯೇತರ ಆದಾಯ ಯೋಜನೆಗಳು, ಸದಸ್ಯರಿಗೆ ಅಗತ್ಯವಾಗುವ ವಿವಿಧ ರೀತಿಯ ಸೌಲಭ್ಯಗಳ ಕೇಂದ್ರೀಕೃತ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಿದಾಗ ಮಾತ್ರ ಈ ಪೈಪೋಟಿ ಯುಗದಲ್ಲಿ ಸಹಕಾರಿ ಕ್ಷೇತ್ರದ ಅಸ್ತಿತ್ವಕ್ಕೆ ಮೆರುಗು ಬರುತ್ತದೆ.

ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಸ್ತುತತೆಯನ್ನು ಅನೇಕ ವೇದಿಕೆಗಳಲ್ಲಿ ಚರ್ಚಿಸಲಾಗುತ್ತಿದೆ ಎಂಬುದನ್ನು ಸಹಕಾರಿಗಳು ಗಮನಿಸಬೇಕು. ನಮ್ಮ ಅಸ್ತಿತ್ವ ಪ್ರಸ್ತುತ ಎಂದು ಸಿದ್ಧಪಡಿಸುವುದರ ಜೊತೆಗೆ ತಮ್ಮ ಧ್ವಜಾಪತಾಕೆಯನ್ನು ಇನ್ನೂ ಎತ್ತರಕ್ಕೆ ಹಾರಿಸುವಂತಹ ಈ ಕ್ಷೇತ್ರದ ಟೀಕಾಕಾರರನ್ನು ಈ ಕ್ಷೇತ್ರದ ಮಾರ್ಗದರ್ಶಿಗಳನ್ನಾಗಿ ಪರಿವರ್ತಿಸುವ ಕ್ರಮ ನಮ್ಮಿಂದ ಆಗಬೇಕಿದೆ. ಆದ್ದರಿಂದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ವಿನೂತನ ಯೋಜನೆಗಳನ್ನು ಹಾಗೂ ಬಹುವಿಧದ ಚಟುವಟಿಕೆಗಳನ್ನು ಪ್ರಾರಂಭಿಸುವ ಬಗ್ಗೆ ಆದ್ಯತೆ ನೀಡುತ್ತಾರೆಂದು ಭಾವಿಸಿದೆ.

## “ನ್ಯಾಯಾಧಿಪತಿಯಂತೆ ಜಗದ ಶ್ರೇಯಸ್ಸಿಗೆ ಶ್ರಮಿಸು”

ಶ್ರೇಣಿ 60



## ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ಪ್ರಜಾಕಲ್ಯಾಣ, ಆರ್ಥಿಕಾಭಿವೃದ್ಧಿ ಹಾಗೂ ಸಮಾಜದ ಸ್ವಾಸ್ತ್ಯವನ್ನು ಸಾಧಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳ ಮೂಲಕ ಗುಣಾತ್ಮಕ ಸೇವೆಗಳನ್ನೊದಗಿಸಲು ಶ್ರಮಿಸುತ್ತಿವೆ. ಒಂದು ದೇಶದ ಸಮೃದ್ಧತೆ, ಶಾಂತಿ ಹಾಗೂ ಪ್ರಜಾಧರ್ಮನೀತಿಗಳು ಆ ದೇಶದ ನ್ಯಾಯಾಂಗ ವ್ಯವಸ್ಥೆಯ ಕಾರ್ಯನಿರ್ವಹಣಾ, ಗುಣಮಟ್ಟವನ್ನು ಅವಲಂಬಿಸಿರುತ್ತದೆ. “Let hundred culprits escape but one innocent should not be punished” ನೂರು ಜನ ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಂಡರೂ ಸರಿ ಆದರೆ ಓರ್ವ ನಿರಪರಾಧಿಗೆ ಶಿಕ್ಷೆಯಾಗಲಾರದು ಎಂಬುದು ನ್ಯಾಯಾಶಾಸ್ತ್ರದ ಮೂಲೋದ್ದೇಶ, ಗುಣಾತ್ಮಕ ನ್ಯಾಯಾದಾನ ಪ್ರಕ್ರಿಯೆಯಲ್ಲಿ ನ್ಯಾಯಾಧೀಶರ ಕಾರ್ಯನಿರ್ವಹಣೆಯು ಉತ್ತಮ ಗುಣಮಟ್ಟದ್ದಾಗಿರಬೇಕೆಂದು, ಕಕ್ಷಿದಾರರುಗಳೀಗೆ ನ್ಯಾಯ ಸಿಗುವಂತೆ ಯಾರಿಗೂ ಅನ್ಯಾಯವಾಗದಂತೆ ನ್ಯಾಯಯುತ ತೀರ್ಪು ನೀಡಲು ನ್ಯಾಯಾಧೀಶರು ತನ್ನ ಸ್ವಾರ್ಥ ಪ್ರಲೋಭಗಳನ್ನು ಬದಿಗಿಟ್ಟು ತನ್ನ ಸಮಗ್ರ ಬುದ್ಧಿ ಮತ್ತು ಮನಸ್ಸುಗಳನ್ನು ಕಕ್ಷಿದಾರರಿಗೆ ನ್ಯಾಯ ದೊರೆಯುವಂತೆ ಚಿಂತಿಸಿ ತೀರ್ಪನ್ನು ನೀಡುವಂತೆ ನಾಗರೀಕರುಗಳಾದ ನಾವುಗಳು ಸಹ ಸಮುದಾಯದ ಸಹೋದರ ಆತ್ಮಗಳಿಗೆ ದೂರ್ರತಕ್ಕ ನ್ಯಾಯಯುತ ಬೇಡಿಕೆಗಳನ್ನು ದೊರಕಿಸುವ ದಿಸೆಯಲ್ಲಿ ಕಾರ್ಯನಿರ್ವಹಿಸಬೇಕೆಂದು ಆಧ್ಯಾತ್ಮ ಕವಿ ಡಿ.ವಿ.ಜಿ ಯವರು ಕಣ್ಣಿಗೆ ಕಟ್ಟುವಂತೆ ಈ ಕೆಳಗಿನ ಪದ್ಯದಲ್ಲಿ ಚಿತ್ರೀಕರಿಸಿದ್ದಾರೆ.

ನ್ಯಾಯಾಧಿಪತಿ ತನ್ನ ಮತಿ ಮನಸುಗಳನೆಲ್ಲ
ಸ್ವೀಯಲಾಭ ಸ್ಮರಣೆಯುಳಿದು ವಿವದಿಗಳಾ
ದಾಯ ನಿರ್ಣಯಕೆ ಯೋಚಿಸುವಂತೆ ನೀಂ ಜಗದ
ಶ್ರೇಯಸ್ಸಿಗುಜ್ಜುಗಿಸು ॥ ಮಂಕುತಿಮ್ಮ ॥

ನ್ಯಾಯಾ ನೀಡಿಕೆ ಪ್ರಕ್ರಿಯೆಯ ಬಗ್ಗೆ ವಿಳಂಬ ಸಲ್ಲದು ಹಾಗೂ ಆತರವೂ ಸಲ್ಲದೆಂಬ ಅಂಶಗಳಿಗೆ ಪೂರಕವಾದ ಆಂಗ್ಲ ವಾಕ್ಯಗಳು Justice deleyed in justice denied ಮತ್ತು Justice hurried is justice burried ಎಂದು ವ್ಯಾಕ್ಯನಿಸಲ್ಪಟ್ಟಿವೆ. ವಿವಾದದ ಇತ್ಯರ್ಥಕ್ಕೆ ಅವಶ್ಯವಾದ ಸಾಕ್ಷ್ಯದಾರಗಳನ್ನು ಸಮಗ್ರ ಪರಿಶೀಲನೆ ಮಾಡಿ ಅಂತಿಮ ತೀರ್ಪನ್ನು ನೀಡಲು ಹೇಗೆ ನ್ಯಾಯಾಧಿಪತಿಗಳು ತನ್ನ ಸ್ವಾರ್ಥದ ಲಾಭವನ್ನು ಚಿಂತಿಸದೆ ವಿವಾದದ ಕಕ್ಷಿದಾರರುಗಳು ಶ್ರೇಯಸ್ಸಿಗೆ ಶ್ರಮಿಸುತ್ತಾರೋ ಹಾಗೆ ಆಸೆ ಮತ್ತು ಅವರ್ಶ್ಯತೆಗಳ (Greed and need) ಪರಿವ್ಯಾಪ್ತಿಯನ್ನರಿತು ಸಮಾಜದ ಶ್ರೇಯಸ್ಸಿಗೆ ನೀನೂ ಶ್ರಮಿಸು ತನ್ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಕಾರಣೀಭೂತವಾಗೆಂಬುದೇ ಈ ಪದ್ಯದ ಸಾರಾಂಶವಾಗದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 16,564 ಆಗಿರುತ್ತದೆ. ಇವುಗಳ ಪೈಕಿ 9219 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7345.

**ಮಾರ್ಚ್ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು 570, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 295.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2839 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 255 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,205 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1022 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 103 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಮಾರ್ಚ ತಿಂಗಳಿನಲ್ಲಿ 114 ಪ್ರಕರಣ ದಾಖಲಾಗಿರುತ್ತವೆ.



## ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಉಪಾಧ್ಯಕ್ಷರಾಗಿ ಶ್ರೀ ಜಗದೀಶ ಕವಟಗಿಮಠ ಆಯ್ಕೆ

**ಬೆಳಗಾವಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ.

ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.



## ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾಗಿ ಶ್ರೀ ಎಸ್.ಆರ್ ಲಕ್ಷ್ಮೀಕಾಂತ ರೆಡ್ಡಿ ಆಯ್ಕೆ.

**ಚಿತ್ರದುರ್ಗ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್ ಆರ್. ಲಕ್ಷ್ಮೀಕಾಂತ ರೆಡ್ಡಿ ಇವರು ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಪ್ರಥಮ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.



## ಕರ್ನಾಟಕ ರಾಜ್ಯ ಅಡಿಕೆ ಸಹಕಾರ ಸಂಘಗಳ ಸಹಕಾರ ಮಹಾಮಂಡಳದ ನಿರ್ದೇಶಕರಾಗಿ ಶ್ರೀ ಆರ್. ಪ್ರಸನ್ನ ಕುಮಾರ್ ಆಯ್ಕೆ.

**ಶಿವಮೊಗ್ಗ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್. ಪ್ರಸನ್ನ ಕುಮಾರ್ ಇವರು ಕರ್ನಾಟಕ ರಾಜ್ಯ ಅಡಿಕೆ ಸಹಕಾರ ಸಂಘಗಳ ಸಹಕಾರ ಮಹಾಮಂಡಳದ ನಿರ್ದೇಶಕರಾಗಿ ಆಯ್ಕೆಯಾಗಿರುತ್ತಾರೆ. ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.



## ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನ ಅಧ್ಯಕ್ಷರಾಗಿ ಶ್ರೀ ಆರ್ ತಿಮ್ಮಯ್ಯ ಶೆಟ್ಟಿ ಪುನರಾಯ್ಕೆ

**ರಾಯಚೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯಶೆಟ್ಟಿ ಇವರು ಮನ್ವಿ ಪಟ್ಟಣ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಪುನರಾಯ್ಕೆಯಾಗಿರುತ್ತಾರೆ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ಡಾ॥ ರೋಹಿಣಿ ಜ ಮಾನ್ವಿಕರ್ ಆಯ್ಕೆಯಾಗಿದ್ದಾರೆ. ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.



## ಪ್ರಭುಲಿಂಗೇಶ್ವರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಗದೀಶ ಎಸ್. ಗುಡಗುಂಟಿ ಇವರು "ನಾಡೋಜ ಪ್ರಶಸ್ತಿಗೆ" ಆಯ್ಕೆ

**ಜಮಖಂಡಿ :** ಕನ್ನಡ ವಿಶ್ವವಿದ್ಯಾಲಯ, ಹಂಪಿ ನೀಡುವ ನಾಡೋಜ ಪ್ರಶಸ್ತಿಗೆ ಪ್ರಭುಲಿಂಗೇಶ್ವರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಗದೀಶ ಎಸ್. ಗುಡಗುಂಟಿ ಇವರು ಆಯ್ಕೆಯಾಗಿದ್ದಾರೆ.

ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.

# “ಸಹಕಾರ ಅಭಿವೃದ್ಧಿ ವೇದಿಕೆ” (Cooperative Development Forum)

## ಮಾಜಿ ಕೇಂದ್ರ ಸಚಿವ ಶ್ರೀ ಸುರೇಶ ಪ್ರಭು ಅಧ್ಯಕ್ಷರಾಗಿ ನೇಮಕ

## ರಾಷ್ಟ್ರದ ಆರ್ಥಿಕತೆಯನ್ನು 5 ಟ್ರಿಲಿಯನ್ ಡಾಲರ್‌ದತ್ತ ಕೊಂಡೊಯ್ಯಲು ಈ ವೇದಿಕೆ ಸಹಕಾರಿ – ಶ್ರೀ ಸುರೇಶ ಪ್ರಭು

ದಿನಾಂಕ 22.03.2021 ರಂದು ರಾಷ್ಟ್ರೀಯ ಸಹಕಾರಿ ಯೂನಿಯನ್ ಸಭಾಂಗಣದಲ್ಲಿ ಜರುಗಿದ ಸರಳ ಸಮಾರಂಭದಲ್ಲಿ ಕೇಂದ್ರ ಸರಕಾರದ ಕೃಷಿ ಇಲಾಖೆಯ ರಾಜ್ಯ ಸಚಿವರಾದ ಪುರುಷೋತ್ತಮ ರುಪಾಲಾ ರವರು ಸಹಕಾರ ಅಭಿವೃದ್ಧಿ ವೇದಿಕೆಯನ್ನು ಉದ್ಘಾಟಿಸಿ ಭಾರತದ ಸಹಕಾರ ಕ್ಷೇತ್ರದ ಇತಿಹಾಸದಲ್ಲಿ ಹೊಸ ಅಧ್ಯಾಯದ ಪ್ರಾರಂಭ ಎಂದು ತಿಳಿಸಿದರು, ಮುಂದುವರೆದು ಮಾತನಾಡಿದ ಸಚಿವ ಶ್ರೀ ಪುರುಷೋತ್ತಮ ರುಪಾಲಾ ರವರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ವ್ಯವಸ್ಥೆಯನ್ನು (ಥ್ರೀ ಟೈರ್ ಸಿಸ್ಟಮ್ ಫಾರ ಆಗ್ರಿಕಲ್ಚರಲ್ ಕ್ರೆಡಿಟ್) ಮುಂದುವರೆಸಿಕೊಂಡು ಹೋಗಲು ಸಾಧ್ಯವಾಗುವಂತೆ ರಾಷ್ಟ್ರೀಯ ನೀತಿಯನ್ನು ರಚಿಸಲಾಗುವುದು ಎಂದು ತಿಳಿಸಿದರು.

ವೇದಿಕೆಯ ಅಧ್ಯಕ್ಷರಾಗಿ ನೇಮಕರಾಗಿರುವ ಶ್ರೀ ಸುರೇಶ ಪ್ರಭುರವರು ಮಾತನಾಡಿ ಈ ವೇದಿಕೆಯ ಮೂಲಕ ಈ ದೇಶವನ್ನು ಅಭಿವೃದ್ಧಿ ಪಥದ ರಾಷ್ಟ್ರಗಳ ಸಾಲಿನಲ್ಲಿ ಕಾಣಲು ಸಾಧ್ಯವಾಗುತ್ತದೆ. ಈ ವೇದಿಕೆ ಉತ್ತಮವಾಗಿ ಕಾರ್ಯನಿರ್ವಹಿಸಲು ಅವಕಾಶವಾಗಿದ್ದೇ ಆದರೆ ಇದೊಂದು ದೇಶದಲ್ಲಿ ಮಹತ್ತರ ಬದಲಾವಣೆಯ ಸೃಷ್ಟಿಸಲು ಸಾಧ್ಯವಾಗುತ್ತದೆ. ವಿಶೇಷವಾಗಿ ಯುವಕರನ್ನು ಈ ಕ್ಷೇತ್ರ ಆಕರ್ಷಿಸುವಲ್ಲಿ ಸಫಲವಾಗುತ್ತದೆ. ಸಹಕಾರಿ ಕ್ಷೇತ್ರದ ಪ್ರತಿಯೊಂದು ವಿಭಾಗದ ಸಮಸ್ಯೆಗಳಿಗೆ ಸ್ಪಂದಿಸುವ ಹಾಗೂ ಪರಿಹಾರ ಕಂಡುಕೊಳ್ಳುವುದಕ್ಕೆ ವೇದಿಕೆ ಪ್ರಯತ್ನಿಸುತ್ತದೆ. ದೇಶದ ಎಲ್ಲ ರಾಜ್ಯಗಳಲ್ಲಿ ಒಂದೇ ತರಹದ ಒಂದೇ ಮಾದರಿಯ ಸಹಕಾರ ಕಾಯ್ದೆಗಳನ್ನು ಜಾರಿ ಮಾಡುವ ಉದ್ದೇಶವಿದೆ. ಪ್ರತಿ ರಾಜ್ಯದಲ್ಲೂ ಈ ವೇದಿಕೆಯ ಶಾಖೆಯನ್ನು ತೆರೆಯಲಾಗುವುದು. ಕೇಂದ್ರ ಸರಕಾರ ಎಲ್ಲ ಯೋಜನೆಗಳನ್ನು ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕವೇ ಜಾರಿಮಾಡಲಾಗುವುದು ಈ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಹಾಗೂ ಈ ವೇದಿಕೆಯ ಕಾರ್ಯಚಟುವಟಿಕೆಗಳ ಬಗ್ಗೆ ಈಗಾಗಲೇ ಕೇಂದ್ರದ ಹಣಕಾಸು ಸಚಿವರು, ಕೃಷಿ ಸಚಿವರು, ನಬಾರ್ಡ ಚೇರಮೆನ್, ಹಣಕಾಸು ಇಲಾಖೆಯ ಕಾರ್ಯದರ್ಶಿ ಶ್ರೀ ತರುಣ ಬಜಾಜ ಇವರೊಂದಿಗೆ ಚರ್ಚಿಸಿದ್ದೇನೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಹಿರಿಯ ಸಹಕಾರಿ ಗಣ್ಯರಾದ ಶ್ರೀ ಸತೀಶ ಮರಾಠೆ, ಡಾ. ಯು.ಎಸ್.ಆವಸ್ಥಿ, ಡಾ.ಚಂದ್ರಪಾಲಸಿಂಗ್ ಯಾದವ, ಸಹಕಾರ ಭಾರತಿ ಅಧ್ಯಕ್ಷ ಶ್ರೀ ರಮೇಶ ವೈದ್ಯ, ಡಾ. ಉದಯ ಜೋಶಿ, ಹಾಗೂ ಅನೇಕ ಸಹಕಾರಿ ಪ್ರಮುಖರು ಉಪಸ್ಥಿತರದ್ದರು. ಐ.ಸಿ.ಎ ಅಧಿಕಾರಿ ಶ್ರೀ ಬಾಲು ಐಯ್ಯರ್, ಶ್ರೀ ಡಿ.ಎನ್. ಠಾಕುರ, ಎನ್.ಸಿ.ಯು.ಐ ಮುಖ್ಯ ಕಾರ್ಯನಿರ್ವಾಹಕ ಶ್ರೀ ಸುಧೀರ ಮಹಾಜನ ಇಫ್ಕೋ ಅಧಿಕಾರಿ ಶ್ರೀ ಯೋಗೇಂದ್ರ ಕುಮಾರ ಮುಂತಾದವರು ಭಾಗವಹಿಸಿದ್ದರು.

# ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅರ್ಥಪೂರ್ಣ ಆಚರಣೆ



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಬೆಂಗಳೂರಿನ ಉದಯ ಪತ್ತಿನ ಸೌಹಾರ್ದ ಸಹಕಾರಿ ಸಭಾಂಗಣದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅತ್ಯಂತ ಸಂಭ್ರಮದಿಂದ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ 47 ವಿವಿಧ ಸೌಹಾರ್ದ ಸಹಕಾರಿಗಳಿಂದ 115 ಮಹಿಳೆಯರು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದರು.

### ಉದ್ಘಾಟನೆ : ಡಾ. ವಿಜಯಲಕ್ಷ್ಮೀ ದೇಶಮಾನೆ ರವರಿಂದ

ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯ ನಿವೃತ್ತ ಖ್ಯಾತ ಕ್ಯಾನ್ಸರ ವೈದ್ಯೆ, ಬಸವನಗುಡಿಯ ಅಬಲಾಶ್ರಮದ ಅಧ್ಯಕ್ಷೆ ಅತ್ಯಂತ ಸರಳ ವ್ಯಕ್ತಿತ್ವದ ಶ್ರೀಮತಿ ವಿಜಯಲಕ್ಷ್ಮೀ

ದೇಶಮಾನೆಯವರು ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀಯುತರು ಮಾತನಾಡುತ್ತ ಇದೊಂದು ಅತ್ಯಂತ ಉತ್ತಮ ಕಾರ್ಯಕ್ರಮ ತಮ್ಮ ಜೀವನವನ್ನೇ ಒಂದು ಉದಾಹಣೆಯಾಗಿ ನೀಡಿ ತಾವು ಒಂದು ತರಕಾರಿ ಮಾರುವ ಬಡಕುಟುಂಬದಲ್ಲಿ ಜನಿಸಿ ಅನೇಕ ಕಷ್ಟಗಳ ಮಧ್ಯೆ ತಮ್ಮ ತಂದೆ ತಾಯಿಯವರ ಪ್ರೋತ್ಸಾಹದಿಂದ ಇಷ್ಟು ಉನ್ನತ ಹುದ್ದೆಗೆ ಸಮಾಜದಲ್ಲಿ ಹೆಚ್ಚಿನ ಗೌರವ ಸಂಪಾದನೆಗೆ ಕಾರಣವಾಯಿತು. ಮಹಿಳೆಯರು ಹೆಚ್ಚು ಆಸಕ್ತಿ ವಹಿಸಿ ಶ್ರದ್ಧೆಯಿಂದ ಕುಟುಂಬ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಇವತ್ತಿನ ಈ ಕಾರ್ಯಕ್ರಮ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗಿದೆ. ಮಹಿಳೆಯರು ಇಂತಹ ಪೂರ್ಣ ಪ್ರಯೋಜನ ಪಡೆಯಬೇಕು ಎಂದು ಕರೆ ನೀಡಿದರು.

**ಅಧ್ಯಕ್ಷತೆ : ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಅಧ್ಯಕ್ಷರು, ಸಂಯುಕ್ತ ಸಹಕಾರಿ, ಬೆಂಗಳೂರು.**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀಯುತರು ಮಾತನಾಡುತ್ತ ದೇಶದಲ್ಲಿ 8.5 ಲಕ್ಷ ಸಹಕಾರಿ ಸಂಸ್ಥೆಗಳಿವೆ. 31 ಕೋಟಿ ಜನರು ಈ ಸಹಕಾರ ಕ್ಷೇತ್ರದಡಿಯಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿಶ್ವದ ಜನಸಂಖ್ಯೆಯಲ್ಲಿ ಶೇಕಡಾ 49.55 ಮಹಿಳೆಯರಿದ್ದಾರೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ 48% ಮಹಿಳೆಯರಿದ್ದಾರೆ. ದೇಶದಲ್ಲಿ 17,000 ಮಹಿಳಾ ಸಹಕಾರಿ ಸಂಘಗಳಿವೆ. ಕರ್ನಾಟಕದಲ್ಲಿಯೇ 5918 ಮಹಿಳಾ ಸಹಕಾರ ಸಂಘಗಳಿವೆ. ದೇಶದ ಸಂವಿಧಾನಕ್ಕೆ 97ನೇ ತಿದ್ದುಪಡಿಮಾಡುವ ಮೂಲಕ ದೇಶದಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸುವ ಹಕ್ಕು ಎಲ್ಲ ನಾಗರಿಕರಿಗೆ ಇದೆ. ಎಲ್ಲ ಸಂಘಗಳಲ್ಲಿ ಕಡ್ಡಾಯಮಾನವಾಗಿ ಆಡಳಿತ ಮಂಡಳಿಯಲ್ಲಿ 2 ಮಹಿಳಾ ಪ್ರತಿನಿಧಿಗಳು ಇರಲೇಬೇಕು ಎಂದು ಹೇಳುವುದರ ಮೂಲಕ ಮಹಿಳಾ ಸಬಲೀಕರಣಕ್ಕೆ ಒತ್ತುಕೊಟ್ಟಿದ್ದಾರೆ. ದೇಶದಲ್ಲಿ ಮಾನ್ಯ ಪ್ರಧಾನ ಮಂತ್ರಿಯವರು ಬೇಟಿ ಬಚಾವೂ ಹಾಗೂ ಬೇಟಿ ಪಢಾವೂ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಮೂಲಕ, ರಾಜ್ಯ ಸರಕಾರದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಬಜೆಟ್ ಮಂಡನೆ ಮಾಡುವಾಗ ಮಹಿಳೆಯರ ಸಬಲೀಕರಣಕ್ಕೆ ಅನುಕೂಲವಾಗುವಂತೆ 37.18 ಕೋಟಿ ಹಣವನ್ನು ವಿವಿಧ ಯೋಜನೆಗಳಿಗೆ ವಿನಿಯೋಗಿಸುವುದಾಗಿ ಘೋಷಣೆ ಮಾಡಿದ್ದಾರೆ. ರಾಷ್ಟ್ರ ಹಾಗೂ ರಾಜ್ಯಗಳಲ್ಲಿ ಮಹಿಳೆಯರ ಸಬಲೀಕರಣಕ್ಕೆ ಹಲವಾರು ಯೋಜನೆಗಳನ್ನು ಜಾರಿ ಮಾಡಲಾಗುತ್ತಿದೆ.

ನಮ್ಮ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 210 ಮಹಿಳಾ ಸಹಕಾರಿ ಸಂಘಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಸಹಕಾರ ಕ್ಷೇತ್ರದ ಮೂಲಕ ಅನೇಕ ಮಹಿಳೆಯರು ಉದ್ಯಮಿಗಳಾಗಿದ್ದಾರೆ. ಸಾಮಾಜಿಕ ಕಾರ್ಯಕರ್ತರುಗಳಾಗಿದ್ದಾರೆ. ಸಹಕಾರಿಗಳ ನಿರ್ದೇಶಕರುಗಳಾಗಿ, ಅಧ್ಯಕ್ಷರು ಉಪಾಧ್ಯಕ್ಷರುಗಳಾಗಿದ್ದಾರೆ. ಸಾವಿರಾರು ಮಹಿಳಾ ಸಿಬ್ಬಂದಿಯವರಿದ್ದಾರೆ. ಹೀಗಾಗಿ ಈ ಕ್ಷೇತ್ರದ ಮೂಲಕ ಮಹಿಳಾ ಸಬಲೀಕರಣ ಪರಿಣಾಮಕಾರಿಯಾಗಿ ನಡೆಯುತ್ತಿದೆ. ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಮಹಿಳಾ ಸಹಕಾರಿ ಸಂಘಗಳನ್ನು ಪ್ರಾರಂಭಿಸುವವರಿಗೆ ಅಗತ್ಯ ಮಾರ್ಗದರ್ಶನವನ್ನು ಮಾಡಲಾಗುವುದು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಶ್ರೀಮತಿ ಶಶಿಕಲಾ ಟೆಂಗಳಿಯವರು ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷರು, ಶ್ರೀಮತಿ ಪ್ರಮೀಳಾ ನಾಯ್ಡುರವರು ಮಹಿಳಾ ಆಯೋಗದ ಅಧ್ಯಕ್ಷರು, ಶ್ರೀಮತಿ ಸರಸ್ವತಿಯವರು ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ ಶ್ರೀ ಬಿ.ಎಸ್.ಗುಂಡೂರಾವರವರು ಮಾನ್ಯ ನಿರ್ದೇಶಕರು ಸಂಯುಕ್ತ ಸಹಕಾರಿ, ಶ್ರೀ ಗುರುನಾಥ ಜಾಂತಿಕರರವರು ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ, ಶ್ರೀಮತಿ ಮಂಜುಳಾ ಪಾಟೀಲ್‌ರವರು, ನಿರ್ದೇಶಕರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿ ಮಾಧ್ಯಮ ಸಹಕಾರ ಮಹಾಮಂಡಳ ಹಾಗೂ ಮಾಜಿ ನಿರ್ದೇಶಕರು, ಸಂಯುಕ್ತ ಸಹಕಾರಿ, ಇವರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಹಿಳೆಯರಿಗೆ ಅವರ ಆರ್ಥಿಕ ಹಾಗೂ ಸಾಮಾಜಿಕ ಮತ್ತು ಸಮಗ್ರ ಅಭಿವೃದ್ಧಿಗಾಗಿ ತಮ್ಮ ತಮ್ಮ ಸಂಸ್ಥೆಗಳ ವ್ಯಾಪ್ತಿಯೊಳಗೆ ಇರುವ ಅವಕಾಶಗಳನ್ನು ಹಾಗು ಸೌಲಭ್ಯಗಳನ್ನು ಪ್ರಸ್ತುತಪಡಿಸಿದರು.

ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ ಪಾಟೀಲ್ ರವರು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಕಾರ್ಯಕ್ರಮದ ಸಂಚಾಲಕಿ ಶ್ರೀಮತಿ ಆರ್.ಶೋಭಾರವರು ಅತಿಥಿಗಣ್ಯರನ್ನು ಹಾಗೂ ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಶ್ರೀಮತಿ ಬಿ.ಆರ್. ಪೂರ್ಣಿಮಾ ಸ್ಟೇಟ್ ಕೋ ಆರ್ಡಿನೇಟರ್ ಇ.ಡಿ.ಪಿ ಕರ್ನಾಟಕ ಇವರು ಮಹಿಳೆಯರು ಗೃಹೋಪಯೋಗಿ ವಸ್ತುಗಳನ್ನು ಹೇಗೆ ಉತ್ಪಾದಿಸಬೇಕು ಹೇಗೆ ಮಾರಾಟ ಮಾಡಬೇಕು ಎಂಬುದರ ಬಗ್ಗೆ ಉಪನ್ಯಾಸ ನೀಡಿದರು. ಡಾ. ಅನುರಾಧಾರವರು ಮಹಿಳೆಯರಿಗೆ ಆರೋಗ್ಯದ ಬಗ್ಗೆ ಸಲಹೆಗಳನ್ನು ನೀಡಿದರು. ಶ್ರೀಮತಿ ಉಮಾರವರು

ಮಹಿಳೆಯರು ತಮ್ಮ ಸೌಂದರ್ಯವನ್ನು ಹೇಗೆ ರಕ್ಷಣೆ ಮಾಡಿಕೊಳ್ಳಲು ಸಾಧ್ಯ ಮತ್ತು ಅದರಲ್ಲಿ ಸಮಯ ನಿರ್ವಹಣೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಹೇಗೆ ಕೊಡಬೇಕು ಮತ್ತು ಸೌಂದರ್ಯ ವರ್ಧನೆಗೆ ಅನೇಕ ಸಲಹೆಗಳನ್ನು ನೀಡುವುದರ ಜೊತೆಗೆ ಪ್ರಾಯೋಗೀಕಗಳನ್ನು ಮಾಡಿತೋರಿಸಿದರು. ವಕೀಲೆ ಶ್ರೀಮತಿ ಪದ್ಮಾರವರು ಮಹಿಳೆಯರ ಸುರಕ್ಷಾ ಕ್ರಮಗಳ ಬಗ್ಗೆ ಮತ್ತು ಮಹಿಳೆಯರ ರಕ್ಷಣೆಗಾಗಿ ಇರುವ ಕಾನೂನುಗಳ ಮುಖ್ಯಾಂಶಗಳ ವಿವರ ನೀಡಿದರು.

**ಸಮಾರೋಪ ಕಾರ್ಯಕ್ರಮ ಅಧ್ಯಕ್ಷತೆ : ಶ್ರೀ ಜಗದೀಶ ಕವಟಗಿಮಠ, ಉಪಾಧ್ಯಕ್ಷರು, ಸಂಯುಕ್ತ ಸಹಕಾರಿ, ಬೆಂಗಳೂರು.**



ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ರವರು ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಯುತರು ಮಾತನಾಡಿ ಇವತ್ತು ನಡೆದ ಕಾರ್ಯಕ್ರಮ ಅತ್ಯಂತ ಉತ್ತಮ ಗುಣಮಟ್ಟದ್ದಾಗಿತ್ತು ಎಂದು ನಾನು ಭಾವಿಸಿದ್ದೇನೆ. ಮಹಿಳೆಯರು ಇವತ್ತು ಪಡೆದ ಮಾಹಿತಿಗಳನ್ನು ತಮ್ಮ ದಿನ ನಿತ್ಯದಲ್ಲಿ ಅಳವಡಿಸಿಕೊಳ್ಳುತ್ತೀರೆಂದು ನಾನು ಆಶಿಸುತ್ತೇನೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮತ್ತು ಸ್ಥಳೀಯ ಸಂಸ್ಥೆಗಳು ಸೇರಿದಂತೆ ಮಹಿಳೆಯರ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಜಾರಿಮಾಡಲಾಗುತ್ತಿದೆ. ಮಹಿಳೆಯರು ಇವುಗಳ ಪ್ರಯೋಜನ ಪಡೆಯುವುದು ಅವಶ್ಯಕ. ಮೊದಲು ಮಹಿಳೆಗೆ ಮಹಿಳೆಯರು ಪ್ರೋತ್ಸಾಹ ಅಗತ್ಯವಿದೆ. ನಂತರದಲ್ಲಿ ಪುರುಷರು, ಸಹಕಾರ ಸಂಘಗಳು, ಸ್ಥಳೀಯ ಸಂಸ್ಥೆಗಳು, ಸಮಾಜ ಮತ್ತು ಸರಕಾರಗಳು ಅನೇಕ ಕಾರ್ಯಕ್ರಮಗಳು ಮಹಿಳಾ ಸಬಲೀಕರಣದಲ್ಲಿ ಪಾಲ್ಗೊಳ್ಳುತ್ತಿವೆ. ಪ್ರಸ್ತುತ ಮಹಿಳೆಯರು ಎಲ್ಲ ಕ್ಷೇತ್ರದಲ್ಲೂ ಕಾರ್ಯನಿರ್ವಹಿಸುತ್ತಿರುವುದನ್ನು ನಾವು ನೋಡುತ್ತೇವೆ. ಇದು ಮುಂದುವರೆಯಬೇಕು ಮತ್ತು ಹೆಚ್ಚಾಗಬೇಕು ಎಂದು ತಿಳಿಸಿದರು.

ಶ್ರೀಮತಿ ಶೈಲಜಾ ತಪಲಿ, ಮಾನ್ಯ ಅಧ್ಯಕ್ಷರು, ಕಲಬುರಗಿ ಜಿಲ್ಲಾ ಮಹಿಳಾ ಸೌಹಾರ್ದ ಸಹಕಾರಿ ಕಲಬುರಗಿ ಇವರು ಸಮಾರೋಪ ಭಾಷಣ ಮಾಡುತ್ತ ಇವತ್ತಿನ ಕಾರ್ಯಕ್ರಮ ಬಹಳ ಉತ್ತಮವಾಗಿತ್ತು. ಇಂತಹ ಕಾರ್ಯಕ್ರಮ ಕೇವಲ ಕೇಂದ್ರದಲ್ಲಿ ಮಾಡಿದರೆ ಸಾಲದು ರಾಜ್ಯದ ಎಲ್ಲ ಭಾಗಗಳಲ್ಲೂ ಮಾಡಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಬವಾಮಿ ಸೌಹಾರ್ದ ಸಹಕಾರಿಯ ಶ್ರೀಮತಿ ಸಾಕ್ಷಿ, ಚಿತ್ರದುರ್ಗ ಕನ್ನಿಕಾ ಪರಮೇಶ್ವರಿ ಸೌಹಾರ್ದ ಸಹಕಾರಿಯ ಶ್ರೀಮತಿ ಶೈಲಜಾ, ಶ್ರೀ ಮಹಾಯೋಗಿ ವೇಮನ ಸೌಹಾರ್ದ ಸಹಕಾರಿಯ ನಿರ್ದೇಶಕಿ ಶ್ರೀಮತಿ ಆಶಾ ಪ್ರಕಾಶ ರವರುಗಳು ಕಾರ್ಯಕ್ರಮದ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಆರ್.ಐ.ಸಿ.ಎಮ್ ನ ಅಧ್ಯಾಪಕಿ ಶ್ರೀಮತಿ ಭಾರತಿಯವರು ಕಾರ್ಯಕ್ರಮದ ಸಮಗ್ರ ವರದಿಯನ್ನು ತಿಳಿಸಿದರು.

ಸಮಾರೋಪ ಕಾರ್ಯಕ್ರಮದ ವೇದಿಕೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಮಾನ್ಯ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು, ಅವರ ಶ್ರೀಮತಿಯವರಾದ ಶ್ರೀಮತಿ ಅರುಣಾ ಕೃಷ್ಣಾರೆಡ್ಡಿ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗಂಡೂರಾವ್, ಸಂಯುಕ್ತ ಸಹಕಾರಿಯ ನಿರ್ದೇಶಕಿಯಾದ ಶ್ರೀಮತಿ ಸರಸ್ವತಿ, ಶ್ರೀಮತಿ ಮಂಜುಳಾ ಪಾಟೀಲ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಉದಯ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಲಕ್ಷ್ಮೀ ಶೇಷಾದ್ರಿ ಇವರು ಉಪಸ್ಥಿತರಿದ್ದರು.

ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಸಂಯುಕ್ತ ಸಹಕಾರಿಯ ಕಾರ್ಯಕ್ರಮಗಳ ಬಗ್ಗೆ ಸಂಯುಕ್ತ ಸಹಕಾರಿಯ ಆಶಯವನ್ನು ಹಾಗೂ ಅವುಗಳ ಪ್ರಯೋಜನಗಳನ್ನು ವಿವರಿಸಿದರು.

ಸಂಯುಕ್ತ ಸಹಕಾರಿಯ ತಂತ್ರಜ್ಞಾನ ವಿಭಾಗದ ಅಧಿಕಾರಿ ಶ್ರೀಮತಿ ಸಿಂಧುರವರು ವಂದನಾರ್ಪಣೆಯನ್ನು ನೆರವೇರಿಸಿದರು. ಶ್ರೀಮತಿ ನವ್ಯರವರು ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು. ಕಿರಿಯ ಅಧಿಕಾರಿ ಶ್ರೀಮತಿ ಕವಿತಾರವರು ಸಮಾರೋಪ ಕಾರ್ಯಕ್ರಮದ ನಿರೂಪಣೆಯನ್ನು ನಡೆಸಿಕೊಟ್ಟರು.

ಕಾರ್ಯಕ್ರಮ ಬಹಳ ಉತ್ತಮವಾಗಿತ್ತು ಪ್ರಯೋಜನಕಾರಿಯಾಗಿತ್ತೆಂದು ಪ್ರತಿನಿಧಿಗಳು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ.

## ಪ್ರಿನ್ಸಿಪಲ್ ಚೀಫ್ ಕಮಿಷನರ್ ಆಫ್ ಇನ್ ಕಮ್ ಟ್ಯಾಕ್ಸ್ ಕರ್ನಾಟಕ & ಗೋವಾ ಸ್ಟೇಟ್ ಇವರ ಭೇಟಿ



**ಬೆಂಗಳೂರು** : ದಿನಾಂಕ 12.03.2021 ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರಾದ ಶ್ರೀ ಬಿ. ಎಸ್. ಗುಂಡೂರಾವ್ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಮಾನ್ಯ ಪ್ರಿನ್ಸಿಪಲ್ ಚೀಫ್ ಕಮಿಷನರ್ ಆಫ್ ಇನ್ ಕಮ್ ಟ್ಯಾಕ್ಸ್ ಕರ್ನಾಟಕ & ಗೋವಾ ಸ್ಟೇಟ್ ಹಾಗೂ ಪ್ರಿನ್ಸಿಪಾಲ್ ಕಮಿಷನರ್, ಇನ್ಕಮ್ ಟ್ಯಾಕ್ಸ್, ಇನ್ನಿತರ ಹಿರಿಯ ಅಧಿಕಾರಿಗಳನ್ನು ಭೇಟಿಯಾಗಿ ಮಾನ್ಯ ಗೌರವ ಉಚ್ಚ ನ್ಯಾಯಾಲಯ ಬೆಂಗಳೂರು, ಸೌಹಾರ್ದ ಸಹಕಾರಿಗಳು ಕೂಡ ಸಹಕಾರಿ ಸಂಘಗಳು ಯೆಂದು ತೀರ್ಪು ನೀಡಿದ ನಂತರದಲ್ಲೂ ಆದಾಯ ತೆರಿಗೆ ಇಲಾಖೆಯಿಂದ ಸಹಕಾರಿಗಳಿಗೆ ನೋಟೀಸ್, ಆದೇಶ ಮತ್ತು ಸಹಕಾರಿಯ ಬ್ಯಾಂಕ್ ಖಾತೆಯನ್ನು ಫ್ರೀಜ್ ಗೊಳ್ಳುತ್ತಿದ್ದು ಇದರ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ನಂತರ ಸದರಿ ವಿಷಯದ ಕುರಿತು ಮೇಲ್ಮನವಿಯಲ್ಲಿ ಇರುವುದರಿಂದ ತೀರ್ಪು ಬರುವವರೆಗೂ ಸಹಕಾರಿಗಳು ಯಾವುದೇ ರೀತಿಯ ಭಯಪಡುವ ಅಗತ್ಯವಿಲ್ಲ ಎಂದು ಹಾಗೂ ಪ್ರಸ್ತುತ ಪಾವತಿ ಮಾಡುವ ಅವಶ್ಯಕತೆ ಇರುವುದಿಲ್ಲವೆಂದು ಅಧಿಕಾರಿಗಳು ಸ್ಪಷ್ಟನೆ ನೀಡಿರುತ್ತಾರೆ.

## ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆ



**ಬಾಗಲಕೋಟ** : ದಿನಾಂಕ 02 ಮಾರ್ಚ 2021 ರಂದು ಬಾಗಲಕೋಟ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಬಾಗಲಕೋಟ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಬಾಗಲಕೋಟ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಮತ್ತು ಉದ್ಘಾಟಕರಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ ಇವರು ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ಉಪನಿಬಂಧಕರಾದ ಶ್ರೀ ಕಲ್ಲಪ್ಪ ಓಬಣ್ಣವರ ಇವರು ಉಪಸ್ಥಿತರಿದ್ದರು. ಸಭೆಯಲ್ಲಿ ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರಿ ಶ್ರೀಕಾಂತ್ ಬರುವೆ ಹಾಗೂ ದಾವಾ ದಾಖಲಾತಿ ವಿಷಯದ ಕುರಿತು ಶ್ರೀ ರಾಚಯ್ಯಾ ಹಿರೇಮಠ ಇವರು ಉಪನ್ಯಾಸ ನೀಡಿದರು. ಸಭೆಯಲ್ಲಿ 210 ಸಹಕಾರಿಗಳಿಂದ 250 ಪ್ರತಿನಿಧಿಗಳು ಭಾಗವಹಿಸಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ.ಹೆಚ್ ಸಭೆಯನ್ನು ನಡೆಸಿದರು.

**ಬೆಂಗಳೂರು** : ದಿನಾಂಕ 05.03.2021 ರಂದು ಬೆಂಗಳೂರು ನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ಮುಖ್ಯ ಕಾರ್ಯನಿರ್ವಾಹಕರ ಕರ್ತವ್ಯಗಳು ಮತ್ತು ಆರ್ಥಿಕ ಸಬಲತೆಯ ಮಾನದಂಡಗಳು" ಕುರಿತು ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಬೆಂಗಳೂರು ನಗರದ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವ್ ರವರು ನೆರವೇರಿಸಿದರು. ಆರ್ಥಿಕ ಸಬಲತೆಯ ಮಾನದಂಡಗಳ ವಿಷಯದ ಕುರಿತು ಬೆಂಗಳೂರು ನಗರದ (2&3ನೇ ವಲಯ) ಹಾಗೂ ರಾಮನಗರ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್ ರವರು ಉಪನ್ಯಾಸ ನೀಡಿದರು. ಮುಖ್ಯ ಕಾರ್ಯನಿರ್ವಾಹಕರ ಕರ್ತವ್ಯಗಳ ವಿಷಯದ ಕುರಿತು ಬೆಂಗಳೂರು ನಗರದ (1&4ನೇ ವಲಯ) ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಮ್. ರವರು ಉಪನ್ಯಾಸ ನೀಡಿದರು. ಸಭೆಯಲ್ಲಿ 105 ಸೌಹಾರ್ದ ಸಹಕಾರಿಗಳಿಂದ 108 ಪ್ರತಿನಿಧಿಗಳು ಭಾಗವಹಿಸಿದ್ದರು.

**ತುಮಕೂರು** : ದಿನಾಂಕ 23.03.2021 ರಂದು ತುಮಕೂರು ಜಿಲ್ಲೆಯ ಪಾವಗಡ, ಮಧುಗಿರಿ, ಶಿರಾ, ಹಾಗೂ ಕೊರಟಗೆರೆ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಶ್ರೀ ಸಿದ್ಧೇಶ್ವರ ಸಮುದಾಯ ಭವನ, ಕೊರಟಗೆರೆ ಇಲ್ಲಿ ಆಯೋಜಿಸಲಾಗಿತ್ತು. ಸಭೆಯಲ್ಲಿ ಶ್ರೀ ಕುಶಾಲ್ ಹೆಚ್.ಎಮ್, ಜಿಲ್ಲಾ ಸಂಯೋಜಕರು ತುಮಕೂರು ಜಿಲ್ಲೆ, ಇವರು ಉಪಸ್ಥಿತರಿದ್ದು ಅಗತ್ಯ ಮಾಹಿತಿ ನೀಡಿದರು. 20 ಸೌಹಾರ್ದ ಸಹಕಾರಿಗಳಿಂದ 30 ಪ್ರತಿನಿಧಿಗಳು ಭಾಗವಹಿಸಿದ್ದರು.

# ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರಿಯೆಗಳ ಕುರಿತು ತರಬೇತಿ ಕಾರ್ಯಕ್ರಮಗಳು

## ಸಹಕಾರಿಯ ಅಭಿವೃದ್ಧಿಗೆ ಗುಣಮಟ್ಟದ ಸಾಲ ನೀಡಲು ಗುರುನಾಥ ಜ್ಯಾಂತಿಕರ ಕರೆ.



**ಬೀದರ :** ದಿನಾಂಕ 10.03.2021ರಂದು ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗಾಗಿ /ಮುಖ್ಯಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು ಶಾರದ ರೋಟಶೆಟ್, ಮಾರುತಿ ಶೋರೂಮ್ ಹತ್ತಿರ, ಬೀದರನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರರವರು ನೇರವೇರಿಸಿದರು. ಅಧ್ಯಕ್ಷತೆಯನ್ನು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಪ್ರೋ. ಹಾವಗಿರಾವ್ ಮೈಲಾರೆರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಗೋಪಾಲ ಚವ್ಹಾಣ ಜಂಟಿ ನಿಬಂಧಕರು ಕಲಬುರಗಿ ಪ್ರಾಂತ, ರಾಯಚೂರು ಹಾಗೂ ಶ್ರೀ ಮಹಾದೇವ ಸ್ವಾಮಿ, ಮಾನ್ಯ ಉಪ ನಿರ್ದೇಶಕರು ಲೆಕ್ಕಪರಿಶೋಧನಾ ಇಲಾಖೆ ಹಾಗೂ ಸಹಕಾರಿಗಳ ಚುನಾವಣಾಧಿಕಾರಿಗಳು ಬೀದರ. ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ಇವರು ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಶ್ರೀಧರ, ಸಹ ಪ್ರಧಾನ ವ್ಯವಸ್ಥಾಕರು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ ನ್ಯಾಯಾಲಯ, ಬೆಂಗಳೂರು ಇವರು ಆಗಮಿಸಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರಿಯೆಯ ಕುರಿತು ಉಪನ್ಯಾಸ ನೀಡಿದರು. ಸೌಹಾರ್ದ ಸಹಕಾರಿಗಳಿಂದ 96 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



**ಯಾದಗಿರಿ ಜಿಲ್ಲೆ :** ದಿನಾಂಕ 20.03.2021 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿಯ ವತಿಯಿಂದ ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಮುಖ್ಯ ಕಾರ್ಯನಿರ್ವಾಹಕರುಗಳಿಗೆ ದಾವಾ ದಾಖಲಾತಿ ಸಾಲ ವಸೂಲಾತಿ ಪ್ರಕ್ರಿಯೆಯ ಕುರಿತು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳ ವಾರ್ಷಿಕ ಸಭೆಯನ್ನು ಶ್ರೀ ಹರಿ ಪ್ಯಾರಾಮೆಡಿಕಲ್ ಕಾಲೇಜ್, ಚಾಮಾ ಬಿಲ್ಡಿಂಗ್, ಸಹಕಾರಿ ಜೂನಿಯರ್ ಕಾಲೇಜ್ ಎದುರುಗಡೆ, ಯಾದಗಿರಿ ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವ್ಹಿ.ಟಿ ಪಾಟೀಲರವರು ಉದ್ಘಾಟಿಸಿದರು. ವೇದಿಕೆಯ ಮೇಲೆ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ, ರಾಚೋಟಿ ವೀರಣ್ಣ ಸೌಹಾರ್ದ ಸಹಕಾರಿ ನಿ., ಯಾದಗಿರ ಇದರ ನಿರ್ದೇಶಕರಾದ ಶ್ರೀ ಶಿವನಗೌಡ ಪಾಟೀಲ, ಶಹಪೂರ ಪಟ್ಟಣ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುಧಿರಕುಮಾರ ಚಿಂಚೋಳಿ, ರಾಚೋಟಿ ವೀರಣ್ಣ ಟ್ರಸ್ಟ ಕಾರ್ಯದರ್ಶಿ ಶ್ರೀ ಚಂದ್ರಶೇಖರ, ಈ ಸಭೆಗೆ ಸಂಪನ್ಮೂಲ ವ್ಯಕ್ತಿಯಾದ ಶ್ರೀ ಶ್ರೀಧರ ಸಹಾಯಕರು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ ನ್ಯಾಯಾಲಯ, ಬೆಂಗಳೂರು ಮತ್ತು ಜಿಲ್ಲಾ ಸಂಯೋಜಕರಾದ ವೀರಶಟ್ಟಿ ಕಾಮಣ್ಣಾ ಉಪಸ್ಥಿರಿದ್ದರು. ಕಾರ್ಯಕ್ರಮದಲ್ಲಿ 36 ಸಹಕಾರಿಗಳ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

## ಕ್ಲಸ್ಟರ್ ತರಬೇತಿ ಕಾರ್ಯಕ್ರಮ

**ಚಿಕ್ಕಬಳ್ಳಾಪುರ :** ದಿನಾಂಕ 20.03.2021 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಚಿಕ್ಕಬಳ್ಳಾಪುರ ಸರ್ಕಾರಿ ನೌಕರರ ಭವನ, ಕೋರ್ಟ್ ಸರ್ಕಲ್, ಚಿಕ್ಕಬಳ್ಳಾಪುರ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಉಪನ್ಯಾಸಕರಾಗಿ ಶ್ರೀ ಉಮೇಶ್ ಎ.ಎಸ್, ಜಿಲ್ಲಾ ಸಂಯೋಜಕರು, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆ, ಇವರು ಉಪಸ್ಥಿತರಿದ್ದು ಅಗತ್ಯ ಮಾಹಿತಿ ನೀಡಿದರು. 18 ಸೌಹಾರ್ದ ಸಹಕಾರಿಗಳಿಂದ 20 ಪ್ರತಿನಿಧಿಗಳು ಭಾಗವಹಿಸಿದ್ದರು.



**ಚಾಮರಾಜನಗರ** : ದಿನಾಂಕ 16.03.2021ರಂದು ಚಾಮರಾಜನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯಲ್ಲಿ "ಗುಣಾತ್ಮಕ ಸಾಲಗಳು ಮತ್ತು ಸಾಲ ವಸೂಲಾತಿ ಕ್ರಮಗಳು ಹಾಗೂ ದಾವಾ ದಾಖಲಾತಿ ವಿಧಾನಗಳು" ವಿಷಯದ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 15 ಸೌಹಾರ್ದ ಸಹಕಾರಿಗಳಿಂದ 22 ಪ್ರತಿನಿಧಿಗಳು ಭಾಗವಹಿಸಿದ್ದರು.

ತರಬೇತಿಯ ಪ್ರಾರಂಭದಲ್ಲಿ ಸ್ವಾಗತ ಮತ್ತು ಪರಿಚಯವನ್ನು ಶ್ರೀ ಶಿವಕುಮಾರ. ಆರ್, ಸಿಇಓ, ನವ್ಯ ಕರ್ನಾಟಕ ವಿವಿಧ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇವರು ನಡೆಸಿಕೊಟ್ಟರು. ಶ್ರೀ ಹೆಚ್.ಎನ್ ರಮೇಶ್, ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಚಾಮರಾಜನಗರ ತರಬೇತಿಯ ಉದ್ಘಾಟನೆಯನ್ನು ಮಾಡಿದರು, ಶ್ರೀಮತಿ ಮಂಗಳಮ್ಮ, ನಿರ್ದೇಶಕರು, ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರಾಸ್ತಾವಿಕವನ್ನು ಶ್ರೀ ಶಿವಕುಮಾರ್ ಬಿರಾದರ್, ಪ್ರಾಂತೀಯ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಮೈಸೂರು ಇವರು ಸಂಯುಕ್ತ ಸಹಕಾರಿಯ ತರಬೇತಿ/ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡಿದರು. "ಗುಣಾತ್ಮಕ ಸಾಲಗಳು ಮತ್ತು ಸಾಲ ವಸೂಲಾತಿ ಕ್ರಮಗಳು ಹಾಗೂ ದಾವಾ ದಾಖಲಾತಿ ವಿಧಾನಗಳು" ವಿಷಯದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಜಗದೀಶ್ ಹೆಬ್ಬಾರ್, ಉಪಾಧ್ಯಕ್ಷರು, ಮೈಸೂರು, ಮಂಡ್ಯ ಮತ್ತು ಮಡಿಕೇರಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ, ಮೈಸೂರು ಇವರು ಮುಖ್ಯಕಾರ್ಯನಿರ್ವಾಹಕರು ಸದಸ್ಯರಿಗೆ ಸಾಲವನ್ನು ಬಿಡುಗಡೆ ಮಾಡುವ ಸಂದರ್ಭ, ಸಾಲ ವಸೂಲಾತಿ ಕ್ರಮಗಳು ಹಾಗೂ ದಾವಾ ದಾಖಲಾತಿ ಸಮಯದಲ್ಲಿ ಶಾಸನಾತ್ಮಕವಾಗಿ/ಕಡ್ಡಾಯವಾಗಿ ಮಾಡಲೇ ಬೇಕಾದ ಕಾರ್ಯಗಳ ಕುರಿತು ವಿಸ್ತಾರವಾದ ಮಾಹಿತಿಯನ್ನು ನೀಡಿ ನಂತರದಲ್ಲಿ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದರು.

ಕು. ನಾಗಪೂಜಾ, ಸಿಇಓ, ಶ್ರೀ ಮುಪ್ಪಿನ ಷಡಕ್ಷರದೇವ ಸೌಹಾರ್ದ ಸಹಕಾರಿ ನಿ., ಯಳಂದೂರು ಇವರು ತರಬೇತಿಯ ನಿರೂಪಣೆ ಮಾಡಿದರು. ಪ್ರಾರ್ಥನೆ ಶ್ರೀ ಪದ್ಮನಾಭ, ಸಿಇಓ, ರೇನಾ ವಿವಿಧ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಹಾಡಿದರು. ತರಬೇತಿಯ ಕೊನೆಯಲ್ಲಿ ವಂದನಾರ್ಪಣೆಯನ್ನು ಶ್ರೀ ಸಂಕೀರ್ತನ್, ಸಿಇಓ, ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಇವರು ಮಾಡಿದರು.

**ಚಿಕ್ಕಮಗಳೂರು** : ದಿನಾಂಕ 16.03.2021 ರಂದು ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆ ಮತ್ತು ತರಬೇತಿ ಕಾರ್ಯಕ್ರಮವನ್ನು ಶ್ರೀ ವಾಸವಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ಚಿಕ್ಕಮಗಳೂರು ಇಲ್ಲಿ ಆಯೋಜಿಸಲಾಗಿದ್ದು ಸದರಿ ಕಾರ್ಯಕ್ರಮಕ್ಕೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಶ್ರೀ ಲಕ್ಷ್ಮೀನಾರಾಯಣ ದೀಪ ಬೆಳಗುವ ಮುಖಾಂತರ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು ಸದರಿ ಕಾರ್ಯಕ್ರಮದಲ್ಲಿ ಶ್ರೀ ದರ್ಶನ್ ಮತ್ತು ಶ್ರೀ ಶ್ರೀಧರ್ ದಾವಾ ಪಂಚಾಯಿತಿ ನ್ಯಾಯಾಲಯ ಬೆಂಗಳೂರು ಇವರುಗಳು ದಾವಾ ದಾಖಲಾತಿ ಮತ್ತು ಅಮಲ್ಜಾರಿ ಪ್ರಕ್ರಿಯೆಗಳ ಬಗ್ಗೆ ಉಪನ್ಯಾಸ ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಚಿಕ್ಕಮಗಳೂರು ಜಿಲ್ಲೆಯ 34 ಸೌಹಾರ್ದ ಸಹಕಾರಿಗಳಿಂದ 20 ಪ್ರತಿನಿಧಿಗಳು ಭಾಗವಹಿಸಿದ್ದರು. ನಿರೂಪಣೆ ಶ್ರೀ ಸಂತೋಷ್ ಕುಮಾರ್ ಸ್ವಾಗತ ಶ್ರೀ ರಘುನಂದನ್ ಹಾಗೂ ವಂದನಾರ್ಪಣೆ ಶ್ರೀ ಚಂದನ್ ಕುಮಾರ್ ಮಾಡಿದರು.

**ಉಡುಪಿ** : ಉಡುಪಿ ಜಿಲ್ಲೆಯ ಕುಂದಾಪುರ ಹಾಗೂ ಬೈಂದೂರು ತಾಲ್ಲೂಕಿನ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 16.03.2021 ರಂದು ದಾವಾ ದಾಖಲಾತಿ ಪ್ರಕ್ರಿಯೆಗಳು ಮತ್ತು ಸಂಯುಕ್ತ ಸಹಾಕಾರಿಯ ಸುತ್ತೋಲೆಗಳು ಈ ವಿಚಾರವಾಗಿ ಕಾರ್ಯಗಾರವನ್ನು ಬೆಳಿಗ್ಗೆ 10:30ಗಂಟೆಗೆ ಹೋಟೆಲ್ ಶರೋನ್, ರಾಷ್ಟ್ರೀಯ ಹೆದ್ದಾರಿ-66, ಶಾಸ್ತ್ರೀ ಸರ್ಕಲ್ ಎದುರುಗಡೆ, ಕುಂದಾಪುರ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಗೆ 32 ಸೌಹಾರ್ದ ಸಹಕಾರಿಗಳಿಂದ 37 ಪ್ರತಿನಿಧಿಗಳು ಭಾಗವಹಿಸಿದ್ದರು. ದಾವಾ ದಾಖಲಾತಿ ಪ್ರಕ್ರಿಯೆಗಳು ಮತ್ತು ಅಮಲ್ಜಾರಿ ಪ್ರಕ್ರಿಯೆಗಳ ಕುರಿತು ವಕೀಲರಾದ ಶ್ರೀ ವಸಂತ್ ಅಡ್ಯಾಂತಯಾರವರು ಉಪನ್ಯಾಸ ನೀಡಿದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಸುತ್ತೋಲೆಗಳ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ಇವರು ತಿಳಿಸಿದರು.

ಉಡುಪಿ ಜಿಲ್ಲೆಯ ಕಾರ್ಕಳ ಹಾಗೂ ಕಾಪು ತಾಲ್ಲೂಕಿನ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 23.03.2021 ರಂದು ದಾವಾ ದಾಖಲಾತಿ ಪ್ರಕ್ರಿಯೆಗಳು ಮತ್ತು ಸಂಯುಕ್ತ ಸಹಾಕಾರಿಯ ಸುತ್ತೋಲೆಗಳು ಈ ವಿಚಾರವಾಗಿ ಕಾರ್ಯಗಾರವನ್ನು ಬೆಳಿಗ್ಗೆ 10:30ಗಂಟೆಗೆ ಶ್ರೀ ಬಾಹುಬಲಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮಹಾವೀರ ಸಂಕೀರ್ಣ, ದಾನಾಶಾಲೆ, ಕಾರ್ಕಳ, ಮತ್ತು ಮಧ್ಯಾಹ್ನ 2:30ಕ್ಕೆ ಭಾರತಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.,, 1ನೇ ಮಹಡಿ, ಜಾಫರ್ ಟವರ್ಸ್, ಪೋಲೀಸ್ ವೃತ್ತ ನಿರೀಕ್ಷಕರ ಕಛೇರಿ ಬಳಿ, ಕಾಪು, ಇಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಗೆ ತಾಲ್ಲೂಕಿನ ಎಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು. ದಾವಾ ದಾಖಲಾತಿ ಪ್ರಕ್ರಿಯೆಗಳು ಮತ್ತು ಅಮಲ್ಜಾರಿ ಪ್ರಕ್ರಿಯೆಗಳ ಕುರಿತು ವಕೀಲರಾದ ಶ್ರೀ ವಸಂತ್ ಅಡ್ಯಾಂತಯಾರವರು ಉಪನ್ಯಾಸ ನೀಡಿದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಸುತ್ತೋಲೆಗಳ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ಇವರು ತಿಳಿಸಿದರು.



**ಶಿವಮೊಗ್ಗ :** ದಿನಾಂಕ 07.03.2021 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಹಾಗೂ ಅಮೃತ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಸಂಯುಕ್ತಾಶ್ರಯದಲ್ಲಿ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಗರ್ತಿಕೆರೆ ಗ್ರಾಮದ ಸುತ್ತಮುತ್ತಲಿನ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ "ಹಣಕಾಸು ನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ನಿರ್ದೇಶಕರ ಜವಬ್ದಾರಿ, ಕರ್ತವ್ಯಗಳನ್ನು ಆರೋಗ್ಯಕರವಾಗಿ ಮುನ್ನಡೆಸಲು ಸಮಾಜದೊಂದಿಗೆ ನಿರ್ದೇಶಕರ ಪಾತ್ರಗಳು" ವಿಷಯದ ಕುರಿತು ತರಬೇತಿ ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಹೆಚ್. ಎನ್. ಶಂಕರಮೂರ್ತಿ, ಅಧ್ಯಕ್ಷರು, ಅಮೃತ ಸೌಹಾರ್ದ ಸಹಕಾರಿ ನಿ,. ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಹಾಗೂ ಶ್ರೀ ಮಹಾಬಲಗಿರಿ ರವರು ಭಾಗವಹಿಸಿದ್ದರು. ಶಿವಮೊಗ್ಗ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ಉಪಸ್ಥಿತರಿದ್ದರು. 09 ಸೌಹಾರ್ದ ಸಹಕಾರಿಗಳಿಂದ 46 ನಿರ್ದೇಶಕರುಗಳು ಭಾಗವಹಿಸಿದ್ದರು.

---

**ಕೋಲಾರ :** : ದಿನಾಂಕ 18.03.2021 ರಂದು ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಕ್ಲಸ್ಟರ್ ತರಬೇತಿಯನ್ನು ಸೌಖ್ಯ ಸಮೃದ್ಧಿ ಸೌಹಾರ್ದ ಸಹಕಾರಿ ನಿ,. ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಉಪನ್ಯಾಸಕರಾಗಿ ಶ್ರೀ ಉಮೇಶ್ ಎ.ಎಸ್ ಜಿಲ್ಲಾ ಸಂಯೋಜಕರು, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆ, ಇವರು ಉಪಸ್ಥಿತರಿದ್ದು ಅಗತ್ಯ ಮಾಹಿತಿ ನೀಡಿದರು. 14 ಸೌಹಾರ್ದ ಸಹಕಾರಿಗಳಿಂದ 17 ಪ್ರತಿನಿಧಿಗಳು ಭಾಗವಹಿಸಿದ್ದರು.

---

**ರಾಮನಗರ :** ದಿನಾಂಕ 09.03.2021 ರಂದು ರಾಮನಗರ ನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ಮುಖ್ಯ ಕಾರ್ಯನಿರ್ವಾಹಕರ ಕರ್ತವ್ಯಗಳು ಮತ್ತು ಆರ್ಥಿಕ ಸಬಲತೆಯ ಮಾನದಂಡಗಳು" ವಿಷಯಗಳ ಕುರಿತು ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಡಿ. ದೇವರಾಜು ಅರಸು ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ, ರಾಮನಗರ ಇಲ್ಲಿ ಆಯೋಜಿಸಲಾಗಿತ್ತು. ರಾಮನಗರ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ. ಎಮ್. ರವರು ಸದರಿ ವಿಷಯಗಳ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 10 ಸೌಹಾರ್ದ ಸಹಕಾರಿಗಳಿಂದ 11 ಜನ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.

---

## ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಸಮಾಲೋಚನಾ ಸಭೆ

**ಮಂಗಳೂರು :** ದಕ್ಷಿಣ ಕನ್ನಡ ಜಿಲ್ಲೆಯ ನಿರಂತರ ಮೂರು ವರ್ಷಕ್ಕಿಂತ ಹೆಚ್ಚಿನ ನಷ್ಟದಲ್ಲಿರುವ 09 ಸೌಹಾರ್ದ ಸಹಕಾರಿಗಳಿಗಾಗಿ ದಿನಾಂಕ 27.03.2021ರಂದು ಮಂಗಳೂರಿನ ಜ್ಯೋತಿ ಸರ್ಕಲ್ ಬಳಿಯ ಹೋಟೆಲ್ ವುಡ್‌ಲ್ಯಾಂಡ್ಸ್‌ನಲ್ಲಿ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಮತ್ತು ವೃತ್ತಿಪರ ನಿರ್ದೇಶಕರಾದ ಶ್ರೀ ಬೋಳ ಸದಾಶಿವ ಶೆಟ್ಟಿ, ದಕ್ಷಿಣ ಕನ್ನಡ ಒಕ್ಕೂಟ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎ.ಸುರೇಶ್ ರೈ ಇವರುಗಳು ನಡೆಸಿಕೊಟ್ಟರು. ಸದರಿ 09 ಸೌಹಾರ್ದ ಸಹಕಾರಿಗಳ ಪೈಕಿ 06 ಸೌಹಾರ್ದ ಸಹಕಾರಿಗಳಿಂದ 12 ಜನ ಪ್ರತಿನಿಧಿಗಳು ಭಾಗವಹಿಸಿದರು

---

## ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ 3ನೇ ತಂಡದ 2ನೇ ಸಂಪರ್ಕ ವರ್ಗದ ತರಗತಿಗಳನ್ನು ಆನ್‌ಲೈನ್ ನಲ್ಲಿ ಮಾಡುವ ಕುರಿತು.

ರಾಜ್ಯದಲ್ಲಿ ಕೋರೋನಾ 2ನೇ ಅಲೆ ದಿನೆ ದಿನೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರಕಾರವು ಕೋರೋನಾ ನಿಯಂತ್ರಣಕ್ಕಾಗಿ ಕಟ್ಟುನಿಟ್ಟಿನ ಮಾರ್ಗದರ್ಶಿಗಳನ್ನು ಪಾಲಿಸಲು ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಸಹಕಾರ ಹಾಗೂ ಬ್ಯಾಂಕಿಂಗ ಮೆನೇಜಮೆಂಟ ಡಿಪ್ಲೋಮಾ ಕೋರ್ಸನ 2ನೇ ಕಂಟ್ಯಾಕ್ಟ ತರಗತಿಗಳನ್ನು ಆನ್‌ಲೈನ್ ನಲ್ಲಿ ನಡೆಸಲು ಉದ್ದೇಶಿಸಿದೆ.

ಒಂದನೇ ಹಂತದಲ್ಲಿ ಬೆಂಗಳೂರು, ಬೆಳಗಾವಿ, ಅಂಕೋಲಾ ಹಾಗೂ ಮುಧೋಳ ಕೇಂದ್ರದ ಅಭ್ಯರ್ಥಿಗಳು ದಿನಾಂಕ 10, 11 ಏಪ್ರಿಲ್ 2021 ರಂದು ಭಾಗವಹಿಸುವುದು ಹಾಗೂ 2ನೇ ಹಂತದಲ್ಲಿ ಶಿವಮೊಗ್ಗ, ಉಡುಪಿ, ಎಕ್ಸಂಬ, ಹಾಗೂ ಗಂಗಾವತಿ ಕೇಂದ್ರದ ಅಭ್ಯರ್ಥಿಗಳು ದಿನಾಂಕ 24, 25 ಏಪ್ರಿಲ್ 2021 ರಂದು ಭಾಗವಹಿಸುವುದು.

## ಕಾರ್ಯನಿರತ/ಹವ್ಯಾಸಿ/ನುರಿತ ಪತ್ರಕರ್ತರಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಉತ್ತಮ ಲೇಖನಗಳಿಗೆ ಆಹ್ವಾನ

ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಗುಣಾತ್ಮಕ ಹಾಗೂ ವಿಮರ್ಶಾತ್ಮಕ ಲೇಖನಗಳಿಗೆ ಹಾಗೂ ಸಹಕಾರಿಗಳ ಯಶೋಗಾಥೆಗಳನ್ನು ದಿನ ಪತ್ರಿಕೆಗಳಲ್ಲಿ ಪ್ರಕಟವಾಗುವಂತೆ ಲೇಖನಗಳನ್ನು ಸಿದ್ಧಪಡಿಸಿ ಪ್ರತಿ ತಿಂಗಳಿಗೆ ಒಂದು ಲೇಖನದಂತೆ ಕನ್ನಡ ದಿನ ಪತ್ರಿಕೆಗಳಲ್ಲಿ ಅಥವಾ ಇಂಗ್ಲೀಷ ಪತ್ರಿಕೆಗಳಲ್ಲಿ ಪ್ರಕಟವಾಗುವಂತೆ ಕ್ರಮವಿಡುವ ಪತ್ರಕರ್ತರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸ್ವಾಗತಿಸುತ್ತದೆ.

ಆಸಕ್ತ ಪತ್ರಕರ್ತರು/ಲೇಖಕರು ತಮ್ಮ ಹೆಸರನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಬೆಂಗಳೂರು ಇಲ್ಲಿ ತಮ್ಮ ಹೆಸರನ್ನು ನೊಂದಾಯಿಸಿ ಕೊಳ್ಳಲು ಕೋರಿದೆ. ಈ ಕ್ಷೇತ್ರದ ಬಗ್ಗೆ ಅಧ್ಯಯನ ಮಾಡಲು ಮೂಲ ಮಾಹಿತಿಯನ್ನು ಸಂಯುಕ್ತ ಸಹಕಾರಿಯಿಂದ ಪಡೆಯಬಹುದಾಗಿದೆ. ಆಸ್ತಕರು ತಮ್ಮ ವಿವರಗಳನ್ನು ಇವರಿಗೆ ಕಳುಹಿಸುವುದು. ಇ. ಮೇಲ್ ಐ.ಡಿ.ಗೂ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಶ್ರೀ ರಘುನಂದನ್ ಕೆ. ಉಪಪ್ರಧಾನ ವ್ಯವಸ್ಥಾಪಕರು, ಮೊ : 8884466707 ಹಾಗೂ ಶ್ರೀ ವಿ.ಜೆ ಕಾರಕೂನ್, ತರಬೇತಿ ವ್ಯವಸ್ಥಾಪಕರು ಮೊ : 8884466710 ಇವರನ್ನು ಸಂಪರ್ಕಿಸಬಹುದು.

ಅರ್ಜಿಗಳನ್ನು :

**ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ನಿರ್ಮಾಣ ಭವನ, ಡಾ. ರಾಜಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10. ದೂ : 080-23378375-80, ವೆಬ್ ತಾಣ : www.Souharda.coop, ಇ-ಮೇಲ್ : Souharda@Souharda.coop,**

## ರಾಷ್ಟ್ರೀಯ ಸಹಕಾರಿ ಯೂನಿಯನ್ ನವದೆಹಲಿ ಇವರಿಂದ ಸಹಕಾರಿ ಸಂಸ್ಥೆಗಳಿಂದ ಉತ್ಪಾದಿತ ವಸ್ತುಗಳಿಗೆ ರಾಷ್ಟ್ರೀಯ ಮಾರಾಟ ವೇದಿಕೆ

ದೇಶದ ಸಹಕಾರಿ ಸಂಸ್ಥೆಗಳ ಸದಸ್ಯರು, ಉತ್ಪಾದಿಸುವ, ಸಹಕಾರಿ ಸಂಸ್ಥೆಗಳಲ್ಲಿ ಉತ್ಪಾದನೆ ಮಾಡುವ ಅಥವಾ ಸಹಕಾರಿ ಸಂಘಗಳು ಬೇರೆ ಸಂಸ್ಥೆಗಳೊಡನೆ ಕೂಡಿ ಉತ್ಪಾದಿಸುವ ವಸ್ತುಗಳಿಗೆ ಯೋಗ್ಯ ಮಾರಾಟ ವ್ಯವಸ್ಥೆಯನ್ನು ಒದಗಿಸುವ ಸಲುವಾಗಿ ರಾಷ್ಟ್ರೀಯ ಸಹಕಾರ ಯೂನಿಯನ್ ನವದೆಹಲಿ ಯವರು ಸಹಕಾರ ಸಂಸ್ಥೆಗಳಿಂದ ಉತ್ಪಾದಿತ ವಸ್ತುಗಳ ಮಾರಾಟ ವೇದಿಕೆಯನ್ನು ಪ್ರಾರಂಭಿಸಿದ್ದಾರೆ. ವಸ್ತುಗಳ ಉತ್ಪಾದನೆ ಮಾಡುವ ಸಹಕಾರ ಸಂಘಗಳು, ಸೌಹಾರ್ದ ಸಹಕಾರಿಗಳು ರಾಷ್ಟ್ರೀಯ ಸಹಕಾರ ಯೂನಿಯನ್ ಈ ಕೆಳಗೆ ನೀಡಿರುವ ವಿಳಾಸಕ್ಕೆ ತಮ್ಮ ವಿವರಗಳನ್ನು ಕಳುಹಿಸಿ ವ್ಯವಸ್ಥೆಯ ಪ್ರಯೋಜನ ಪಡೆಯಬಹುದಾಗಿದೆ. ವಿವರಗಳು ಕೆಳಗಿನಂತಿವೆ.

The Cooperatives in India have varieties of products that are branded at local, national and at international level also. To promote the products of the member cooperatives and their affiliates, it has been decided by NCUI to create a platform on the NCUI web page. The primary objective is to showcase the varieties of cooperative products of 'Pan India' on the platform of the apex body of cooperatives in India. This will also enable the promotion of unique cooperative products and C2C business on the sixth cooperative principle of ICA i.e. 'Cooperation among Cooperatives'.

**For this purpose, we seek the following information:**

**1. Full name of the organization (short name) 2. Brand name (if any) 3. Logo (high resolution) 4. List of the product(s) 5. Web link of the product / price 6. For product / price / business enquiry, the details of contact person - name, mobile/whatsapp, e-mail etc.**

The above information will be displayed in a structured format on the menu bar titled 'Cooperative Products of India' on the top of NCUI web page. Please feel free to use the attach table to provide above said information. We look forward to receiving the information from your organisation and / or your affiliate members at the earliest to enable us to upload the same on the NCUI webpage. If you require any further information/clarification, you may please contact Shri Chandan Singh Assistant Director (M 9810765703) and Shri John Minton (M : 9312597853).

**Ritesh Dey, Director National Cooperative Union of India (NCUI), 3, Siri Institutional Area, August Kranti Marg, New Delhi - 110 016, INDIA, Mobile: +91-9818019750, Landphone : +91-11-41668338 (Direct)**

## ಇ-ಸ್ಟಾಂಪ್ ಎಸಿಸಿ ನಡೆಸುತ್ತಿರುವ ಸಹಕಾರಿಗಳ ಗಮನಕ್ಕೆ,

1. 31 ಮಾರ್ಚ್ 2021 ಆರ್ಥಿಕ ವರ್ಷಾಂತ್ಯಕ್ಕೆ ಇ–ಸ್ಟಾಂಪ್ ವ್ಯವಹಾರ ನಡೆಸುತ್ತಿರುವ ಎಲ್ಲ ಸಹಕಾರಿಗಳು, ತಮ್ಮ ಎಸಿಸಿಗಳ ವರ್ಷಾಂತ್ಯದ ಅಂತಿಮ ಶಿಲ್ಕಿನ ದೃಢೀಕರಣ ಪತ್ರವನ್ನು ನೀಡುವುದು.
2. ನಿರಂತರವಾಗಿ ನೆಗೆಟಿವ್ ಶಿಲ್ಕು ಹೊಂದಿದ ಇ–ಸ್ಟಾಂಪ್ ಎಸಿಸಿಗಳ ಐಡಿಗಳು, ಅಥವಾ ಸತತ 6 ತಿಂಗಳ ಅವಧಿಗೆ ಬಳಸದ ಐಡಿಗಳು ಸ್ವಯಂ ನಿಷ್ಕ್ರಿಯಗೊಳ್ಳುತ್ತವೆ.
3. ಹೊಸದಾಗಿ ಇ–ಸ್ಟಾಂಪ್ ಪ್ರಾರಂಭಿಸಲು ಇಚ್ಛಿಸುವ ಸಹಕಾರಿಗಳು, ತಮ್ಮ ಸಹಕಾರಿಯ ಮನವಿ ಪತ್ರ, ಸಹಕಾರಿಯ ಆಡಳಿತ ಮಂಡಲಿಯ ನಿರ್ಣಯವನ್ನು ಸಂಯುಕ್ತ ಸಹಕಾರಿಗೆ ಕಳುಹಿಸಿದಲ್ಲಿ, ಅಗತ್ಯವಿರುವ ಸ್ಥಳಗಳಲ್ಲಿ ಇ–ಸ್ಟಾಂಪ್ ಎಸಿಸಿ ಕೇಂದ್ರ ಪ್ರಾರಂಭಿಸಲು ಅನುಮತಿಯನ್ನು ನೀಡಲಾಗುವುದು.
4. ಒಮ್ಮೆ ಮುದ್ರಿಸಿದ ಇ–ಸ್ಟಾಂಪ್ ಪತ್ರದಲ್ಲಿ ಯಾವುದೇ ರೀತಿಯ ಬದಲಾವಣೆ, ತಿದ್ದುಪಡಿ ಮಾಡಲು ಅವಕಾಶವಿಲ್ಲ.
5. ಇ–ಸ್ಟಾಂಪ್ ವ್ಯವಹಾರ ನಡೆಸುವ ಸಹಕಾರಿಗಳು ಪಕ್ಷಗಾರರ ಹೆಸರಿನ ಸ್ಥಳದಲ್ಲಿ, ಪೂರ್ಣ ಹೆಸರಿಲ್ಲದೆ ಕೇವಲ ಶ್ರೀ/ಶ್ರೀಮಾನ್/ಶ್ರೀಮತಿ/ಬಾರೋವರ್ (Borrower) ರೀತಿಯ ಪೂರ್ವಾಕ್ಷರಗಳು, a/b/x/y/z ಎಂಬ ಯಾವುದೇ ಒಂದಕ್ಷರನ್ನು, NA (Not Applicable) ಈ ರೀತಿ ನಮೂದಿಸಿ ಇ–ಸ್ಟಾಂಪ್ ಮುದ್ರಿಸಬಾರದು.
6. ಪೂರ್ಣವಾಗಿ ಭರ್ತಿಮಾಡಿದ ಇ–ಸ್ಟಾಂಪ್ ಪಾಸ್‌ವರ್ಡ ರೀಸೆಟ್ ಅರ್ಜಿ (Password Reset form) ಮತ್ತು ಎರರ್ ರಿಪೋರ್ಟ ಅರ್ಜಿ (Error Report form) ಯನ್ನು ಸ್ಕ್ಯಾನ್ ಮಾಡಿ PDF format ನಲ್ಲಿ ಮಾತ್ರ ಸಂಯುಕ್ತ ಸಹಕಾರಿಯ estamppassword.error@souharda.coop ಈ ಇ–ಮೇಲ್ ವಿಳಾಸಕ್ಕೆ ಮಾತ್ರ ಕಳುಹಿಸುವುದು. ಅರ್ಜಿಗಳನ್ನು ಕಳುಹಿಸಿದ 1 ಗಂಟೆ ಒಳಗಾಗಿ ತಮಗೆ ಇ–ಮೇಲ್ ಮೂಲಕ ಪ್ರತ್ಯುತ್ತರ ನೀಡಲಾಗುವುದು. ಅರ್ಜಿ ಕಳುಹಿಸಿದ ಕೂಡಲೇ ಸಂಯುಕ್ತ ಸಹಕಾರಿಯ ಇ–ಸ್ಟಾಂಪ್ ವಿಭಾಗಕ್ಕೆ ಕರೆ ಮಾಡುವ ಅವಶ್ಯಕತೆ ಇರುವುದಿಲ್ಲ. ಎರರ್ ರಿಪೋರ್ಟ್ ಅರ್ಜಿಯೊಂದಿಗೆ ಪೂರ್ಣವಾಗಿ ಭರ್ತಿಮಾಡಿದ ಗ್ರಾಹಕ ಅರ್ಜಿ (Customer Application form) ಯನ್ನು ಕಡ್ಡಾಯವಾಗಿ ಲಗತ್ತಿಸಬೇಕು.
7. ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ದಿಂದ ಬರುವ ಕಮಿಷನ್ ಪಡೆದುಕೊಳ್ಳಲು ಇ–ಸ್ಟಾಂಪ್ ವ್ಯವಹಾರ ನಡೆಸುತ್ತಿರುವ ಸಹಕಾರಿಗಳು, ಸಂಯುಕ್ತ ಸಹಕಾರಿಗೆ ಇನ್‌ವಾಯ್ಸ್ ನೀಡಬೇಕು. ತಮ್ಮ ಇ–ಸ್ಟಾಂಪ್ ವ್ಯವಹಾರದ ಮೊತ್ತ, ಕಮಿಷನ್ ಮೊತ್ತ, ಜಿ.ಎಸ್.ಟಿ ಮೊತ್ತದ ಮಾಹಿತಿಯನ್ನು ಕಾಲಕಾಲಕ್ಕೆ ಪತ್ರದ ಮೂಲಕ ತಿಳಿಸಲಾಗುವುದು. ಸಹಕಾರಿಗಳು ಇನ್‌ವಾಯ್ಸ್ ಮಾದರಿ ಹಾಗೂ ಕಮಿಷನ್ ಸಂಬಂಧಿತ ಮಾಹಿತಿಯನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಿಂದ ಪಡೆಯಬಹುದು. ಇನವಾಯ್ಸ್ ನೀಡುವ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಮ್ಮ ಸಹಕಾರಿಯ ಲೆಕ್ಕಪರಿಶೋಧಕರಿಂದ ಪಡೆದುಕೊಳ್ಳುವುದು ಸೂಕ್ತ. ಈ ಅವಧಿಯಲ್ಲಿ ಈಗಾಗಲೇ ಇನವಾಯ್ಸ್ ನೀಡಿರುವ ಸಹಕಾರಿಗಳು ಇದನ್ನು ಪರಿಗಣಿಸದಿರಲು ಕೋರಿದೆ.
8. ಇ–ಸ್ಟಾಂಪ್ ಮುದ್ರಿಸುವ ಸಮಯದಲ್ಲಿ USER ಮತ್ತು Supervisor ಐಡಿ ಲಾಗ್‌ಇನ್ ಮಾಡಲು ಕಡ್ಡಾಯವಾಗಿ 2 ಪ್ರತ್ಯೇಕ ಕಂಪ್ಯೂಟರ್ ಬಳಸಲು ತಿಳಿಸಿದೆ.
9. ಇ–ಸ್ಟಾಂಪ್ ಮುದ್ರಣಕ್ಕೆ ಹೊಸದಾಗಿ ಪ್ರಿಂಟರ್ ಖರೀದಿಸಲು ಬಯಸುವ ಸಹಕಾರಿಗಳು, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ದಿಂದ ತಿಳಿಸಿರುವ Samsung SL M3320 ND, Canon - ImageCLASS LBP226dw ಪ್ರಿಂಟರ್ ಮಾತ್ರ ಖರೀದಿಸುವುದು. ಈ ಪ್ರಿಂಟರ್ ಅನ್ನು ಇ–ಸ್ಟಾಂಪ್ ಮುದ್ರಿಸಲು ಮಾತ್ರ ಬಳಸುವುದು ಹಾಗೂ ಕಡ್ಡಾಯವಾಗಿ ಆಯಾ ಪ್ರಿಂಟರ್‌ಗಳ ಒರಿಜಿನಲ್ ಕಾರ್ಟರಿಡ್ಜ್ ಮಾತ್ರ ಬಳಸುವುದು. ಸದರಿ ಪ್ರಿಂಟರ್ ಅನ್ನು ಯು.ಎಸ್.ಬಿ ಕೇಬಲ್ ಮೂಲಕ ಮಾತ್ರ Supervisor ಐಡಿ ಬಳಸುವ ಕಂಪ್ಯೂಟರ್‌ಗೆ ಸಂಪರ್ಕ ಕಲ್ಪಿಸುವುದು.
10. ಇ–ಸ್ಟಾಂಪ್ ಸಂಬಂಧಿತ ಮಾಹಿತಿಗಳಿಗೆ ಈ ಕೆಳಗಿನ ಪ್ರಮುಖ ಇ–ಮೇಲ್ ಐಡಿಗಳಿಗೆ ಇ–ಮೇಲ್ ಮಾಡಿ,

    ಎ. ಎಸಿಸಿ ಲೆಕ್ಕಗಳ ಮಾಹಿತಿ ಕೋರಿ estampaccount@souharda.coop

    ಬಿ. ಪಾಸ್‌ವರ್ಡ ರೀಸೆಟ್ ಅರ್ಜಿ ಮತ್ತು ಎರರ್ ರಿಪೋರ್ಟ ಅರ್ಜಿ ಸಲ್ಲಿಸಲು estamppassword.error@souharda.coop

    ಸಂಯುಕ್ತ ಸಹಕಾರಿಯ ದೂರವಾಣಿ ಸಂಖ್ಯೆ : 080–23378375–80

**ಕೊಪ್ಪಳ** : ಗಂಗಾ ಕಾವೇರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಹಕಾರಿ ವತಿಯಿಂದ 13ನೇ ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮಕ್ಕೆ ಉಚಿತ ಶುದ್ಧ ಕುಡಿಯುವ ನೀರಿನ ಸೇವೆಯನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಅವ್ಯವಹಾರ ಮಾಡಿರುವ ಸಹಕಾರಿಗಳ ಮೇಲೆ ಕಾನೂನು ಕ್ರಮ

**1. ಸ್ವಯಂಕೃಷಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ಕುರಿತು :**

ಸಹಕಾರಿಗೆ ಸಮಾಪನಾಧಿಕಾರಿಯಾಗಿ ಉಪನಿಬಂಧಕರು 2ನೇ ವಲಯ ನೇಮಕವಾಗಿದ್ದು ಶ್ರೀ ಎಮ್.ಜಿ.ಮುದೇನೂರುರವರ ಬದಲಾಗಿ ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, 1ನೇ ವಲಯ ಬೆಂಗಳೂರು ಇವರಿಗೆ ಮಾರ್ಪಾಡು ಆದೇಶದ ಮೂಲಕ ದಿನಾಂಕ 25.01.2021 ರಂದು ಮಾನ್ಯ ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ ಇವರು ಆದೇಶ ಮಾಡಿರುತ್ತಾರೆ ಆದರೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದ ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, 1ನೇ ವಲಯ ಬೆಂಗಳೂರು ಇವರ ಬದಲಾಗಿ ಮಾನ್ಯ ಸಹಕಾರಿಗಳ ಉಪ ನಿಬಂಧಕರು, 2ನೇ ವಲಯ, ಸಹಕಾರ ಸೌಧ. ಬೆಂಗಳೂರು ಇವರನ್ನು ಮರು ಮಾರ್ಪಾಡು ಆದೇಶದ ಮೂಲಕ ದಿನಾಂಕ 08.03.2021 ರಂದು ಮಾನ್ಯ ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ ಇವರು ಆದೇಶ ಮಾಡಿರುತ್ತಾರೆ.

**2. ಶ್ರೀ ಗುರು ಸಾರ್ವಭೌಮ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಸಹಕಾರಿಗೆ ಆಡಳಿತಾಧಿಕಾರಿ ನೇಮಕ :**

ಮೇಲ್ಕಂಡ ಸೌಹಾರ್ದ ಸಹಕಾರಿಗೆ ಗೌ॥ ಉಚ್ಚ ನ್ಯಾಯಾಲಯಾದ ದಿನಾಂಕ 26.02.2021 ರ ತೀರ್ಪಿನ ದೈನಂದಿನ ಆದೇಶದಂತೆ ಕರ್ನಾಟಕ ಸರ್ಕಾರವು “ಸರ್ಕಾರದ ಆದೇಶ ಸಂಖ್ಯೆ: ಸಿಒ 24 ಸಿಆರ್‌ಸಿ 2021 ಬೆಂಗಳೂರು ದಿನಾಂಕ 17.03.2021” ರ ಆದೇಶದ ಮೂಲಕ ಶ್ರೀ ಶ್ಯಾಮ್ ಪ್ರಸಾದ್, ಉಪ ಪ್ರಧಾನ ವ್ಯವಸ್ಥಾಪಕರು (ನಿವೃತ್ತ), ಕೆನರಾ ಬ್ಯಾಂಕ್, ಬೆಂಗಳೂರು ಇವರನ್ನು ಶ್ರೀ ಗುರು ಸಾರ್ವಭೌಮ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಸಹಕಾರಿಯ ಆಡಳಿತಾಧಿಕಾರಿಯನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

# ಠೇವಣಿದಾರರ ದೂರು ಸ್ವೀಕೃತಿಯಾದ ಸೌಹಾರ್ದ ಸಹಕಾರಿಗಳ ಪ್ರಕರಣಗಳು

**1. ವಜ್ರಗಿರಿ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪ್‌ರೇಟಿವ್ ಲಿ., ಮೈಸೂರು (ಎಮ್‌ವೈಎಸ್–0031).**

ಸಹಕಾರಿಯ ಕುರಿತು ಠೇವಣಿದಾರರ ಠೇವಣಿ ಹಣ ಮರುಪಾವತಿಸದ ಕುರಿತು ದೂರು ಸ್ವೀಕೃತಿಯಾದ ಹಿನ್ನಲೆಯಲ್ಲಿ ಸಹಕಾರಿಗೆ ಪರಿವಿಕ್ಷಣೆಯನ್ನು ನೇಮಕ ಮಾಡಲಾಗಿತ್ತು. ಸದರಿ ಪರಿವೀಕ್ಷಣಾ ವರದಿಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ಹಾಗೂ ಸಹಕಾರಿ ಉಪವಿಧಿಯನ್ನು ಉಲ್ಲಂಗಿಸಿರುವುದರಿಂದ ಮತ್ತು ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಅನಧಿಕೃತವಾಗಿ ಠೇವಣಿ ಹಣವನ್ನು ಸಂಗ್ರಹಿಸಿರುವುದು ಮತ್ತು ಠೇವಣಿದಾರರಿಗೆ ಠೇವಣಿ ಹಣ ಮರುಪಾವತಿಸದೆ ಹಣಕಾಸು ದುರುಪಯೋಗ/ಮೋಸ/ವಂಚನೆ/ನಂಬಿಕೆ ದ್ರೋಹ ಮತ್ತು ಅಧಿಕಾರ ದುರುಪಯೋಗದ ಹಿನ್ನಲೆಯಲ್ಲಿ ಹಾಗೂ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸುವಂತೆ ಮೈಸೂರು ಪ್ರಾಂತೀಯ ನಿರ್ದೇಶಕರ ಸಭೆಯಲ್ಲಿ ನಿರ್ಣಯಿಸಿದ ಹಿನ್ನಲೆಯಲ್ಲಿ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ವಿರುದ್ದ ಲಕ್ಷ್ಮೀಪುರಂ, ಪೋಲೀಸ್ ಠಾಣೆ ಮೈಸೂರುನಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ ಕ್ರಮವಿಡಲಾಗಿದೆ.

**2. ಎಸ್.ಎಸ್. ಸೌಹಾರ್ದ ಪತ್ತಿನ ಸಹಕಾರಿ ನಿ., ಚಿಕ್ಕಮಗಳೂರು (ಸಿಕೆಎಮ್–0031)**

ಸಹಕಾರಿಯ ಕುರಿತು ಠೇವಣಿದಾರರ ಠೇವಣಿ ಹಣ ಮರುಪಾವತಿಸದ ಕುರಿತು ದೂರು ಸ್ವೀಕೃತಿಯಾದ ಹಿನ್ನಲೆಯಲ್ಲಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ಹಾಗೂ ಸಹಕಾರಿ ಉಪವಿಧಿಯನ್ನು ಉಲ್ಲಂಗಿಸಿರುವುದರಿಂದ ಮತ್ತು ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಅನಧಿಕೃತವಾಗಿ ಠೇವಣಿ ಹಣವನ್ನು ಸಂಗ್ರಹಿಸಿರುವುದು ಮತ್ತು ಠೇವಣೀದಾರರಿಗೆ ಠೇವಣಿ ಹಣ ಮರುಪಾವತಿಸದೆ ಹಣಕಾಸು ದುರುಪಯೋಗ/ಮೋಸ/ವಂಚನೆ/ನಂಬಿಕೆ ದ್ರೋಹ ಮತ್ತು ಅಧಿಕಾರ ದುರುಪಯೋಗದ ಹಿನ್ನಲೆಯಲ್ಲಿ ಹಾಗೂ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರ ವಿರುದ್ದ ಕ್ರಿಮಿನಲ್ ಪ್ರಕರಣವನ್ನು ದಾಖಲಿಸುವಂತೆ ಮೈಸೂರು ಪ್ರಾಂತೀಯ ನಿರ್ದೇಶಕರ ಸಭೆಯಲ್ಲಿ ನಿರ್ಣಯಿಸಿದ ಹಿನ್ನಲೆಯಲ್ಲಿ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ವಿರುದ್ದ ಚಿಕ್ಕಮಗಳೂರು ನಗರ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಕ್ರಮವಿಡಲಾಗಿದೆ.

## ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಮೇಲೆ ಕ್ರಮ ಜರುಗಿಸಲು ವಿಶೇಷ ಕಾರ್ಯಪಡೆ ರಚನೆ

ಠೇವಣಿದಾರರಿಗೆ ವಂಚನೆ ಮಾಡಿರುವ ಸಹಕಾರಿಗಳ ವಿರುದ್ಧ ಅಗತ್ಯ ಹಾಗೂ ತ್ವರಿತ ಕ್ರಮ ತೆಗೆದುಕೊಳ್ಳಲು, ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸುವುದು, ನ್ಯಾಯಾಲಯದಲ್ಲಿ ದಾವಾ/ಅಧಿಭಾರ ಅರ್ಜಿ ದಾಖಲಿಸುವುದು ಸೇರಿದಂತೆ ಅಗತ್ಯ ತುರ್ತು ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುವಂತೆ ಹಾಗೂ ಮುಂದಿನ ದಿನಗಳಲ್ಲಿ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳು ಹುಟ್ಟದಂತೆ ನಿಗಾವಹಿಸಿ, ಕಾರ್ಯಯೋಜನೆ ರೂಪಿಸಿ ಸಹಕಾರಿಗಳನ್ನು ಸರಿಪಡಿಸುವ, ಪರಿವೀಕ್ಷಣೆ/ವಿಚಾರಣೆ ಸಂದರ್ಭದಲ್ಲಿ ಗಂಭೀರ ಹಣಕಾಸು ಅಕ್ರಮಗಳು/ಅವ್ಯವಹಾರ/ನ್ಯೂನತೆಗಳು ಇರುವ ಸಹಕಾರಿಗಳಿಗೆ ಕಾರ್ಯ ಯೋಜನೆ ರೂಪಿಸಿ ಸರಿಯಾಗುವಂತೆ ಮಾಡುವ ಉದ್ದೇಶಕ್ಕಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ವಿಶೇಷ ಕಾರ್ಯಪಡೆ (ಟಾಸ್ಕ್ ಫೋರ್ಸ್)ನ್ನು ಏಪ್ರಿಲ್ 01, 2021ರಿಂದ ಜಾರಿಯಾಗುವಂತೆ ರಚನೆ ಮಾಡಿರುತ್ತದೆ. ಈ ವಿಶೇಷ ಕಾರ್ಯಪಡೆಯು ಎರಡು ತಂಡಗಳಾಗಿ ಸದ್ಯಕ್ಕೆ ಜಾರಿಗೆ ಬರಲಿದೆ. ಬೆಂಗಳೂರು ಹಾಗೂ ಮೈಸೂರು ಪ್ರಾಂತ್ಯದ ವಿಶೇಷ ಕಾರ್ಯಪಡೆಗೆ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಇವರನ್ನು ಹಾಗೂ ಬೆಳಗಾವಿ, ಕಲಬುರ್ಗಿ ಪ್ರಾಂತ್ಯದ ವಿಶೇಷ ಕಾರ್ಯಪಡೆಗೆ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಇವರನ್ನು ನಿಯೋಜಿಸಲಾಗಿದೆ.

ಪ್ರಸ್ತುತ, ಪ್ರಾಂತೀಯ ವ್ಯವಸ್ಥಾಪಕರುಗಳು ಸಿದ್ಧಪಡಿಸಿ ಸಲ್ಲಿಸಿರುವ ಬೆಳಗಾವಿ ಪ್ರಾಂತ್ಯದ 07, ಕಲಬುರ್ಗಿ ಪ್ರಾಂತ್ಯದ 03, ಮೈಸೂರು ಪ್ರಾಂತ್ಯದ 02, ಬೆಂಗಳೂರು ಪ್ರಾಂತ್ಯದ 09 ಸೌಹಾರ್ದ ಸಹಕಾರಿಗಳ ಪಟ್ಟಿಯನ್ನು ಆಡಳಿತ ಮಂಡಳಿಯು ಅನುಮೋದಿಸಿ ಈ ವಿಶೇಷ ಕಾರ್ಯಪಡೆಗೆ ಮುಂದಿನ ಅಗತ್ಯ ಕಾರ್ಯಗಳಿಗಾಗಿ ನೀಡಿದೆ.

## ಟಾಸ್ಕ್ ಫೋರ್ಸ್ ಎಂಪೆನಲ್‌ಮೆಂಟ್‌ಗೆ ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಮೂಲಕ ರಚನೆಯಾದ, ಸೌಹಾರ್ದ ಸಹಕಾರಿಗಳ ಮೇಲೆ ನಿಯಂತ್ರಣಾಧಿಕಾರ ಹೊಂದಿರುವ ಶಾಸನಬದ್ಧ ಸಹಕಾರಿ ಸಂಸ್ಥೆಯಾಗಿದೆ. ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಮೇಲೆ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸುವ ದೃಷ್ಟಿಯಿಂದ ಟಾಸ್ಕ್ ಫೋರ್ಸ ಎಂಪೆನಲ್‌ಮೆಂಟ್ ರಚಿಸಲು ಆಡಳಿತ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಟಾಸ್ಕ್ ಫೋರ್ಸ ಕಾರ್ಯಚಟುವಟಿಕೆಗಳ ಅಗತ್ಯಕ್ಕೆ ತಕ್ಕಂತೆ ಆಯಾ ಜಿಲ್ಲೆಯಲ್ಲಿ ಲಭ್ಯವಿರುವ ಸನ್ನದು ಲೆಕ್ಕಪರಿಶೋಧಕರು, ವಕೀಲರು, ನಿವೃತ್ತ ಸಹಕಾರ ಇಲಾಖಾಧಿಕಾರಿಗಳು, ನಿವೃತ್ತ ಪೋಲೀಸ್ ಅಧಿಕಾರಿಗಳು, ನಿವೃತ್ತ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಅಧಿಕಾರಿಗಳ ಸೇವೆಯನ್ನು ಪಡೆಯಲು ಸಾಧ್ಯವಾಗುವಂತೆ ತಜ್ಞರುಗಳ ಎಂಪೆನಲ್‌ಮೆಂಟ್ ರಚಿಸಲಾಗುತ್ತಿದ್ದು, ಈ ಕೆಳಕಂಡಂತೆ ರಾಜ್ಯದ ಎಲ್ಲ ಜಿಲ್ಲೆಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

1. **ವೃತ್ತಿನಿರತ ಸನ್ನದು ಲೆಕ್ಕಪರಿಶೋಧಕರು (ಚಾರ್ಟರ್ಡ್ ಅಕೌಂಟಂಟ್)**
2. **ವೃತ್ತಿನಿರತ ವಕೀಲರು**
3. **ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ನಿವೃತ್ತ ಅಧಿಕಾರಿಗಳು.**
4. **ಸಹಕಾರ ಇಲಾಖೆಯ ನಿವೃತ್ತ ಅಧಿಕಾರಿಗಳು**
5. **ನಿವೃತ್ತ ಪೊಲೀಸ್ ಇಲಾಖಾ ಅಧಿಕಾರಿಗಳು.**

ಆಸಕ್ತರು ತಮ್ಮ ಸ್ವವಿವರ ಹಾಗೂ ಅನುಭವದ ಮಾಹಿತಿಗಳನ್ನು ಮೇಲ್ಕಾಣಿಸಿದ ವಿಳಾಸಕ್ಕೆ ದಿನಾಂಕ : 30.04.2021ರ ಒಳಗಾಗಿ ಸಲ್ಲಿಸಲು ತಿಳಿಸಿದೆ.

ಸಲ್ಲಿಕೆಯಾದ ಅರ್ಜಿಗಳನ್ನು ಪರಿಶೀಲಿಸಿ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು. ಈ ಮೇಲಿನ ಪ್ರತಿ ಹುದ್ದೆಗಳ ಅರ್ಹತಾ ವಿವರವನ್ನು www.souharda.coop ನಲ್ಲಿ ವಿವರವಾಗಿ ಪ್ರಕಟಿಸಲಾಗಿದ್ದು ಅರ್ಹತೆ ಹೊಂದಿದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ತಿಳಿಸಿದೆ.

**ದಿನಾಂಕ : 05.03.2021**
**ಸ್ಥಳ : ಬೆಂಗಳೂರು**

(ಶರಣಗೌಡ ಜಿ. ಪಾಟೀಲ)
**ವ್ಯವಸ್ಥಾಪಕ ನಿರ್ದೇಶಕ**

## ಚೆಕ್ ಬುಕ್ ನಡೆಯಲ್ಲ - ಗಮನಿಸಿ

ವಿಜಯಾ ಬ್ಯಾಂಕ್, ಓರಿಯೆಂಟಲ್ ಬ್ಯಾಂಕ್, ಯುನೈಟೆಡ್ ಬ್ಯಾಂಕ್, ದೇನಾ ಬ್ಯಾಂಕ್, ಅಲಹಾಬಾದ್ ಬ್ಯಾಂಕ್, ಕಾರ್ಪೋರೇಷನ್ ಬ್ಯಾಂಕ್, ಆಂಧ್ರಾ ಬ್ಯಾಂಕ್ ಇವುಗಳು ಬೇರೆ ಬ್ಯಾಂಕಿನೊಂದಿಗೆ ವಿಲೀನವಾಗಿರುವುದರಿಂದ ಈ ಬ್ಯಾಂಕುಗಳ ಚೆಕ್‌ಗಳು ಏಪ್ರಿಲ್ 01, 2021ರಿಂದ ಮಾನ್ಯವಾಗುವುದಿಲ್ಲ. ಈ ಬ್ಯಾಂಕುಗಳ ಚೆಕ್ ಬುಕ್ ಹೊಂದಿರುವ ಸಹಕಾರಿಗಳು ಚೆಕ್ ಬುಕ್ ಬದಲಾಯಿಸಿಕೊಳ್ಳಲು ಕ್ರಮವಿಡುವುದು ಹಾಗೂ ತಮ್ಮ ವ್ಯವಹಾರದ ಸಂದರ್ಭದಲ್ಲಿ ಈ ಬ್ಯಾಂಕುಗಳ ಚೆಕ್ ಸ್ವೀಕೃತವಾದಲ್ಲಿ ಇನ್ನು ಮುಂದೆ ಅಂತಹ ಚೆಕ್‌ಗಳು ನಡೆಯದ ಕಾರಣ ಜಾಗರೂಕತೆ ವಹಿಸುವುದು.

**ಗಮನಿಸಿ : ಸಿಂಡಿಕೇಟ್ ಬ್ಯಾಂಕ್ ಇದರ ಚೆಕ್ ಬುಕ್ 30 ಜೂನ್ 2021ರವರೆಗೆ ಮಾನ್ಯತೆ ಹೊಂದಿರುತ್ತದೆ.**

## ಏಪ್ರಿಲ್ 1 1935, ಭಾರತೀಯ ರಿಸರ್ವ್ ಬ್ಯಾಂಕ್‌ನ ಸ್ಥಾಪನಾ ದಿನ

1923ರಲ್ಲಿ ಮೊದಲ ವಿಶ್ವ ಯುದ್ಧದ ನಂತರ ಉಂಟಾದ ಆರ್ಥಿಕ ತೊಂದರೆಗಳ ಸಮಸ್ಯೆಗಳ ಪರಿಹಾರಕ್ಕಾಗಿ ಭಾರತ ಸಂವಿಧಾನ ಶಿಲ್ಪಿ ಡಾ ಅಂಬೇಡ್ಕರವರು ಸಂಶೋಧನೆ ಮಾಡಿ, "ರೂಪಾಯಿಯ ಮೂಲ ಸಮಸ್ಯೆ, ಅದರ ಮೂಲ ಮತ್ತು ಪರಿಹಾರ" ಎಂಬ ಹೆಸರಿನಲ್ಲಿ ಬರೆದ ಪ್ರಬಂಧ ಒಂದು ಅದ್ಭುತ ಕೃತಿಯಾಗಿ ಹೊರಹೊಮ್ಮಿತು. ಅವರ ಈ ಕೃತಿಗೆ ಅವರಿಗೆ ಡಾಕ್ಟರ ಆಫ್ ಸೈನ್ಸ ಪದವಿ ನೀಡಿ ಗೌರವಿಸಲಾಯಿತು. ಈ ಪ್ರಬಂಧ ಲಂಡನಿನ ಪಿ.ಎಸ್.ಕಿಂಗ ಆಂಡ ಕಂಪನಿಯವರು ಪ್ರಾಬ್ಲೆಮ್ಸ ಆಫ್ ರುಪೀ ಎಂಬ ಶೀರ್ಷಿಕೆಯಲ್ಲಿ ಅದೇ ವರ್ಷ ಪ್ರಕಟಿಸಿದೆ.

ಭಾರತದ ರಿಸರ್ವ ಬ್ಯಾಂಕು ಡಾ. ಅಂಬೇಡ್ಕರ ರವರ ಕನಸಿನ ಕೂಸಾಗಿ 1ನೇ ಏಪ್ರಿಲ್ 1935 ರಲ್ಲಿ ಸ್ಥಾಪನೆಯಾಗಿದೆ. ಏಪ್ರಿಲ್ ಒಂದನ್ನು ಆರ್.ಬಿ.ಐ ಸ್ಥಾಪನಾ ದಿನವನ್ನಾಗಿ ಆಚರಿಸುವ ಜೊತೆಗೆ ಡಾ. ಅಂಬೇಡ್ಕರ ರವರ ಸ್ಮರಣೆಯೂ ಅವಶ್ಯಕ.



## ಡಾ. ಶಿವಕುಮಾರ ಸ್ವಾಮೀಜಿ ಇವರ 114ನೇ ಜನ್ಮದಿನಾಚರಣೆ : ಪುಣ್ಯ ಸ್ಮರಣೆ

ಕರ್ನಾಟಕ ರತ್ನ, ಪದ್ಮಭೂಷಣ, ದಾಸೋಹ ರತ್ನ ಪ್ರಶಸ್ತಿಗಳ ಬಿರುದಾಂಕಿತರಾಗಿದ್ದ ತ್ರಿವಿಧ ದಾಸೋಹಮೂರ್ತಿ ನಡೆದಾಡುವ ದೇವರೆಂದೆ ಹೆಸರಾಗಿದ್ದ ದಿವಂಗತ ಡಾ. ಶಿವಕುಮಾರ ಸ್ವಾಮಿಗಳವರ 114ನೇ ಜನ್ಮದಿನಾಚರಣೆಯ ಪ್ರಯುಕ್ತ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಪುಣ್ಯ ಅವರ ಸ್ಮರಣೆಯ ಮೂಲಕ ಅವರಿಗೆ ಮನಃಪೂರ್ವಕ ನಮನಗಳನ್ನು ಸಲ್ಲಿಸಿದ್ದಾರೆ.

## ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳು ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಾಧಿಸಿದ 2020-21ನೇ ( ಮಾರ್ಚ್ 2021ಕ್ಕೆ ಇದ್ದಂತೆ ) ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

### ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
|---|---|
| ಸದಸ್ಯರ ಸಂಖ್ಯೆ | 9752 |
| ಶೇರು ಬಂಡವಾಳ | 1716.00 |
| ಒಟ್ಟು ಠೇವಣಿ | 35,177.18 |
| ಹೂಡಿಕೆಗಳು | 13,323.12 |
| ಸಾಲ & ಮುಂಗಡಗಳು | 24,749.47 |
| ದುಡಿಯುವ ಬಂಡವಾಳ | 40,323.11 |
| ಒಟ್ಟು ನಿವ್ವಳ ಲಾಭ | 380.18 |
| ಸಿ.ಡಿ ಅನುಪಾತ | 70.36 |
| ನಿಧಿಗಳು | 2920.43 |
| ಒಟ್ಟು ಎನ್.ಪಿ.ಎ ಅನುಪಾತ | 2.42% |
| ನಿವ್ವಳ ಎನ್.ಪಿ.ಎ ಅನುಪಾತ | 0.00% |

### ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಸ್ವಂತ ನಿಧಿ | 33 |
| ಒಟ್ಟು ಠೇವಣಿ | 131.56 |
| ಸಾಲಗಳು | 90.31 |
| ಒಟ್ಟು ಎನ್‌ಪಿಎ ಅನುಪಾತ | 1.97% |
| ನೆಟ್ ಎನ್‌ಪಿಎ ಅನುಪಾತ | 0.00% |
| ನಿವ್ವಳ ಲಾಭ | 3.69 |
| ಒಟ್ಟು ವಹಿವಾಟು | 222 |
| ನಿವ್ವಳ ವಹಿವಾಟು | 28.97 |
| ಸಿಆರ್‌ಎಆರ್ | 24% |
| ಒಟ್ಟು ವ್ಯವಹಾರದ ಲಾಭ | 1.66% |

### ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ವ್ಯವಹಾರ | 105.00 |
| ಒಟ್ಟು ಠೇವಣಿ | 84.89 |
| ಸಾಲ ಮತ್ತು ಮುಂಗಡಗಳು | 20.30 |
| ಒಟ್ಟು ಲಾಭ | 2.32 |
| ನಿವ್ವಳ ಲಾಭ | 1.53 |
| ಒಟ್ಟು ಎನ್.ಪಿ.ಎ ಅನುಪಾತ | 0.50% |
| ನಿವ್ವಳ ಎನ್.ಪಿ.ಎ ಅನುಪಾತ | 0.00% |

### ಚೆನ್ನಬಸವಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
|---|---|
| ಒಟ್ಟು ಠೇವಣಿ | 5387.72 |
| ಸಾಲ & ಮುಂಗಡಗಳು | 3418.27 |
| ಹೂಡಿಕೆಗಳು | 2722.53 |
| ತೆರಿಗೆ ಮೊದಲ ಲಾಭ | 141.12 |
| ತೆರಿಗೆ ನಂತರದ ಲಾಭ | 96.6 |
| ದುಡಿಯುವ ಬಂಡವಾಳ | 7039.48 |
| ನಿವ್ವಳ ಸ್ವಾಮ್ಯದ ನಿಧಿ | 1565.06 |
| ಒಟ್ಟು ಎನ್.ಪಿ.ಎ ಅನುಪಾತ | 7.22% |
| ನಿವ್ವಳ ಎನ್.ಪಿ.ಎ ಅನುಪಾತ | 0.13% |
| ಪ್ರತಿ ಉದ್ಯೋಗಿಯ ಠೇವಣಿ | 414.44 |
| ಪ್ರತಿ ಉದ್ಯೋಗಿಯ ಸಾಲ ಮತ್ತು ಮುಂಗಡಗಳು | 262.94 |
| ಪ್ರತಿ ಉದ್ಯೋಗಿಯ ನಿವ್ವಳ ಲಾಭ | 7.43 |

### ಶ್ರೀ ಕನ್ನಕಾ ಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಸ್ವಂತ ನಿಧಿ | 9 |
| ಒಟ್ಟು ಠೇವಣಿ | 35 |
| ಸಾಲ & ಮುಂಗಡಗಳು | 25 |
| ನಿವ್ವಳ ಲಾಭ | 88 ಲಕ್ಷ |
| ಒಟ್ಟು ವಹಿವಾಟು | 60 |
| ದುಡಿಯುವ ಬಂಡವಾಳ | 43 |

### ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 858 |
| ಸಾಲ ಮತ್ತು ಮುಂಗಡಗಳು | 488 |
| ಒಟ್ಟು ವ್ಯವಹಾರ | 1346 |
| ನೆಟ್ ಎನ್.ಪಿ.ಎ ಅನುಪಾತ | 2.56 |
| ನಿವ್ವಳ ಲಾಭ | 3.35 |

### ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 577.44 |
| ಸಾಲ ಹಾಗು ಮುಂಗಡಗಳು | 360.11 |
| ಒಟ್ಟು ವ್ಯವಹಾರ | 937.55 |
| ತೆರಿಗೆ ಮೊದಲ ಲಾಭ | 12.84 |
| ತೆರಿಗೆ ನಂತರದ ಲಾಭ | 4.22 |
| ಒಟ್ಟು ಎನ್.ಪಿ.ಎ ಅನುಪಾತ | 4.38% |
| ನೆಟ್ ಎನ್.ಪಿ.ಎ ಅನುಪಾತ | 2.36% |

### ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಹುಕ್ಕೇರಿ

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ |
|---|---|
| ದುಡಿಯುವ ಬಂಡವಾಳ | 348,01,76,000 |
| ಒಟ್ಟು ಠೇವಣಿ | 309,04,95,000 |
| ಸಾಲ & ಮುಂಗಡಗಳು | 162,03,70,000 |
| ಒಟ್ಟು ಲಾಭ | 5,36,17,000 |
| ನಿವ್ವಳ ಲಾಭ | 1,75,28,000 |
| ಸಾಲ ಮರುಪಾವತಿ | 99.60% |

### ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 224 |
| ಸಾಲ | 163 |
| ಒಟ್ಟು ವಹಿವಾಟು | 387 |
| ದುಡಿಯುವ ಬಂಡವಾಳ | 257 |
| ನಿವ್ವಳ ಲಾಭ | 3.97 |
| ಒಟ್ಟು ಎನ್.ಪಿ.ಎ ಅನುಪಾತ | 4.33% |
| Over Due | 2.41% |

## ಸುಕೋ ಬ್ಯಾಂಕ್ : ಐಎಫ್‌ಎಸ್‌ಸಿ ಸಂಖ್ಯೆ ಪಡೆದ ಉತ್ತರ ಕರ್ನಾಟಕದ ಪ್ರಥಮ ಬ್ಯಾಂಕ್

**ಬಳ್ಳಾರಿ :** ರಾಜ್ಯದ ಪ್ರಮುಖ ಸಹಕಾರಿ ಬ್ಯಾಂಕ್ ಆಗಿರುವ ಸುಕೋ ಬ್ಯಾಂಕ್ ಬ್ಯಾಂಕಿಂಗ್ ಕ್ಷೇತ್ರದ ಹಣ ವರ್ಗಾವಣೆಯ ವ್ಯವಸ್ಥೆಯಾದ ಆರ್.ಟಿ.ಜಿ.ಎಸ್ ನಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ನೇರ ಸದಸ್ಯತ್ವ ಪಡೆದು ಎಲೆಕ್ಟ್ರಾನಿಕ ಹಣ ವರ್ಗಾವಣೆಯಲ್ಲಿ ಎಲ್ಲಾ ವಾಣಿಜ್ಯ ಬ್ಯಾಂಕುಗಳಂತೆ ನೇರ ಭಾಗಿಯಾಗಲು ಅರ್ಹತೆ ಪಡೆದಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ಮೋಹಿತ್ ಮಸ್ಕಿ ಅವರು ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕರ್ನಾಟಕದ 259 ಸಹಕಾರಿ ಬ್ಯಾಂಕ್‌ಗಳ ಪೈಕಿ ಸ್ವತಂತ್ರವಾದ ಐಎಫ್‌ಎಸ್‌ಸಿ ಸಂಖ್ಯೆ ಪಡೆದ ಉತ್ತರ ಕರ್ನಾಟಕದ ಪ್ರಪ್ರಥಮ ಬ್ಯಾಂಕ್ ಮತ್ತು ರಾಜ್ಯದ ಎರಡನೇಯ ಪಟ್ಟಣ ಸಹಕಾರಿ ಬ್ಯಾಂಕ್ ಆಗಿದೆ ಎಂದು ಅವರು ವಿವರಿಸಿದ್ದಾರೆ.

ಸುಕೋ ಬ್ಯಾಂಕ್ ಶೀಘ್ರದಲ್ಲೇ ತನ್ನ 28 ಶಾಖೆಗಳಲ್ಲೂ ಸ್ವತಂತ್ರವಾದ ಪ್ರತ್ಯೇಕ I.F.S.C. ಸಂಖ್ಯೆಗಳಿಂದ ವ್ಯವಹಾರ ನಡೆಸಲಿದೆ. ಹಲವಾರು ಗ್ರಾಹಕರು ಸ್ವತಂತ್ರವಾದ ಐಎಫ್‌ಎಸ್‌ಸಿ ಸಂಖ್ಯೆಯನ್ನು ನಮೂದು ಮಾಡಿ ದೇಶದ ಬೇರೆ ಬೇರೆ ಬ್ಯಾಂಕ್‌ಗಳಿಂದ ನಮ್ಮ ಬ್ಯಾಂಕ್‌ನ 28 ಶಾಖೆಗಳಿಗೆ ಹಣವನ್ನು ವರ್ಗಾವಣೆ ಮಾಡಿಕೊಳ್ಳುತ್ತಿದ್ದಾರೆ ಎಂದರು.

ನಮ್ಮ ಶಾಖೆಗಳಿಂದ ಹಣ ವರ್ಗಾವಣೆ ಮಾಡುವ ಪ್ರಕ್ರಿಯೆ ಪ್ರಾಯೋಗಿಕ ಹಂತದಲ್ಲಿದ್ದು, ಶೀಘ್ರದಲ್ಲೇ ಗ್ರಾಹಕರ ಸೇವೆಗೆ ಅರ್ಪಣೆ ಮಾಡಲಾಗುತ್ತದೆ. ಗ್ರಾಹಕರು ತ್ವರಿತವಾಗಿ ಹಣವನ್ನು ವಿಲೇವಾರಿ ಮಾಡಲು ದಿನದ 24 ತಾಸುಗಳ ಕಾಲ R.T.G.S ಅಥವಾ ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಎನ್.ಇ.ಎಫ್.ಟಿ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

## ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಎಸ್. ಟಿ. ವೀರೇಶ್ ರವರು, ದಾವಣಗೆರೆ ಮಹಾನಗರ ಪಾಲಿಕೆಯ ನೂತನ ಮೇಯರ್ ಆಗಿ ಆಯ್ಕೆ



**ದಾವಣಗೆರೆ :** ದಿನಾಂಕ 05.03.2021 ರಂದು ವಿಶ್ವ ವಿಜೇತ ಸ್ವಾಮಿ ವಿವೇಕಾನಂದ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಹಾಗೂ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾಗಿರುವ ಶ್ರೀ ಎಸ್.ಟಿ. ವೀರೇಶ್ ರವರು ದಾವಣಗೆರೆ ಮಹಾನಗರ ಪಾಲಿಕೆಯ ನೂತನ ಮೇಯರ್ ಆಗಿ ಆಯ್ಕೆ ಆಗಿದ್ದು, ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಪರವಾಗಿ, ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಪರವಾಗಿ ಹಾಗೂ ದಾವಣಗೆರೆ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ದಾವಣಗೆರೆ ಜಿಲ್ಲಾ ನಿರ್ದೇಶಕರಾದ ಶ್ರೀ ಜಿ. ನಂಜನಗೌಡ ರವರು ಭೇಟಿ ಮಾಡಿ ಅಭಿನಂದನೆಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು, ಮನಿಪ್ಲಾಂಟ್ ಸೌಹಾರ್ದ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ನಾಗರಾಜ ಮೂರ್ತಿ ರವರು ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ : 15–03–2021 ರಂದು ಕೊಪ್ಪಳ ಜಿಲ್ಲೆಯಲ್ಲಿ ಗ್ಲೋಬಲ್ ವೆಲ್‌ಫೇರ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ನಿ., ನೂತನ ಸಹಕಾರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ ಮತ್ತು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ ಪತ್ತಾರ ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ ಎಲ್.ಎಚ್, ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ, ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು

## ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಸಭೆ

**ಚಿತ್ರದುರ್ಗ :** ದಿನಾಂಕ 23.03.2021 ರಂದು ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ,. ಚಿತ್ರದುರ್ಗ ಇದರ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ ಸಂಬಂಧ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್, ಚಿತ್ರದುರ್ಗ ಇಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಒಕ್ಕೂಟದ ನಿರ್ದೇಶಕರಾದ ಶ್ರೀ ಎಸ್.ಆರ್. ಲಕ್ಷ್ಮೀಕಾಂತ ರೆಡ್ಡಿ ರವರ ನೇತೃತ್ವದಲ್ಲಿ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಒಕ್ಕೂಟದ 15 ಜನ ನಿರ್ದೇಶಕರು ಭಾಗವಹಿಸಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಭಾಗವಹಿಸಿದ್ದರು.

## ಉದ್ಘಾಟನೆ

# ಸಹಕಾರಿ ತತ್ವ ಬದುಕಿನ ಜೀವಾಳ – ಪೂಜ್ಯ ಶ್ರೀ ರಾಜೇಶ್ವರ ಶಿವಾಚಾರ್ಯರು



**ಬೀದರ :** ಸಮಕ್ಷ ಸೇವಾ ಸೌಹಾರ್ದ ಸಹಕಾರಿ ನಿ., ಬೀದರ ಇದರ ಉದ್ಘಾಟನೆಯನ್ನು ಪರಮ ಪೂಜ್ಯ ಶ್ರೀ ರಾಜೇಶ್ವರ ಶಿವಾಚಾರ್ಯ ಶ್ರೀಗಳು, ಕಟಿಮನಿ ಸಂಸ್ಥಾನ ಹೀರೆಮಠ ಮೆಹಕರ ಮತ್ತು ತಡೋಳಾ ಇವರು ನೇರವೇರಿಸಿದರು. ನಂತರ ಮಾತನಾಡಿ ಮಾನವ ಸಮಾಜ ಜೀವಿ ತಾನು ಉತ್ತಮ ಬಾಳಿ ಬದುಕಬೇಕಾದರೆ ಇತರರ ಸಹಕಾರ ಅವಶ್ಯಕ ಆದರಿಂದ ಸಹಕಾರಿ ಬದುಕಿನ ಜೀವಳವಾಗಿದೆ ಎಂದು ನುಡಿದರು. ಮಾನವನ ಯಾಂತ್ರಿಕ ಜೀವನದಲ್ಲಿ ಜನರ ಮಾನಸಿಕ ನೇಮ್ಮದಿ ಇಲ್ಲದಂತಾಗಿದೆ. ಹೆಚ್ಚಿನ ವೇತನ ಆದಾಯಗಳು ಇದ್ದರು ಕುಟುಂಬದಲ್ಲಿ ನೆಮ್ಮದಿ ಇಲ್ಲದಂತಾಗಿದೆ ಇಂದು ಮಕ್ಕಳಿಗೆ ಸಂಸ್ಕಾರದ ಜೊತೆ ಸಹಕಾರ ಕಲಿಸುವುದು ಅಗತ್ಯವಿದೆ ಎಂದರು. ಸಮಕ್ಷ ಎಂದರೆ ಪರಸ್ಪರ ಒಂದು ಎಂಬ ಭಾವನೆಯಲ್ಲಿ ಆಡಳಿತ ಮಂಡಳಿ, ಸದಸ್ಯರು ಮತ್ತು ಸಿಬ್ಬಂದಿ ವರ್ಗ ಉತ್ತಮವಾಗಿ ಕಾರ್ಯನಿರ್ವಾಹಿಸಿದಾಗ ಮಾತ್ರ ಸಹಕಾರಿ ಯಶಸ್ವಿಯಾಗಲು ಸಾಧ್ಯ ಎಂದು ತಿಳಿಸಿ ಉಳ್ಳವರು ಸಹಕಾರ ಸಂಘದ ಮೂಲಕ ಬಡವರ ಸೇವೆಯಲ್ಲಿ ತೊಡಗಿಕೊಂಡಾದ ಪರಮಾತ್ಮನ ಸಾಕ್ಷಾತ್ಕಾರವಾಗುವುದು. ತಾವು ಆರ್ಥಿಕತೆಯ ಜೊತೆ ಸಾಮಾಜಿಕ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವಂತೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇದರ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ಮಾತನಾಡಿ ಸಹಕಾರ ಚಳುವಳಿಯು ಪ್ರಾಚಿನ ಕಾಲದಿಂದ ಭಾರತದಲ್ಲಿ ನಡೆದುಬಂದಿದೆ, ಬ್ರಿಟಿಷ ಆಳ್ವಿಕೆಯಲ್ಲಿ ಇದನ್ನು ಕಾನೂನು ರೂಪ ನೀಡಲಾಗಿದೆ, ಸ್ವತಂತ್ರ ನಂತರ ಸಹಕಾರ ಚಳುವಳಿಯಲ್ಲಿ ಸರ್ಕಾರದ ಹಸ್ತಕ್ಷೇಪದ ಹಿನ್ನಲೆಯಲ್ಲಿ ಸಹಕಾರ ಚಳುವಳಿ ಹಿನ್ನಡೆ ಉಂಟಾಯಿತ್ತು ಇದನ್ನು ಅರಿತ ಸರ್ಕಾರವು ಸಮಿತಿ ನೀಡಿದ ವರದಿಯ ಆಧಾರದ ಮೇಲೆ ಸಹಕಾರಿಗಳಿಗೆ ಸ್ವತಂತ್ರ ನೀಡುವ ಸೌಹಾರ್ದ ಕಾಯ್ದೆ ಜಾರಿಗೆ ಬಂದಿದೆ ಇದರಿಂದ ಬಹುತೇಕ ಮೀಟರ ಬಡ್ಡಿಗೆ ಕಡಿಮೆ ಮಾಡಲು ಸಾಧ್ಯವಾಗಿದೆ ಎಂದರು. ಸದಸ್ಯರು ಸಾಲ ಪಡೆದು ಸಕಾಲದಲ್ಲಿ ಮಾರುಪಾವತಿ ಮಾಡಬೇಕು ಆಡಳಿತ ಮಂಡಳಿಯ ನಿರ್ದೇಶಕರು ಅಧ್ಯಕ್ಷರಿಗೆ ಹಾಗೂ ಸಿಬ್ಬಂದಿಗಳಿಗೆ ಮಾರ್ಗದರ್ಶನ ನೀಡಿ ಸಹಕಾರಿಯ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ನುಡಿದರು.

ಕಾರ್ಯಕ್ರಮದ ವೇದಿಕೆಯ ಮೇಲೆ ಪ.ಪೂ. ಶ್ರೀ ಗಂಗಾಧರ ಶಿವಾಚಾರ್ಯರು ಹೀರೆಮಠ ಸಂಸ್ಥಾನ ಲಾಡಗೇರಿ ಬೀದರ, ಮುಖ್ಯ ಅತಿಥಿಗಾಗಿ ಶ್ರೀ ಶಿವಕುಮಾರ ಶೇಟಕಾರ, ಶ್ರೀ ರೇವಣಸಿದ್ದಪ್ಪ ಜಲಾದೆ, ಶ್ರೀ ಬಸವರಾಜ ಸ್ವಾಮಿ, ಶ್ರೀ ಪೀರಪ್ಪ ಯರನಳಿ, ಶ್ರೀ ಅಮೃತರಾವ ಪಾಟೀಲ್, ರಾಜಶೇಖರ ಹಸಿಗಲ್, ಮಾರುತಿ ಬೀರಾದರ, ಮಲ್ಲಿಕಾರ್ಜುನ ಬಿರಾದರ, ಚಂದ್ರಶೇಖರ ಗಾದಗಿ, ಶಿವಲಿಂಗಪ್ಪ ಜಲಾದೆ, ಸಂಗಶೆಟ್ಟಿ ಭಾಲ್ಕಿ, ಮಾಣಿಕಪ್ಪ ಗೊರನಾಳೆ, ರಾಜಪ್ಪ ಪಾಟೀಲ್, ಅನೀಲಕುಮಾರ ಅಟಂಗೆ, ಹಿರಿಯ ಸಹಕಾ–ರಿಗಳು ಸದಸ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಕ್ಷ ಸೇವಾ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಕುಮಾರ ಸ್ವಾಮಿ ವಹಿಸಿಕೊಂಡಿದರು. ಶ್ರೀ ಹಾವಪ್ಪ ಸ್ವಾಮಿ ನಿರೂಪಸಿ ವಂದಿಸಿದರು.

## ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ

### ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ, ಚಿತ್ರದುರ್ಗ



ಶ್ರೀ ಹಂಜಿ ಶಿವಸ್ವಾಮಿ
ಅಧ್ಯಕ್ಷರು



ಶ್ರೀ ಡಿ.ಆದಿರಾಜಯ್ಯ
ಉಪಾಧ್ಯಕ್ಷರು

### ಮಹೇಶ ಸೌಹಾರ್ದ ಸಹಕಾರಿ ನಿ., ಕಲಬುರಗಿ



ಶ್ರೀ ಮಹೇಶ ಎಮ್. ಪಾಟೀಲ
ಅಧ್ಯಕ್ಷರು



ಶ್ರೀಮತಿ ಸವಿತಾ ಆರ್. ನಿಂಗಶೆಟ್ಟಿ
ಉಪಾಧ್ಯಕ್ಷರು

# ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ



**ಮೈಸೂರು :** ದಿನಾಂಕ 06–03–2021 ನೇ ಶನಿವಾರ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದಿಂದ ಮೈಸೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆಯು ನಗರದ ಜಿಲ್ಲಾ ಸಹಕಾರ ಯೂನಿಯನ್, ಸಹಕಾರ ಸಂಕೀರ್ಣದಲ್ಲಿ ನಡೆಯಿತು. ಒಕ್ಕೂಟದ ನಿರ್ದೇಶಕಿಯಾದ ಶ್ರೀಮತಿ. ರೇಣುಕ ಎಸ್.ಎನ್ ಅವರ ಪ್ರಾರ್ಥನೆಯೊಂದಿಗೆ ಸಭೆಯು ಪ್ರಾರಂಭವಾಯಿತು.

ಸಭೆಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ.ಹೆಚ್.ವಿ.ರಾಜೀವ್ ಅವರು ಜ್ಯೋತಿ ಬೆಳಗಿಸುವುದರ ಮೂಲಕ ಸಭೆಯನ್ನು ಉದ್ಘಾಟಿಸಿ ಉದ್ಘಾಟನಾ ಭಾಷಣವನ್ನು ಮಾಡಿದರು. ಒಕ್ಕೂಟದ ಅಧ್ಯಕ್ಷರಾದ ಶ್ರೀ.ಎಸ್. ಆರ್.ನಾರಾಯಣರಾವ್ ಅವರು ಅಧ್ಯಕ್ಷತೆ ವಹಿಸಿ ಅಧ್ಯಕ್ಷರ ಭಾಷಣ ಮಾಡಿದರು, ನಿರ್ದೇಶಕರಾದ ಶ್ರೀ. ಹೆಚ್.ಎನ್. ನವೀನ್ ಅವರು ಪ್ರಾಸ್ತಾವಿಕ ನುಡಿ ಹೇಳಿದರು. ಉಪಾಧ್ಯಕ್ಷರಾದ ಶ್ರೀ.ಜಗದೀಶ್ ಹೆಬ್ಬಾರ್ ಅವರು ಕಾನೂನು ತೊಡಕುಗಳ ಬಗ್ಗೆ ವಿವರಣೆ ನೀಡಿದರು.



**ಕೊಡಗು :** ದಿನಾಂಕ 20–03–2021 ನೇ ಶನಿವಾರದಂದು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದಿಂದ ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆಯು ಮಡಿಕೇರಿಯ ಕೊಡವ ಸಮಾಜ ಕಟ್ಟಡದಲ್ಲಿ ನಡೆಯಿತು.

ಸಭೆಯನ್ನು ಸಹಕಾರಿಯ ಧುರೀಣರು ಹಾಗೂ ಮಾಜಿ ಸಚಿವರೂ ಆದ ಶ್ರೀ ಎಂ.ಸಿ. ನಾಣಯ್ಯನವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟನಾ ಭಾಷಣವನ್ನು ಮಾಡಿದರು, ಇವರು ಮಾತನಾಡುತ್ತಾ, ಸೌಹಾರ್ದ ಸಹಕಾರಿಯ ಕಾಯ್ದೆಯು ಜಾರಿಗೆ ಬಂದ ಹಿನ್ನೆಲೆಯನ್ನು ಹೇಳುತ್ತಾ, ಈಗ ಸುಮಾರು 5200 ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿದ್ದು ಯಾವುದೇ ಸರ್ಕಾರದ ಅಧಿಕಾರಿಗಳ ಹಸ್ತಕ್ಷೇಪವಿಲ್ಲದೇ ಸಹಕಾರಿಗಳೇ ಸಹಕಾರಿಗಳ ಮುಖಾಂತರ ಸಹಕಾರಿಗಳ ಪಾಲುಬಂಡವಾಳದ ಮೂಲಕ ಸಂಘಗಳನ್ನು ನಡೆಸಬೇಕು, ಯಾವುದೇ ಸಂದರ್ಭದಲ್ಲೂ ರಾಜಕೀಯ ಹಸ್ತಕ್ಷೇಪವಿಲ್ಲದೇ ಸಹಕಾರ ಸಂಘಗಳು ಕಾರ್ಯನಿರ್ವಹಿಸಬೇಕು ಎಂದು ಹೇಳಿದರು. ಸಹಕಾರಿಗಳೇ ಸಹಕಾರಿಗಳಿಗೋಸ್ಕರ ಸಹಕಾರಿ ಸಂಘಗಳನ್ನು ನಡೆಸಬೇಕು ರಾಜಕೀಯ ಹಸ್ತಕ್ಷೇಪವಿಲ್ಲದೇ ಸಂಘಗಳು ನಡೆದಾಗ ಮಾತ್ರ ಸಹಕಾರಿ ಸಂಘಗಳ ಉದ್ಧಾರ ಸಾದ್ಯ ಎಂದು ಹೇಳಿದರು.

ಸಭೆಯಲ್ಲಿ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಆರ್. ನಾರಾಯಣ ರಾವ್, ಅವರು ಮಾತನಾಡುತ್ತಾ ಒಕ್ಕೂಟವು ಸ್ಥಾಪನೆಯಾದ ವಿಚಾರ ಹಾಗೂ ಅದರ ಧ್ಯೇಯೋದ್ದೇಶಗಳ ಬಗ್ಗೆ ಸಭೆಗೆ ತಿಳಿಸಿದರು,

ಸಭೆಯಲ್ಲಿ ಒಕ್ಕೂಟದ ನಿರ್ದೇಶಕರುಗಳು ಹಾಗೂ ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಯ ಸುಮಾರು 55 ಜನ ಸೌಹಾರ್ದ ಸಹಕಾರಿಗಳು ಭಾಗವಹಿಸಿದ್ದರು.



**ಕೊಪ್ಪಳ :** ದಿನಾಂಕ : 20–03–2021 ರಂದು ಬೆಳಗ್ಗೆ 10:30 ಗಂಟೆಗೆ ಕೊಪ್ಪಳ ಜಿಲ್ಲೆಯ ಕಾರಟಗಿ ತಾಲೂಕಿನ ಎಲ್.ವಿ.ಟಿ ಕಲ್ಯಾಣ ಮಂಟಪದಲ್ಲಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ ಪತ್ತಾರ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ ಎಲ್.ಎಚ್, ಮಾನ್ಯ ವಾಣಿಜೋದ್ಯಮಿಗಳಾದ ಶ್ರೀ ಎಲ್.ವಿ.ಟಿ ನಾಗಪ್ಪ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ನಿರ್ದೇಶಕರಾದ ಶ್ರೀ ಎಮ್.ರಮೇಶ, ಸಿ.ಬಿ.ಎಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಮಾನ್ಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಿ.ಜಿ.ಜವಳಿ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಪುಟ್ಟರಾಜ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಗುಂಡಪ್ಪ ಕುಳಗಿ ರವರು ವಹಿಸಿದರು.

**ಮಂಡ್ಯ :** ಕೆ.ಆರ್.ಪೇಟೆ ತಾಲ್ಲೂಕು ಶ್ರೀ ಶಿವಜ್ಯೋತಿ ಗಾಣಿಗರ ಸೌಹಾರ್ದ ಸಹಕಾರಿ ನಿ., ಕೆ.ಆರ್.ಪೇಟೆ ಇದರ ಅಧ್ಯಕ್ಷರಾದ ಶ್ರೀ ಸಾರಂಗಿ ನಾಗರಾಜು ರವರು ಕೆ.ಆರ್.ಪೇಟೆ ತಾಲ್ಲೂಕಿನ ಸಾರಂಗಿ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ಆಯ್ಕೆಯಾಗಿರುತ್ತಾರೆ.




**ಮಂಡ್ಯ :** ದಿನಾಂಕ 12.01.2021 ನೇ ಮಂಗಳವಾರದಂದು ಮಧ್ಯಾಹ್ನ 2.00 ಗಂಟೆಗೆ ಗಾಂಧಿ ಭವನ, ವಿ. ವಿ.ರಸ್ತೆ, ಮಂಡ್ಯ ಇಲ್ಲಿ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿಯಮಿತ, ಇದರ ಅಧ್ಯಕ್ಷರಾದ ಶ್ರೀ ಎಸ್.ಆರ್.ನಾರಾಯಣರಾವ್ ಅವರ ಘನ ಅಧ್ಯಕ್ಷತೆಯಲ್ಲಿ ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿಗಳ ಜೊತೆ ಸಂಪರ್ಕ ಸಭೆಯು ನಡೆಯಿತು.

ಸಭೆಯಲ್ಲಿ ಹಾಜರಿದ್ದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ, ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಸ್ವಾಗತವನ್ನು ಕೋರಿದರು, ಸದರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗರಾಜು ಎಸ್ ಅವರು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. ಜ್ಯೋತಿ ಬೆಳಗಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಸಭೆಗೆ ಸುಮಾರು 60 ಜನ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳು ಭಾಗವಹಿಸಿದ್ದರು. ಸಭೆಯಲ್ಲಿ ಹೊಸ ಸೌಹಾರ್ದ ಸಹಕಾರಿಗಳಿಗೆ ಒಕ್ಕೂಟದ ಸದಸ್ಯತ್ವ ಪಡೆಯುವಂತೆ ಕೋರಲಾಯಿತು.

ಸಭೆಯಲ್ಲಿ ಸುಸ್ತಿ ಸಾಲಗಳ ವಸೂಲಾತಿಯ ಬಗ್ಗೆ, ಖಾತೆಗಳ ನಿರ್ವಹಣೆಯ ಬಗ್ಗೆ ಹಾಗೂ ಹೊಸದಾಗಿ ಪ್ರಾರಂಭವಾದ ಸಹಕಾರಿಗಳಿಗೆ ತರಬೇತಿ ನೀಡುವಂತೆ ಕೋರಿದರು ಹಾಗೂ ಇನ್ನಿತರ ಕಾನೂನು ತೊಡಕುಗಳ ಬಗ್ಗೆ ಸಹಕಾರಿಗಳ ಜೊತೆ ಚರ್ಚೆ ನಡೆದು ಸಮಸ್ಯೆಗಳಿಗೆ ಪರಿಹಾರ ನೀಡಲಾಯಿತು. ಸಭೆಯಲ್ಲಿ ಒಕ್ಕೂಟದ ಎಲ್ಲಾ ನಿರ್ದೇಶಕರುಗಳು ಹಾಜರಿದ್ದರು.

## ಡಿಸಿಸಿ ಬ್ಯಾಂಕ್ ವೃತ್ತಿಪರ ನಿರ್ದೇಶಕರಾಗಿ ಶ್ರೀ ದಿವಾಕರ್ ಹಾಗೂ ಶ್ರೀ ಮಂಜಪ್ಪ ನೇಮಕ



**ದಾವಣಗೆರೆ :** ದಿನಾಂಕ 15.03.2021 ರಂದು ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಆಡಳಿತ ಮಂಡಳಿಗೆ ವೃತ್ತಿಪರ ನಿರ್ದೇಶಕರುಗಳಾಗಿ ಹಿರಿಯ ನ್ಯಾಯವಾದಿ ಶ್ರೀ ಹೆಚ್. ದಿವಾಕರ್ ಮತ್ತು ಸಹಕಾರ ಇಲಾಖೆಯ ನಿವೃತ್ತ ಅಪರ ನಿಬಂಧಕರಾದ ಶ್ರೀ ಬಿ.ಹೆಚ್. ಮಂಜಪ್ಪ ಅವರುಗಳು ನೇಮಕಗೊಂಡಿದ್ದಾರೆ.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೆ.ಎಸ್. ವೇಣುಗೋಪಾಲರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಬ್ಯಾಂಕಿನ ಸಭಾಂಗಣದಲ್ಲಿ ನಡೆದ ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ದಿವಾಕರ್ ಮತ್ತು ಮಂಜಪ್ಪ ಅವರುಗಳನ್ನು ಕೋ–ಆಪ್ ಮಾಡಿಕೊಳ್ಳಲಾಯಿತು.

## ಸಹಕಾರಿಯ ಪ್ರಗತಿ ನೋಟ

### ಗುರು ರಾಘವೇಂದ್ರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನ್ವಿ

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
|---|---|
| ಪಾವತಿಯಾದ ಶೇರು ಬಂಡವಾಳ | 65 ಲಕ್ಷ |
| ಒಟ್ಟು ಠೇವಣಿ | 31.69 ಕೋಟಿ |
| ಒಟ್ಟು ನಿಧಿಗಳು | 1.30 ಕೋಟಿ |
| ಸಾಲ ಮತ್ತು ಮುಂಗಡಗಳು | 21.67 ಕೋಟಿ |
| ನಿವ್ವಳ ಲಾಭ | 56 ಲಕ್ಷ |
| ಒಟ್ಟು ವ್ಯವಹಾರ | 53.66 ಕೋಟಿ |

### ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ನಿ., ಬೆಲ್ಲದ ಬಾಗೇವಾಡಿ.

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
|---|---|
| ಪಾವತಿಯಾದ ಶೇರು ಬಂಡವಾಳ | 337.88 |
| ಒಟ್ಟು ಠೇವಣಿ | 30,904.94 |
| ಒಟ್ಟು ನಿಧಿಗಳು | 2,992.41 |
| ಸಾಲ ಮತ್ತು ಮುಂಗಡಗಳು | 16,203.70 |
| ಹೂಡಿಕೆಗಳು | 16,008.17 |
| ನಿವ್ವಳ ಲಾಭ | 175.98 |
| ಸಿ.ಡಿ ಅನುಪಾತ | 52.43% |
| ಪಡೆದ ಸಾಲಗಳು | – |
| ಆರ್.ಬಿ.ಐ ಪರೀವೀಕ್ಷಣೆ | ಇಲ್ಲ |

**ಕಲಬುರಗಿ :** ಗುಲಬರ್ಗಾ ಮಹಿಳಾ ಸೌಹಾರ್ದ ಸಹಕಾರಿ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ 100 ಜನ ಮಹಿಳಾ ಸದಸ್ಯರಿಗೆ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಶೈಲಜಾ ವಿ. ತಪಲಿ ರವರು ಛತ್ರಿ ವಿತರಿಸಿದರು.


# ಉದ್ಘಾಟನೆ




**ಉತ್ತರ ಕನ್ನಡ :** ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ತಾಲೂಕಿನ ನೂತನ ಸೌಹಾರ್ದ ಸಹಕಾರಿಯಾದ ಡಿ.ಜಿ.ಮಾಊಲಿ ಸೌಹಾರ್ದ ಸಹಕಾರಿ ನಿ.,ದಾಂಡೇಲಿ ಇದರ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಕರಾದ ಶ್ರೀಮತಿ ಸರಸ್ವತಿ ಎನ್ ರವಿ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಧನಗರ ಗೌಳಿ ಸಮಾಜದ ಹಿರಿಯರು ಮತ್ತು ನೂತನ ಸಹಕಾರಿಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



**ಬೆಳಗಾವಿ :** ದಿನಾಂಕ 16.03.2021 ರಂದು ಸಹನಾ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ನಿ., ಗೋಕಾಕ ಸಹಕಾರಿಯ ಉದ್ಘಾಟನೆಯನ್ನು ಶ್ರೀ ಬನಶಂಕರಿದೇವಿ ಕಲ್ಯಾಣ ಮಂಟಪದಲ್ಲಿ ದಿವ್ಯಸಾನಿಧ್ಯ ಶ್ರೀ ಮ.ನಿ.ಪ್ರ.ಸ್ವ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ಕೂನ್ಯ ಸಂಪಾದನಮಠ, ಗೋಕಾಕ ಇವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಸುಜಯ ಬೆಳವಿ, ಶ್ರೀ ಶ್ರೀಕಾಂತ ಶಿವಲಿಂಗಪ್ಪ ಗೋಕಾಕ, ಶ್ರೀಮತಿ ಎಸ್,ಆರ್ ದೇಮಶೆಟ್ಟಿ ಹಾಗೂ ಪ್ರವರ್ತಕರಾದ ಶ್ರೀಮತಿ ಗೀತಾ ಈಶ್ವರ ಕಂಬಾರ ಉಪಸ್ಥಿತರಿದ್ದರು. ಸನ್ಮಾನ ಕಾರ್ಯಕ್ರಮವನ್ನು ಶ್ರೀಮತಿ ಮೀನಾಕುಮಾರಿ ಶ್ರೀಕಾಂತ ಭೋಸಲೆ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀ ಶ್ರೀಕಾಂತ ಭೋಸಲೆ ಇವರು ನೇರವೇರಿಸಿದರು.



**ಮೈಸೂರು :** ಜಗನ್ಮಾತೆ ಅಕ್ಕಮಹಾದೇವಿ ಮಹಿಳಾ ಸೌಹಾರ್ದ ಸಹಕಾರಿ ನಿ., ಮೈಸೂರು ಇದರ ಪ್ರಥಮ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಶ್ರೀ ನಟರಾಜ ಕಲ್ಮಳ್ಳಿ ರವರು ಉದ್ಘಾಟನೆ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ಸಿ.ಎಲ್ ಶರ್ಮಿಳಾ ರವರು ವಹಿಸಿದ್ದರು. ವೇದಿಕೆ ಮೇಲೆ ಉಪಾಧ್ಯಕ್ಷರು ಮತ್ತು ನಿರ್ದೇಶಕರು ಹಾಜರಿದ್ದರು.



**ಮಂಡ್ಯ :** ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಭಾರತೀನಗರ ಇದರ ಮದ್ದೂರು ನೂತನ ಶಾಖೆಯ ಕಛೇರಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲಾ ಸಂಯೋಜಕರರಾದ ಶ್ರೀ ಚಂದ್ರಶೇಖರಯ್ಯ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಶ್ರೀ ಬೋರೇಶ್, ಮಂಡ್ಯ ಶಾಖಾ ವ್ಯವಸ್ಥಾಪಕರು, ಪಾವಗಡ ಸೌಹಾರ್ದ ಕೋ-ಆಪ್ ಲಿ., ಶ್ರೀ ಸಿದ್ದಲಿಂಗಯ್ಯ, ಸಹಕಾರಿಯ ಅಧ್ಯಕ್ಷರು, ಸಹಕಾರಿಯ ನಿರ್ದೇಶಕರು, ಶ್ರೀಮತಿ ಪೂರ್ಣಿಮಾ, ಸಿಇಓ, ಮತ್ತು ನೂತನ ಶಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬಳ್ಳಾರಿ :** ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕು ತನ್ನ ಸಾಮಾಜಿಕ ಸೇವೆಯ ಅಂಗವಾಗಿ ಸಂಡೂರಿನ 100 ಹಾಸಿಗೆಯ ಸರ್ಕಾರಿ ಆಸ್ಪತ್ರೆಗೆ Bed Sheet with Pillow, Blankats ಹಾಗೂ 3 Seater Steel Chair ಗಳನ್ನು ನೀಡಲಾಯಿತು.

# ಶ್ರೀ ಪಂಚಶಕ್ತಿ ವಿವಿದ್ಧೋದೇಶ ಸೌಹಾರ್ದ ಸಹಕಾರಿ ನಿಯಮಿತ ಮೂಡುಬಿದಿರೆ ವತಿಯಿಂದ

## ಉಚಿತವಾಗಿ ಶೌಚಾಲಯ ನಿರ್ಮಿಸಿ ಹಾಗೂ ಸುಮಾರು 2.50 ಲಕ್ಷದ ವೆಚ್ಚದಲ್ಲಿ ಮನೆ ನಿರ್ಮಿಸಿ ಕೀ ಹಸ್ತಾಂತರ ಸಮಾರಂಭ.



**ಮೂಡುಬಿದಿರೆ :** ಶ್ರೀ ಪಂಚಶಕ್ತಿ ವಿವಿದ್ಧೋದೇಶ ಸೌಹಾರ್ದ ಸಹಕಾರಿ ನಿಯಮಿತ ಮೂಡುಬಿದಿರೆ ಇದರ 2020–21ನೇ ಸಾಲಿನ ಸಹಕಾರಿ ವತಿಯಿಂದ ಬಡ ಸದಸ್ಯರಿಗೆ ಶ್ರೀಮತಿ ಸುರೇಖ ಸದಾಶಿವ, ಅಚ್ಚರಕಟ್ಟೆ ಪಡುಮಾರ್ನಾಡು ಇವರಿಗೆ ಉಚಿತವಾಗಿ ಶೌಚಾಲಯವನ್ನು ನಿರ್ಮಿಸಿಕೊಟ್ಟಿರುತ್ತಾರೆ. ಅದರ ಹಸ್ತಾಂತರವನ್ನು ಸಹಕಾರಿಯ ಉಪಾಧ್ಯಕ್ಷರಾದ ಶ್ರೀಮತಿ ಉಷಾರವರ ಉಪಸ್ಥಿತಿಯಲ್ಲಿ ಮಾಜಿ ಅಧ್ಯಕ್ಷರಾದ ಸುರೇಶ ಪೂಜಾರಿ ಇವರು ನೀಡಿರುತ್ತಾರೆ. ಶ್ರೀಮತಿ ಸುಜಾತ ರಮೇಶ ಪೂಜಾರಿ ಆಮನಬೆಟ್ಟು ಪಡುಮಾರ್ನಾಡು ಇವರು ಆರ್ಥಿಕವಾಗಿ ಹಿಂದುಳಿದಿದ್ದು ಅವರಿಗೆ ಸಹಕಾರಿಯ ವತಿಯಿಂದ ಸುಮಾರು 2.50 ಲಕ್ಷದ ವೆಚ್ಚದಲ್ಲಿ ಮನೆಯನ್ನು ಉಚಿತವಾಗಿ ಕಟ್ಟಿ ನೀಡಿರುತ್ತಾರೆ. ಅದರ ಕೀ ಹಸ್ತಾಂತರವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ರಂಜಿತ್ ಪೂಜಾರಿಯವರು ಮಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ ಸಹಕಾರಿಯು ಪ್ರತೀ ವರ್ಷ ಬಡ ಸದಸ್ಯರಿಗೆ ಉಪಯೋಗವಾಗುವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತೇವೆ. 2020–21 ನೇ ಸಾಲಿನಲ್ಲಿ 1 ಶೌಚಾಲಯ ಹಾಗೂ 2.50 ಲಕ್ಷದ ಮನೆಯನ್ನು ನಿರ್ಮಿಸಿಕೊಟ್ಟಿರುತ್ತೇವೆ ಎಂದು ತಿಳಿಸಿದರು. ಸಹಕಾರಿಯ ನಿರ್ದೇಶಕರಾದ ಶ್ರೀ ರಮೇಶ ಶೆಟ್ಟಿ ಯವರು ಸ್ವಾಗತಿಸಿ, ವಂದನಾರ್ಪಣೆ ಮಾಡಿದರು. ಇನೋರ್ವ ನಿರ್ದೇಶಕರಾದ ಶ್ರೀ ಗೋಪಾಲ ಶೆಟ್ಟಿಗಾರ್ ಪ್ರಾಸ್ತಾವಿಕ ಭಾಷಣ ಮಾಡಿದರು. ಶ್ರೀಮತಿ ಸುಜಾತ ರಮೇಶ ಪೂಜಾರಿ ದಂಪತಿಗಳಿಗೆ ಸಹಕಾರಿಯ ಅಧ್ಯಕ್ಷರು ಶಾಲು ಹೊದಿಸಿ ಕೀ ಹಸ್ತಾಂತರ ಮಾಡಿದರು. ಸಮಾರಂಭದಲ್ಲಿ ನಿರ್ದೇಶಕರಾದ ಶ್ರೀ ಸುರೇಶ್ ಪೂಜಾರಿ ಎಂ. ಶ್ರೀ ಗೋಪಾಲ ಶೆಟ್ಟಿಗಾರ್, ಶ್ರೀ ರಮೇಶ ಶೆಟ್ಟಿ, ಶ್ರೀ ರಾಜೇಂದ್ರ ಬಿ. ಶ್ರೀ ಶರತ್ ಶೆಟ್ಟಿ, ಶ್ರೀಮತಿ ಹೇಮ.ಕೆ. ಪೂಜಾರಿ, ಶ್ರೀ ಉಷಾ ಭಂಡಾರಿ, ಶ್ರೀ ರತ್ನಾಕರ ಪೂಜಾರಿ, ಶ್ರೀ ರವೀಂದ್ರ ಕರ್ಕೇರ, ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶ್ರೀ. ಯು. ರಾಜಶೇಖರ ಮದ್ಯಸ್ಥರು ಉಪಸ್ಥಿತರಿದ್ದರು.

## ಉದ್ಘಾಟನೆ



**ಮೈಸೂರು :** ಭೀಮಜ್ಯೋತಿ ಸೌಹಾರ್ದ ಸಹಕಾರಿ ನಿ., ಇದರ ಕಛೇರಿ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ 02–04–2021ರಂದು ಸಂಜೆ 05.00 ಗಂಟೆಗೆ ಆಯೋಜಿಸಲಾಗಿತ್ತು. ನೂತನ ಕಛೇರಿಯನ್ನು ಪ್ರಗತಿಪರ ಚಿಂತಕ ಡಾ. ಇ. ರತಿರಾವ್‌ರವರು ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಜಗದೀಶ್ ಹೆಬ್ಬಾರ್‌ರವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್.ಎಸ್ ರವರು ಉಪಸ್ಥಿತರಿದ್ದರು.

## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ



**ಮಂಡ್ಯ :** ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಭಾರತೀನಗರ, ಮದ್ದೂರು ತಾಲ್ಲೂಕು ಕಛೇರಿಯಲ್ಲಿ "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ" ಅಂಗವಾಗಿ ಸಿಬ್ಬಂದಿಗಳು ನಿರ್ದೇಶಕರಾದ ಶ್ರೀಮತಿ ದೊಡ್ಡಮ್ಮ ಹಾಗೂ ನಿರ್ದೇಶಕರು, ಸಿಬ್ಬಂದಿಗಳಿಗೆ ಪುಷ್ಪ & ಸಿಹಿ ನೀಡಿ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯ ಮತ್ತು ಸೌಹಾರ್ದ ಜಿಲ್ಲಾ ಸಂಯೋಜಕರಾದ ಎಂ. ಚಂದ್ರಶೇಖರಯ್ಯ, ಉಪಸ್ಥಿತರಿದ್ದರು.

# ಸಹಕಾರ ಸಂಘಗಳ ಪದಾಧಿಕಾರಿಗಳಲ್ಲಿ ಅವಿಶ್ವಾಸ ನಿರ್ಣಯ - ಒಂದು ವಿಮರ್ಷೆ

– ಶ್ರೀ ಸಿ.ಎನ್. ಪರಶಿವಮೂರ್ತಿ

ಭಾರತೀಯ ಶ್ರೇಷ್ಠ ನ್ಯಾಯಾಲಯ ತನ್ನ 2015 Indlaw SC 397 ನ ತೀರ್ಪಿನಲ್ಲಿ ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಯ ನಿರ್ದೇಶಕರ / ಪದಾಧಿಕಾರಿಗಳ ಮೇಲೆ ಅವಿಶ್ವಾಸ ಮಂಡಿಸಬಹುದೆಂದು ತೀರ್ಪಿನನ್ವಯ ಸಹಕಾರ ಸಂಘಗಳ ಕಾಯಿದೆ 1959ಕ್ಕೆ ತಿದ್ದುಪಡಿ ಮಾಡಿ ಈ ಅವಕಾಶವನ್ನು ಸೇರಿಸಿದೆ. ಅಂದರೆ ಸಹಕಾರ ಸಂಘಗಳ ಕಾಯಿದೆಯಲ್ಲಿ ಅವಿಶ್ವಾಸ ಮಂಡಿಸಲು ಅವಕಾಶ ವಿಲ್ಲದೇ ಇದ್ದರೂ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿನಂತೆ ಚುನಾವಣೆ ನಡೆದ ಎರಡು ವರ್ಷಗಳ ನಂತರ ಅವಿಶ್ವಾಸ ಮಂಡಿಸಲು ಮತ್ತು ಅದು ವಿಫಲವಾದರೆ ಮತ್ತು ಒಂದು ವರ್ಷದವರೆವಿಗೆ ಪುನಃ ಮಂಡಿಸದಂತೆ ನಿರ್ದೇಶನ ನೀಡಿತು. ಮತ್ತು ಮುಂದುವರಿದು ಅವಿಶ್ವಾಸ ಮಂಡಿಸಿದಾಗ ಚುನಾಯಿತ ಆಡಳಿತ ಮಂಡಳಿಯ 2/3 ಸದಸ್ಯರು ಒಪ್ಪಿಗೆ ನೀಡಿದರೆ ಆ ನಿರ್ಣಯ ಅಂಗೀಕಾರವಾಗಿದೆಯೆಂದು ಭಾವಿಸಬೇಕೆಂದು ನಿರ್ದೇಶಿಸಿದೆ.

ಇದಕ್ಕೆ ಪೂರಕವಾಗಿ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 29 ಹೆಚ್ ಎಂದು ಸೇರಿಸಿದ ಈ ಕೆಳಕಂಡಂತೆ ತಿದ್ದುಪಡಿ ಮಾಡಿದೆ.

**29 ಹೆಚ್ :**

1) ಒಂದು ಸಹಕಾರ ಸಂಘದ ಪದಾಧಿಕಾರಿಗಳ ಮೇಲೆ ಮಂಡಲಿ ಅವಧಿಯ ರಚನೆಯ 2 ವರ್ಷಗಳ ನಂತರ ಅವಿಶ್ವಾಸ ಮಂಡಿಸಬಹುದು. ಅವಿಶ್ವಾಸ ಪುರಸ್ಕೃತವಾಗದಿದ್ದರೆ ಮತ್ತು ಒಂದು ವರ್ಷ ಮತ್ತು ಅವಿಶ್ವಾಸ ಮಂಡಿಸತಕ್ಕದ್ದಲ್ಲವೆಂದು ಮತ್ತು ಅವಿಶ್ವಾಸ ಪ್ರಸ್ತಾವನೆಯನ್ನು ಚುನಾಯಿತ ಮಂಡಳಿ ಸದಸ್ಯರು 1/3 ಸದಸ್ಯರು ಮನವಿ ಸಲ್ಲಿಸಿದ್ದಾಗ ಪರಿಗಣಿಸಲು ಸೂಚಿಸಿದೆ.

2) ಚುನಾಯಿತ ಪ್ರತಿನಿಧಿಗಳ 2/3 ಸದಸ್ಯರು ಬಹುಮತದಿಂದ ಅಂಗೀಕಾರವಾದರೆ ಪದಾಧಿಕಾರಿಯು ತನ್ನ ಸ್ಥಾನವನ್ನು ಆಗಿಂದಾಗ್ಗೆ ತೆರವುಗೊಳಿಸತಕ್ಕದೆಂದು ತಿಳಿಯತಕ್ಕದ್ದು.

ಇದಕ್ಕೆ ಪೂರಕವಾಗಿ ಕರ್ನಾಟಕ ಸಹಕಾರ ಸಂಘಗಳ ನಿಯಮ 1960ಕ್ಕೆ ನಿಯಮ 14–ಎಕೆಕೆ ಎಂದು ಸೇರಿಸಿ ಈ ಕೆಳಕಂಡ ಅವಕಾಶ ಕಲ್ಪಿಸಿದೆ.

**14–ಎಕೆಕೆ :**

1) ಚುನಾಯಿತ ಮಂಡಳಿಯ ಸದಸ್ಯರು 1/3 ಸದಸ್ಯರು ಲಿಖಿತವಾಗಿ ಮನವಿಯಲ್ಲಿ ಮುಖ್ಯ ಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಸಂಬಂಧಪಟ್ಟ ನಿಬಂಧಕರಿಗೆ ಸಲ್ಲಿಸತಕ್ಕದ್ದು.

2) ಸಂಘದ ಮುಖ್ಯ ಕಾರ್ಯನಿರ್ವಾಹಕರ ಮನವಿ ಬಂದ ಏಳು ದಿವಸದೊಳಗಾಗಿ ಸಂಬಂಧಪಟ್ಟ ನಿಬಂಧಕರಿಗೆ ತಿಳಿಸತಕ್ಕದ್ದು.

3) ಸಂಬಂಧಪಟ್ಟ ನಿಬಂಧಕರು ಪ್ರಸ್ತಾವನೆ ಸ್ವೀಕರಿಸಿದ ಏಳು ದಿವಸದೊಳಗಾಗಿ ಹಿರಿಯ ನಿರೀಕ್ಷಕನಿಗೆ ಕಡಿಮೆ ಇಲ್ಲದ ಒಬ್ಬ ಅಧಿಕಾರಿಯನ್ನು ನೇಮಿಸಿ, ಅವಿಶ್ವಾಸ ಪರಿಗಣಿಸಲು ಅಧಿಕಾರ ನೀಡತಕ್ಕದ್ದು.

4) ಅಂತಹ ಅಧಿಕಾರಿ 15 ದಿವಸಗಳಿಗೆ ಕಡಿಮೆ ಇಲ್ಲದ ನೋಟೀಸ್ ಜಾರಿ ಸಭೆ ಕರೆಯತಕ್ಕದ್ದು.

5) ನೋಟೀಸಿನಲ್ಲಿ ಸಭೆಯ ಸ್ಥಳ, ದಿನಾಂಕ, ಸಮಯ ಮತ್ತು ವಿಷಯ ಪಟ್ಟಿ ಲಗತ್ತಿಸಬೇಕು.

6) ನೋಟೀಸ್‌ನ್ನು ಎ) ಮುದ್ದಾಂ ನೀಡಲು/ಕೊಡಲು ಬಿ) ರಿಜಿಸ್ಟರ್ಡ್ ಅಂಚೆ ಮೂಲಕ ನೀಡತಕ್ಕದ್ದು.

7) ಸಭೆಗೆ ಕೋರಂ ಸಂಖ್ಯೆಯು ಚುನಾಯಿತ ಮಂಡಳಿಯ ನಿರ್ದೇಶಕರು ಶೇ. 50ರ ಮುಂದಿನ ಸಂಖ್ಯೆಯಾಗಿರತಕ್ಕದ್ದು. ಸಭೆಗೆ ಹಾಜರಾದ ನಿರ್ದೇಶಕರು, ನಿಗದಿ ಪಡಿಸಿದ ಪುಸ್ತಕದಲ್ಲಿ ಸಭೆ ಪ್ರಾರಂಭ ಮಾಡಲು ಸಹಿ ಮಾಡತಕ್ಕದ್ದು. ಚುನಾವಣೆ ನಡೆಸಲು ನೇಮಿಸಿದ ಅಧಿಕಾರಿಯು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು. ಸಭೆಗೆ ನಿಗದಿ ಪಡಿಸಿದ ಒಂದು ಘಂಟೆಯೊಳಗೆ ಕೋರಂ ಆಗದಿದ್ದರೆ, ಸಭೆಯನ್ನು ರದ್ದು ಪಡಿಸತಕ್ಕದ್ದು.

8) ಅವಿಶ್ವಾಸ ಮಂಡಿಸಿದ ಸಭೆಯನ್ನು ಯಾವುದೇ ಕಾರಣಕ್ಕೂ ಮುಂದೂಡತಕ್ಕದ್ದಲ್ಲ.

9) ಸಭೆ ಪ್ರಾರಂಭದಲ್ಲಿ ಕೂಡಲೆ ಅವಿಶ್ವಾಸ ಮಂಡನೆ ಪರಿಶೀಲನೆಗೆ ನೇಮಕ ಮಾಡಿ ಅಧಿಕಾರಿ, ವಿಷಯವನ್ನು ಮಂಡಿಸತಕ್ಕದ್ದು ಮತ್ತು ಅದನ್ನು ಯಾವುದೇ ಚರ್ಚೆ ಇಲ್ಲದೆ ಮತಕ್ಕೆ ಹಾಕತಕ್ಕದ್ದು.

10) ಮತ ಪಟ್ಟಿಯಲ್ಲಿ ಗುಪ್ತ ಮತದಾನದ ಮೂಲಕ ಮತ ಚಲಾಯಿಸತಕ್ಕದ್ದು.

11) ಅವಿಶ್ವಾಸ ಪ್ರಸ್ತಾಪ 2/3 ಅಂಶದ ಹಾಜರಿದ್ದ ಚುನಾಯಿತ ಪ್ರತಿನಿಧಿಗಳ ಬಹುಮತದಿಂದ ಫಲಿತಾಂಶ ಪ್ರಕಟಿಸತಕ್ಕದ್ದು ಮತ್ತು ಅದರಂತೆ ನಡವಳಿಕೆಗಳನ್ನು ದಾಖಲಿಸಿ ಸಂಬಂಧಪಟ್ಟ ನಿಬಂಧಕರಿಗೆ ವರದಿ ನೀಡುವುದು.

12) ಅವಿಶ್ವಾಸ ಒಪ್ಪಿಗೆಯಾದ ಕೂಡಲೆ ಸಂಬಂಧಪಟ್ಟ ಪದಾಧಿಕಾರಿ ಯಾವುದೇ ಕಾರ್ಯನಿರ್ವಹಿಸತಕ್ಕದ್ದಲ್ಲ ಮತ್ತು ಆ ಸ್ಥಾನ ಖಾಲಿಯಾಗಿದೆ ಎಂದು ಭಾವಿಸತಕ್ಕದ್ದು.

13) ಸಂಘದ ಮುಖ್ಯ ಕಾರ್ಯನಿರ್ವಾಹಕ ಖಾಲಿಯಾದ ಸ್ಥಾನಕ್ಕೆ ಕಲಂ.29ಇ ಮತ್ತು 29ಎಫ್ ಅನ್ವಯ ಭರ್ತಿ ಮಾಡಲು ಕ್ರಮ ಜರುಗಿಸತಕ್ಕದ್ದು.

ಈ ಮೇಲ್ಕಂಡ ಕಾಯಿದೆ ಕಲಂ.29ಹೆಚ್ ಮತ್ತು ನಿಯಮ 14ಎಕೆಕೆ ನಲ್ಲಿನ ವ್ಯತ್ಯಾಸವನ್ನು ಗಮನಿಸುವುದು.

ಕಲಂ29ಹೆಚ್(2) ರಲ್ಲಿ 2/3 ಅಂಶದ ಚುನಾಯಿತ ನಿರ್ದೇಶಕರು ಎಂದಿದೆಯೇ ಹೊರತು, ಹಾಜರಿದ್ದ ಚುನಾಯಿತ ನಿರ್ದೇಶಕರು ಎಂದಿಲ್ಲ. ಆದರೆ ನಿಯಮ 14ಎಕೆಕೆ(11) ರಲ್ಲಿ 2/3 ಅಂಶದ ಹಾಜರಿದ್ದ ನಿರ್ದೇಶಕರು ಎಂದು ಸೇರಿಸಲಾಗಿದೆ. ಕಾನೂನಿನಲ್ಲಿ ಇಲ್ಲದ ನಿರ್ಬಂಧವನ್ನು ನಿಯಮದಲ್ಲಿ ಸೇರಿಸಲು ಬರುವುದಿಲ್ಲ. ಆದ್ದರಿಂದ ನಿಯಮದಲ್ಲಿ ಸೂಚಿಸಿರುವ ಹಾಜರಿದ್ದ ಎಂಬ ಪದವನ್ನು ಕೈಬಿಡಬೇಕು.

ಈ ಅಭ್ಯಾಸದಿಂದ ಆಗುವ ಪರಿಣಾಮವೇನು ? ಒಂದು ಮಂಡಳಿಯಲ್ಲಿ 15 ಚುನಾಯಿತ ನಿರ್ದೇಶಕರು ಇದ್ದು. 1/3 ಅಂಶದ ನಿರ್ದೇಶಕರು ಎಂದರೆ 5 ನಿರ್ದೇಶಕರು ಲಿಖಿತವಾಗಿ ಅವಿಶ್ವಾಸ ಮಂಡಿಸಬಹುದು. ಸಭೆಯನ್ನು ಕರೆದಾಗ ಕೋರಂ ಸಂಖ್ಯೆ 8 ಆಗುತ್ತದೆ. ಆ ಎಂಟು ನಿರ್ದೇಶಕರಲ್ಲಿ 2/3 ಅಂಶದ ನಿರ್ದೇಕರು ಅಂದರೆ 6 ನಿರ್ದೇಶಕರು ಒಪ್ಪಿದರೆ ಅವಿಶ್ವಾಸ ಒಪ್ಪಿಗೆಯಾಗದಂತೆ ಇದು ಕಾನೂನಿನ ಉದ್ದೇಶವಲ್ಲ. ಇದು ಇರಬೇಕಾದದ್ದು 2/3 ಅಂಶದ ಚುನಾಯಿತ ನಿರ್ದೇಶಕರು ಎಂದರೆ 10 ನಿರ್ದೇಶಕರ ಒಪ್ಪಿಗೆ ಬೇಕು (15 ರಲ್ಲಿ 2/3 ಅಂಶ 10). ಅಂದರೆ ನಿಯಮ 14ಎಕೆಕೆ(11)ಇರುವ ಹಾಜರಿದ್ದ ಪದ ಕೈಬಿಡಬೇಕು.

ಅದೇ ರೀತಿ ರಾಜ್ಯ ಮಟ್ಟದ ಸಂಸ್ಥೆಗಳನ್ನು ಗಮನಿಸೋಣ. ಒಂದು ರಾಜ್ಯ ಮಟ್ಟದ ಮಹಾಮಂಡಳದಲ್ಲಿ ಪದನಿಮಿತ್ತ ನಿರ್ದೇಶಕರು ಉಪನಿಯಮಗಳಲ್ಲಿ ಸೇರಿಸಲಾಗಿದೆ. ಅಂದರೆ ರಾಜ್ಯ ಮಟ್ಟದ ನಾಲ್ಕು ಮಹಾಮಂಡಳದ ಅಧ್ಯಕ್ಷರು ಪದನಿಮಿತ್ತ ನಿರ್ದೇಶಕರಾಗಿದ್ದರೆ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಸಿ ಆಯ್ಕೆಯಾಗದವರಲ್ಲಿ ಚುನಾಯಿತ ಪ್ರತಿನಿಧಿಗಳ ಸಂಖ್ಯೆ 15. ಆದರೆ ಇದರ ಜೊತೆಗೆ ನಿಬಂಧಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಮತ್ತು ಮತ್ತೊಬ್ಬರು ಮಂಡಲಿ ಸದಸ್ಯರಿದ್ದಾರೆ. ರಾಜ್ಯ ಮಟ್ಟದ ಸಂಸ್ಥೆಯಿದ್ದರಿಂದ ಇದರ ಒಟ್ಟು ಸಂಖ್ಯೆ 21ಕ್ಕೆ ಮೀರತಕ್ಕದ್ದಲ್ಲ. (ಸಂವಿಧಾನದ ಮಿತಿಯಂತೆ ಮತ್ತು ಕಾಯಿದೆ ಕಲಂ.28ಎ ಅನ್ವಯ).

ಈ ಸಂಸ್ಥೆಯಲ್ಲಿ ಚುನಾಯಿತು ಪ್ರತಿನಿಧಿಗಳು 15 ಎಂದಿದ್ದರೂ, 4 ರಾಜ್ಯಮಟ್ಟದ ಸಂಸ್ಥೆಗಳ ಪದನಿಮಿತ್ತ ಅಧ್ಯಕ್ಷರನ್ನು ಸೇರಿಸಲು ಪ್ರಯತ್ನಿಸಬಹುದು. ಏಕೆಂದರೆ ಈ ನಿರ್ದೇಶಕರು ಅಧಿಕಾರಿಗಳನ್ನು ಅಯಾಯ ರಾಜ್ಯ ಮಟ್ಟದ ಮಹಾಮಂಡಳಗಳ ಅಧ್ಯಕ್ಷರು ಇವರು ಚುನಾಯಿತ ಪ್ರತಿನಿಧಿಗಳಲ್ಲಿ ಸೇರುವುದಿಲ್ಲ. ಏಕೆಂದರೆ ಆ ನಾಲ್ಕು ಮಹಾಮಂಡಳದ ಅಧ್ಯಕ್ಷರು ಇವರು ಚುನಾಯಿತ ಪ್ರತಿನಿಧಿಗಲ್ಲಿ ಸೇರುವುದಿಲ್ಲ. ಏಕೆಂದರೆ ಆ ನಾಲ್ಕು ಮಹಾಮಂಡಳದ ಅಧ್ಯಕ್ಷರು ಅಧ್ಯಕ್ಷರು ಬದಲಾವಣೆಯಾದರೆ, ಬದಲಾವಣೆಯಾದ ಅಧ್ಯಕ್ಷರು ತಃತಾನೆ ಈ ಮಹಾಮಂಡಳದ ನಿರ್ದೇಶಕರಾಗುತ್ತಾರೆ. ಅಂದರೆ ಈ ಮಹಾಮಂಡಳದ ಚುನಾಯಿತ ನಿರ್ದೇಶಕರ ಸಂಖ್ಯೆ 15 ಎಂದಾದರೆ ಈಗಿನ ನಿಯಮ 14ಎಕೆಕೆ(11) ಅನ್ವಯ ಐವರು ನಿರ್ದೇಶಕರು ಲಿಖಿತ ಮನವಿಕೊಟ್ಟು – ಅವಿಶ್ವಾಸ ಚರ್ಚೆಯಲ್ಲಿ ಕೋರಂ ಶೇ.50 ಕ್ಕಿಂತ ಹೆಚ್ಚು ಅಂದರೆ 8 ನಿರ್ದೇಶಕರು ಹಾಜರಿದ್ದರು ಆರು ನಿರ್ದೇಶಕರು ಅವಿಶ್ವಾಸ ಪರಮತ ಹಾಕಿದರೆ ಒಪ್ಪಿಗೆ ಯಾಗುತ್ತದೆ. ಇದಕ್ಕೆ ಮತ್ತೊಂದು ಆಯಾಮದಲ್ಲಿ ನೋಡುವುದಾದರೆ ನಿಯಮ 14ಎಕೆ(11) ರಲ್ಲಿ ಮಂಡಳಿ ಸದಸ್ಯರ ಶೇ.50ರ ನಂತರದ ಸಂಖ್ಯೆ ಕೋರಂ ಆಗಿರತಕ್ಕದ್ದು ಎಂದಿದೆ, ಅಂದರೆ ಚುನಾಯಿತ ಪ್ರತಿನಿಧಿಗಳನ್ನು ಅವರ ಸ್ಥಾನದಿಂದ ಕೆಳಗಿಳಿಸಲು ಮಾಡಿದ ಅವಕಾಶಕ್ಕಿಂತ ವಿಷಯಗಳ ಚರ್ಚೆ ಮಾಡುವಾಗ ತೆಗೆದುಕೊಳ್ಳುವ ತೀರ್ಮಾನಕ್ಕೆ ಮಹತ್ವ ನೀಡಿದಂತಾಗುತ್ತದೆ. ಚುನಾಯಿತ ಪ್ರತಿನಿಧಿಗಳನ್ನು ಕೆಳಗಿಳಿಸಲು ಇನ್ನು ಹೆಚ್ಚಿನ ಪ್ರಾಮುಖ್ಯತೆ ನೀಡಬೇಡವೆ ?

ಆದರೆ ಈ ನೀತಿಯನ್ನು ಲೋಕಸಭೆ ವಿಧಾನಸಭೆಯ ಅವಿಶ್ವಾಸ ಮಂಡಳಿಯ ಸಂದರ್ಭದಲ್ಲಿ ಬಹುಮತದ ತೀರ್ಮಾನ ಅಂಗೀಕರಿಸಲಾಗುತ್ತದೆ. ಇದಕ್ಕೆ ಅಟಲ್ ವಾಜಪೈ ಸರ್ಕಾರ ಒಂದು ಮತದಿಂದ ಅಧಿಕಾರ ಕೆಳೆದುಕೊಂಡದ್ದನ್ನು ನೋಡಬಹುದು.

ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳಲ್ಲಿ 2/3 ಅಂಶದ ನಿರ್ದೇಶಕರು ಬಹುಮತದಿಂದ ಎಂದಿರುವುದು. ಸಹಕಾರ ಸಂಘದ ಮಂಡಲಿ ಪದಾಧಿಕಾರಿಗಳನ್ನು ಬೇಕೆಂದಾಗ ಕೆಳಗಿಳಿಸಲು ಅವಕಾಶ ಕಲ್ಪಿಸಿದರೆ, ಇದರ ದುರುಪಯೋಗವಾಗಬಹುದೆಂದು ಭಾವಿಸಿದರೆ. 2/3 ಅಂಶದ ನಿರ್ದೇಶಕರು ಸಂಖ್ಯೆ ಸರಿ. ಆದರೆ ಅದು ಬಹುಮತದ ಚುನಾಯಿತ ನಿರ್ದೇಶಕರು ಸಂಖ್ಯೆಯಾಗಿರಬೇಕೇ ಹೊರತು, ಹಾಜರಿದ್ದ ನಿರ್ದೇಶಕರಲ್ಲ. ಏಕೆಂದರೆ ಅದು ಕನಿಷ್ಠ ನಿಯಮ 14ಎಕೆ (4) ರಲ್ಲಿರುವ ಕೋರಂ ಸಂಖ್ಯೆಯಾದರೆ ಒಬ್ಬ ಚುನಾಯಿತ ಪದಾಧಿಕಾರಿಯನ್ನು ಸುಲಭವಾಗಿ ಕೆಳಗಿಳಿಸಬಾರದೆಂಬ ಭಾವನೆಯಿಂದ.

ಈ ಹಿಂದೆ 1998 ರಲ್ಲಿ ಸಹಕಾರ ಕಾಯಿದೆಗೆ ಸಮಗ್ರ ತಿದ್ದುಪಡಿ ತರುವಾಗ, ಅವಿಶ್ವಾಸ ನಿರ್ಣಯ ಸೇರಿಸಲು ಪ್ರಯತ್ನಿಸಿತ್ತ, ಮಂಡಳಿಯ ಅವಧಿಯನ್ನು ಮೂರು ವರ್ಷದಿಂದ ಐದು ವರ್ಷಕ್ಕೆ ಹೆಚ್ಚಿಸಿದ ಮೇಲೆ, ಅವಿಶ್ವಾಸ ಇರಬೇಕೆಂದು ತೀರ್ಮಾನಿಸಿದದರೂ, ಕೊನೆಯ ಕ್ಷಣದಲ್ಲಿ ಅದನ್ನು ಕೈಬಿಡಲಾಯಿತು. ಇದಕ್ಕೆ ಮುಖ್ಯ ಕಾರಣ ಆಯ್ಕೆಯಾದ ಪದಾಧಿಕಾರಿಗಳ ತಮ್ಮ ಸ್ಥಾನದಿಂದ ಮಾಡಬೇಕಾದ ಕೆಲಸ ಮಾಡಲು ಐದು ವರ್ಷಬೇಕಾಗುತ್ತದೆಂದು ಅವಿಶ್ವಾಸ ಅವಕಾಶ ಕಲ್ಪಿಸಿದರೆ, ಅವರ ಸ್ಥಾನ ಉಳಿಸಿಕೊಳ್ಳಲ, ನಿರ್ದೇಶಕರ ಜೊತೆ ಹೊಂದಾಣಿಕೆ ಮಾಡಿಕೊಳ್ಳಬಹುದು ಮತ್ತು ಅದು ಆ ಸಹಕಾರ ಸಂಘದ ಹಿತಾಸಕ್ತಿಗೆ ವಿರುದ್ಧವಾಗಿರಬಹುದು ಎಂಬ ಶಂಕೆಯಿಂದ.

ಈ ಲೇಖನದ ಮುಖ್ಯ ಉದ್ದೇಶ ಕಾಯಿದೆ ಕಲಂ.29ಹೆಚ್(2) ರಲ್ಲಿ 2/3 ಚುನಾಯಿತ ನಿರ್ದೇಶಕರು ಎಂಬುದಕ್ಕೆ ಬದಲಾಗಿ ನಿಯಮ 14ಎಕೆಕೆ(11)ರಲ್ಲಿ ಹಾಜರಿದ್ದ ಎಂಬ ಪದ ಸೇರಿಸಿರುವುದನ್ನು ಕೈಬಿಡದಿದ್ದರೆ ಇದು ಅಭ್ಯಾಸ ತಂದೊಡ್ಡಬಹುದೆಂದು.

# "ಸಮಯ ನಿರ್ವಹಣೆಯ ಸಿದ್ಧ ಸೂತ್ರಗಳು"

– ಶ್ರೀ ಧೀರೇಂದ್ರ ನಾಗರಹಳ್ಳಿ

ಸಮಯ ನಿರ್ವಹಣೆ ಈಗಿನ ಪ್ರಚಲಿತ ದಿಡುಗಿನ ಬದುಕಿನಲ್ಲಿ ಒಂದು ಅತಿ ಮುಖ್ಯವಾದ ಭಾಗ. Social Life, personal life and professional life ಗಳ ಮಧ್ಯೆ ಸಮತೋಲನ ಕಾಪಾಡಬೇಕಾಗಿದೆ. ಅಷ್ಟೆ ಅಲ್ಲ Social life, personal life and Professional life ಗಳನ್ನು ಮೀರಿರುವ ಆತ್ಮ ಸಂತೋಷಕ್ಕಾಗಿಯೇ ಇರುವ PASSIONಗೂ ನಾವು ಸಮಯವನ್ನು ಕೊಡಬೇಕಾಗಿದೆ. ಇವೆಲ್ಲವನ್ನು ಗಮನಿಸಿದಾಗ ನಮಗೊದಗಿರುವ ಸಮಯವನ್ನು ಹೇಗೆ ವ್ಯವಸ್ಥಿತವಾಗಿ ನಿಭಾಯಿಸಬೇಕು? ಇನ್ನುವ ಪ್ರಶ್ನೆ ಕಾಡುವುದು ಸಹಜ. ಕೆಳಗೆ ಕೊಡಲಾಗಿರುವ ಕೆಲವು ಸಿದ್ಧ ಸೂತ್ರಗಳಿಂದ ಸಮಯದ ನಿರ್ವಹಣೆ ಸುಲಭವಾಗಿ ಬಹುದೇನೊ? ಇಲ್ಲಿರುವ ಈ ಕೆಳಗಿನ ಸೂತ್ರಗಳು ಯಾವುದೂ ಹೊಸದಲ್ಲ. ಆದರೆ ನಾವು ನೆನಪಿನಲ್ಲಿಟ್ಟು ಕೊಳ್ಳಲು ಸಹಾಯವಾಗುವಂತೆ M to T Rule ಎಂದು ಕರೆಯಲಾಗಿದೆ. ಇದರಿಂದ ಸಮಯ ನಿರ್ವಹಣೆ ಒಂದು ದಿನದಲ್ಲಿ ಸಾಧ್ಯವಾಗುತ್ತದೆ. ಅನ್ನುವುದು ಭ್ರಮೆ. ಈ ಒಂದು ಸೂತ್ರಗಳಿಂದ ಸಮಯ ನಿರ್ವಹಣೆಗೆ ಒಂದು ಸುಳಿವು ಸಿಗುವುದು ಮತ್ತು ದಿನಂಪ್ರತಿ ಜೀವನದಲ್ಲಿ ಅಳವಡಿಸಿ ಕೊಂಡರೆ ಸ್ವಲ್ಪ ಸಮಯದ ನಂತರ ಸಮಯದ ನಿರ್ವಹಣೆ ಸಾಧ್ಯವಾಗಬಹುದು.

**M-Managing Distraction :** ಕೆಲಸದ ಮಧ್ಯೆ ತೂರಿ ಬರುವ ಅನಗತ್ಯ ವಿಚಾರಗಳನ್ನು ನಿಧಾನವಾಗಿ ದೂರ ಇಡುತ್ತಾ ಹೋಗುವುದು. ಹೀಗೆ ಮಾಡುವುದರಿಂದ ಒಂದೇ ವಿಚಾರದ ಮೇಲೆ ಗಮನವನ್ನು ಕೇಂದ್ರೀಕರಿಸಲು ಸಾಧ್ಯವಾಗುತ್ತದೆ. ಆಗ ನಮಗೆ ತುಂಬಾ ದಕ್ಷತೆಯಿಂದ ಕೆಲಸ ಮಾಡುವುದಕ್ಕಾಗುವುದು.

**N – Saying 'NO' :** ಕೆಲಸದ ಮಧ್ಯೆ ಕಛೇರಿಯಲ್ಲಿಯೇ ಆಗಲಿ ಅಥವಾ ಬೇರಲ್ಲೆ ಆಗಲಿ ಕೆಲಸಗಳನ್ನು ಒಂದಾದ ಮೇಲೆ ಒಂದನ್ನು ಒಟ್ಟುವುದು ಸಹಜ. ಆದರೆ ಪ್ರತಿಯೊಬ್ಬರ ಇತಿಮಿತಿಗಳು ಬೇರೆ ಬೇರೆಯಾಗಿರುತ್ತವೆ. ಹಾಗಾಗಿ ಯಾರೊ ಇನ್ನೊಬ್ಬರು ನಾಲ್ಕು ಕೆಲಸಗಳನ್ನು ಮೇಲೆ ಎಳೆದುಕೊಂಡು ಮಾಡುತ್ತಾರೆ. ಅಂತ ನಾವು ಹೇಗೆ ಮಾಡಲಾಗುವುದಿಲ್ಲ. ಹಾಗಾಗಿ ನಮ್ಮ ಇತಿಮಿತಿಗಳನ್ನು ಅರ್ಥ ಮಾಡಿಕೊಂಡು ವಹಿಸುತ್ತಿರುವ ಕೆಲಸಗಳ ಆದ್ಯತೆಯನ್ನು ಗಮನದಲ್ಲಿಟ್ಟುಕೊಂಡು ಆಗುವುದಿಲ್ಲ ಎನ್ನುವ ಉತ್ತರವನ್ನು ತುಂಬಾ ವಿನಯದಿಂದ ಹೇಳುವುದನ್ನು ರೂಢಿ ಮಾಡಿಕೊಳ್ಳಬೇಕು. ಯಾರದೊ ಮರ್ಜಿ ಅಥವಾ ಮುಲಾಜಿಗೆ ಕಟ್ಟು ಬಿದ್ದು ಬಹಳ ಕೆಲಸಗಳನ್ನು ಒಪ್ಪಿಕೊಳ್ಳದೆ ಇರುವುದು ಜಾಣತನ.

**O – Orderly Execution of tasks :** ಕೆಲಸಗಳ ಸಂಖ್ಯೆ ಹೆಚ್ಚಾದಾಗ ಮತ್ತು ಕೈಯಲ್ಲಿರುವ ಅವಿಷ್ಟು ಕೆಲಸಗಳನ್ನು ಮುಗಿಸಲೇ ಬೇಕಿರುವಾಗ, ಎಲ್ಲಾ ಕೆಲಸಗಳಿಗೂ ಒಮ್ಮೆಲೆ ಕೈ ಹಾಕದೆ ನಿಧಾನವಾಗಿ ಒಂದಾದ ನಂತರ ಒಂದು ಕೆಲಸವನ್ನು ಕೈಗೆತ್ತಿಕೊಳ್ಳುವುದು ಕೆಲಸಗಳನ್ನು ಮುಗಿಸಲು ಸಹಕಾರಿಯಾಗುತ್ತದೆ.

**P - Prioritization :** ಯಾವ ಕೆಲಸವನ್ನು ಮೊದಲು ಮತ್ತು ನಂತರದ ಕೆಲಸಗಳನ್ನು ಯಾವಾಗ ಮಾಡಬೇಕು ಎನ್ನುವ ಆದ್ಯತೆಯನ್ನು ಸಿದ್ಧಪಡಿಸಿಕೊಳ್ಳುವುದು.

**Q - Questioning :** ಬಂದ ಕೆಲಸಗಳನ್ನೆಲ್ಲಾ ಒಪ್ಪಿಕೊಳ್ಳದೆ 'ಪ್ರಶ್ನೆಗಳನ್ನು ಕೇಳಿ ಮನವರಿಕೆಯಾದ ನಂತರವೇ ಒಪ್ಪಿಕೊಳ್ಳುವುದನ್ನು ರೂಢಿಸಿ ಕೊಂಡರೆ ಇನ್ನೂ ದಕ್ಷತೆಯಿಂದ ಕೆಲಸ ಮಾಡಲು ಸಾಧ್ಯವಾಗುತ್ತದೆ.

**R – Readiness :** ಕೆಲಸಗಳನ್ನು ಯಾವ ಕ್ಷಣದಲ್ಲಿಯಾದರೂ ಬರಬಹುದು ಹಾಗಾಗಿ ಬೌದ್ಧಿಕವಾಗಿ / ಶಾರೀರಿಕವಾಗಿಯಾಗಲಿ ಯಾವ ಕ್ಷಣದಲ್ಲಿಯಾದರೂ ಕೆಲಸವನ್ನು ಒಪ್ಪಿಕೊಳ್ಳಲು ಸಿದ್ಧರಾಗಿರುವುದು.

**S – Effectively Scheduling tasks :** ಸಾಧ್ಯವಾದರೆ ಕೆಲಸಗಳ ಒಂದು ವೇಳಾ ಪಟ್ಟಿ ತಯಾರಿಸಿ ಅದಕ್ಕೆ ತಕ್ಕಂತೆ ಮುಗಿಸುವುದು.

**T – To-do list :** ಮಾಡಬೇಕಾಗಿರುವ ಕೆಲಸಗಳ ಒಂದು ಪಟ್ಟಿಯನ್ನು ಸಿದ್ಧ ಪಡಿಸಿಟ್ಟು ಕೊಳ್ಳುವುದು.

**ಇದು 'M to T Rule'**

ನೆನಪಿಡಿ ಇದರಿಂದ ಸಮಯ ನಿರ್ವಹಣೆ ಒಂದು ದಿನದಲ್ಲಿ ಸಾಧ್ಯವಾಗುತ್ತದೆ. ಅನ್ನುವುದು ಭ್ರಮೆ. ಈ ಒಂದು ಸೂತ್ರಗಳಿಂದ ಸಮಯ ನಿರ್ವಹಣೆಗೆ ಒಂದು ಸುಳಿವು ಸಿಗುವುದು ಮತ್ತು ದಿನಂಪ್ರತಿ ಜೀವನದಲ್ಲಿ ಅಳವಡಿಸಿ ಕೊಂಡರೆ ಸ್ವಲ್ಪ ಸಮಯದ ನಂತರ ಸಮಯದ ನಿರ್ವಹಣೆ ಸಾಧ್ಯವಾಗಬಹುದು.

# ವಿಶ್ವ ಆರೋಗ್ಯ ದಿನ :
# ಆರೋಗ್ಯಕಾರಿ ಜೀವನ ಶೈಲಿಯ ಪ್ರಮುಖ ಅಂಶಗಳು

– ಶ್ರೀ ಶಂಕರ್ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

World Health Organization

**ಪೀಠಿಕೆ :**

ವಿಶ್ವದೆಲ್ಲೆಡೆಯಲ್ಲಿ ಏಪ್ರಿಲ್ 7 ರಂದು ವಿಶ್ವ ಆರೋಗ್ಯ ಸಂಸ್ಥೆಯ ಆದೇಶದಂತೆ ವಿಶ್ವ ಆರೋಗ್ಯ ದಿನವನ್ನು ಆಚರಿಸಲಾಗುತ್ತದೆ. ಆರೋಗ್ಯದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದೇ ಇದರ ಉದ್ದೇಶವಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯು ಪ್ರತೀ ವರ್ಷ ಹೊಸ ಧ್ಯೇಯವಾಕ್ಯದೊಂದಿಗೆ ವಿಶ್ವ ಆರೋಗ್ಯ ದಿನವನ್ನು ಆಚರಿಸುತ್ತಿದೆ.

ಈ ವರ್ಷ ವಿಶ್ವ ಆರೋಗ್ಯ ಸಂಸ್ಥೆಯು "ಉತ್ತಮ ಆರೋಗ್ಯಕರ ಜಗತ್ತನ್ನು ನಿರ್ಮಿಸುವುದು" (Building a fairer, healthier world) ಈ ಬಾರಿಯ ಧ್ಯೇಯವಾಕ್ಯವಾಗಿದೆ. ಇದಕ್ಕೆ ಮೊದಲು 2012ರಲ್ಲಿ ಜೀವಿತಾವಧಿ ಹೆಚ್ಚಳ, 2013ರಲ್ಲಿ ರಕ್ತದೊತ್ತಡ ನಿಯಂತ್ರಣ ಮತ್ತು 2014ರಲ್ಲಿ ವೆಕ್ಟರ್ ಮೂಲಕ ಹರಡುವಂತಹ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸಿತ್ತು. 2020 ರಲ್ಲಿ 'ಆರೋಗ್ಯ, ರಕ್ಷಣೆಯಲ್ಲಿ ದಾದಿಯರ ಮತ್ತು ಶುಶ್ರೂಷಕಿಯರ ಪಾತ್ರ' ಎಂಬುದಾಗಿದೆ. ಇದರೊಂದಿಗೆ ವಿಶ್ವ ಆರೋಗ್ಯ ದಿನದಂದು ಗದ್ದೆಯಿಂದ ಬಟ್ಟಲಿಗೆ, ಆಹಾರ ಸುರಕ್ಷಿತವಾಗಿರಲಿ ಎನ್ನುವ ಅಭಿಯಾನವನ್ನು ಕೂಡ ಆರಂಭಿಸಿತ್ತು. ವಿಶ್ವ ಆರೋಗ್ಯ ದಿನದಂದು ನೀವು ಕೆಲವೊಂದು ಆರೋಗ್ಯಕಾರಿ ಜೀವನಶೈಲಿ ಪಾಲಿಸಬೇಕು. ಇದಕ್ಕೆ ನಾವು ನಿಮಗೆ ಕೆಲವು ಅಂಶಗಳನ್ನು ನೀಡಲಿದ್ದೇವೆ.

**ಉತ್ತಮವಾದ ಆಹಾರ ಕ್ರಮಗಳು :**

ಉತ್ತಮವಾದ ಆಹಾರ ಕ್ರಮಗಳು ಎಂದರೆ ನೀವು ಹಸಿವಿನಿಂದ ಇರಬೇಕೆಂದಲ್ಲ. ನೀವು ನಿಮಗೆ ಬೇಕಾಗಿರುವಂತಹ ಆಹಾರ ತಿಂದು ಆರೋಗ್ಯವಾಗಿರಬಹುದು. ಇದಕ್ಕಾಗಿ ಸಂಸ್ಕರಿತ ಆಹಾರ ದೂರವಿಡಿ ಮತ್ತು ಆರೋಗ್ಯವಾಗಿರುವ ಆಹಾರ ಹೆಚ್ಚು ಸೇವಿಸಿ. ಹಣ್ಣು, ತರಕಾರಿ, ಧಾನ್ಯ, ಕೊಬ್ಬು ಕಡಿಮೆ ಇರುವ ಹಾಲಿನ ಉತ್ಪನ್ನ, ತೆಳು ಮಾಂಸ, ಮೀನು, ಬೀನ್ಸ್ ಮತ್ತು ಬೀಜಗಳನ್ನು ತಿನ್ನುವುದು.

**ಉತ್ತಮವಾದ ಪಾನೀಯ ಸೇವಿಸಿ :**

ಕೆಲವರು ದಿನವಿಡಿ ತಂಪು ಪಾನೀಯ ಮತ್ತು ಸೋಡಾ ಕುಡಿಯುತ್ತಾ ಇರುವರು. ಆದರೆ ಆರೋಗ್ಯಕಾರಿ ದೇಹಕ್ಕೆ ಇದರ ಅಗತ್ಯವಿಲ್ಲ. ನೀರು ನಿಮ್ಮ ಪ್ರಮುಖ ಪಾನೀಯವಾಗಲಿ ಮತ್ತು ಗ್ರೀನ್ ಟೀ ಕುಡಿಯುವುದು ಉತ್ತಮ.

**ಹಣ್ಣುಗಳು ಮತ್ತು ತರಕಾರಿಗಳನ್ನು ಸರಿಯಾಗಿ ತೊಳೆದು ತಿನ್ನುವುದು :**

ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಹಣ್ಣು ಹಾಗೂ ತರಕಾರಿಗಳಿಗೆ ಕೀಟ ನಾಶಕ ಸಿಂಪಡಿಸುವ ಕಾರಣದಿಂದಾಗಿ ನೀವು ಇದನ್ನು ಬಳಸುವ ಮೊದಲು ಸರಿಯಾಗಿ ತೊಳೆದುಕೊಳ್ಳಬೇಕು. ಕೆಲವೊಂದು ಸಲ ಕಲುಷಿತ ನೀರು ಮತ್ತು ಮಣ್ಣಿನಲ್ಲಿ ಇರುವ ಕೆಲವು ಬ್ಯಾಕ್ಟೀರಿಯಾಗಳು ಇದರಲ್ಲಿ ಇರಬಹುದು. ಹೀಗಾಗಿ ಶುದ್ಧ ನೀರಿನಿಂದ ಇದನ್ನು ತೊಳೆದು ತಿನ್ನುವುದು ಹಾಗೂ ಹಣ್ಣು ಹಾಗೂ ತರಕಾರಿಗಳನ್ನು ಸಿಪ್ಪೆ ತೆಗೆದು ಬಳಸಿ. ಸಿಪ್ಪೆ ತೆಗೆಯುವ ಮೊದಲು ಸರಿಯಾಗಿ ತೊಳೆದು ತಿನ್ನುವುದು ಅಭ್ಯಾಸ ಮಾಡಿಕೊಳ್ಳಿ.

**ಬೆಳಗಿನ ಜಾವಾ ವ್ಯಾಯಾಮ ಮಾಡುವುದು :**

ಬೆಳಗಿನ ಜಾವಾ ದಿನಾಲೂ ನೀವು 30 ರಿಂದ 60 ನಿಮಿಷ ಕಾಲ ವ್ಯಾಯಾಮ ಮಾಡಬೇಕು. ಇದು ನಿದ್ರೆಗೆ ಸಹಕರಿಸುವ ಜತೆಗೆ, ದೇಹದಲ್ಲಿ ಶಕ್ತಿ ನೀಡಿ ನೀವು ತುಂಬಾ ಸಂತೋಷವಾಗಿ ಇರುವಂತೆ ಮಾಡುವುದು. ವ್ಯಾಯಾಮವು ನಿಮ್ಮ ಸಂಪೂರ್ಣ ಆರೋಗ್ಯ ಸುಧಾರಣೆ ಮಾಡಿ ಮಧುಮೇಹ ಮತ್ತು ಅಧಿಕ ರಕ್ತದೊತ್ತಡದ ಅಪಾಯದಿಂದ ತಮ್ಮನ್ನು ಪಾರು ಮಾಡುತ್ತದೆ.

**ಜಿಮ್‌ಗೆ ಹೋಗುವುದು :**

ಜಿಮ್‌ಗೆ ಹೋಗುವುದು ತುಂಬಾ ಸುಲಭ. ಜಿಮ್‌ಗೆ ಹೋದರೆ ಅಲ್ಲಿ ನೀವು ಕೆಲವು ಕಠಿಣ ವ್ಯಾಯಾಮಗಳನ್ನು ತರಬೇತುದಾರರ ನೇರವಿನಿಂದ ಮಾಡಬಹುದು. ನೀವು ಇದನ್ನು ವ್ಯರ್ಥ ಎಂದು ಭಾವಿಸಬಾರದು. ಇದರ ಬದಲಿಗೆ ಸ್ನೇಹಿತನ ಜತೆಗೆ ಸೇರಿ ಜಿಮ್‌ಗೆ ಹೋದರೆ ಇಬ್ಬರಿಗೂ ಪ್ರೇರಣೆ ಸಿಗುವುದು.

**ಆಹಾರವನ್ನು ಸರಿಯಾಗಿ ಬೇಯಿಸಿ ತಿನ್ನುವುದು :**

ಕೆಲವರು ಅರೆ ಬೇಯಿಸಿದ ಆಹಾರ ಸೇವಿಸಲು ತುಂಬಾ ಇಷ್ಟಪಡುವರು. ಆದರೆ ಇದು ತಪ್ಪು. ಮಾಂಸ, ಮೊಟ್ಟೆ ಮತ್ತು ಮೀನುಗಳಲ್ಲಿ ಇರುವಂತಹ ಬ್ಯಾಕ್ಟೀರಿಯಾ ತೆಗೆಯಲು ಇದನ್ನು ಸರಿಯಾಗಿ ಬೇಯಿಸಬೇಕು. ಇದರಿಂದ

ಕೆಲವು ಸೋಂಕು ಅಥವಾ ಬ್ಯಾಕ್ಟೀರಿಯಾದಿಂದ ಬರುವ ಕಾಯಿಲೆ ಅಪಾಯ ಕಡಿಮೆ ಆಗುವುದು. ಕೆಲವು ಬ್ಯಾಕ್ಟೀರಿಯಾಗಳು ಪ್ರಾಣಾಂತಿಕ ಕೂಡ ಆಗಬಲ್ಲದು. ಆದ್ದರಿಂದ ಇಂತಹ ಪದಾರ್ಥಗಳನ್ನು ಹೆಚ್ಚಾಗಿ ಬೇಯಿಸಿ ತಿನ್ನುವುದನ್ನು ಅಭ್ಯಾಸ ಮಾಡಿಕೊಳ್ಳಿ.

**ಆರೋಗ್ಯಕರ ರೆಸ್ಟೋರೆಂಟ್‌ಗೆ ಹೋಗುವುದು :**

ಬಾರ್ ಮತ್ತು ಅನಾರೋಗ್ಯಕರ ರೆಸ್ಟೋರೆಂಟ್‌ಗಳಿಗೆ ಹೋಗುವ ಬದಲು ನೀವು ಸ್ನೇಹಿತರ ಜತೆಗೆ ಚಾ, ಬಾಸ್ಕೆಟ್ ಬಾಲ್ ಅಥವಾ ಪಾರ್ಕ್‌ನಲ್ಲಿ ಹೋಗಿ ಜಾಗಿಂಗ್ ಮಾಡಿ. ಆರೋಗ್ಯಕರ ರೆಸ್ಟೋರೆಂಟ್‌ಗಳನ್ನು ನೀವು ಹೋಗುವುದು ಉತ್ತಮವಾಗಿರುತ್ತದೆ.

**ಖುಷಿ ನೀಡುವ ವ್ಯಾಯಾಮ ಮಾಡುವುದು :**

ನಿಮ್ಮ ಸ್ನೇಹಿತರು ಮತ್ತು ನಿಮಗೆ ಸವಾಲುಗಳನ್ನು ಹಾಕಿ. ಕ್ರೀಡೆಗಳನ್ನು ನೀವು ಆಡಿ. ಓಡುವುದನ್ನು ನೀವು ಅಭ್ಯಾಸ ಮಾಡಬಹುದು. ವ್ಯಾಯಾಮವು ಬೇಸರ ಮೂಡಿಸದಂತೆ ನೀವು ಬೇರೆ ವಿಧಾನಗಳನ್ನು ಕಂಡುಕೊಳ್ಳಬಹುದಾಗಿದೆ.

**ವಿಟಮಿನ್ ಇರುವ ಆಹಾರವನ್ನು ಸೇವಿಸುವುದು :**

ಕೆಲವರಲ್ಲಿ ವಿಟಮಿನ್ ಕೊರತೆ ಇರುವುದು. ಯಾಕೆಂದರೆ ಇವರು ದೇಹಕ್ಕೆ ಬೇಕಾಗಿರುವುದನ್ನು ತಿನ್ನುವುದಿಲ್ಲ. ವಿಟಮಿನ್ ಸಿ ಇರುವಂತಹ ಹಣ್ಣುಗಳು ಕೆಲವರಿಗೆ ಇಷ್ಟವಾಗದೆ ಇರಬಹುದು. ಲಾಕ್ಟೋಸ್ ಅಸಹಿಷ್ಣುತೆ ಇರುವ ಜನರಿಗೆ ವಿಟಮಿನ್ ಬಿ ಅಗತ್ಯವಾಗಿರುವುದು. ತಾವೆಲ್ಲರೂ ವಿಟಮಿನ್ ಇರುವ ಆಹಾರವನ್ನು ಹೆಚ್ಚಾಗಿ ತಿನ್ನುವುದನ್ನು ರೂಢಿಸಿಕೊಳ್ಳುವುದು ಉತ್ತಮ.

**ಉಪಸಂಹಾರ :**

ಎಲ್ಲರಿಗೂ ಆರೋಗ್ಯ ಎಂದರೆ ಎಲ್ಲರಿಗೂ ಉಚಿತ ಆರೋಗ್ಯ ಸೌಲಭ್ಯ ಎಂದರ್ಥವಿಲ್ಲ. ಯಾಕೆಂದರೆ ಜಗತ್ತಿನ ಯಾವ ರಾಷ್ಟ್ರವೂ ಎಲ್ಲರಿಗೂ ಏಕಕಾಲದಲ್ಲಿ ಎಲ್ಲಾ ಸಮಯದಲ್ಲಿ ಉಚಿತ ಆರೋಗ್ಯ ಸೌಲಭ್ಯ ಕೊಡಲು ಸಾಧ್ಯವಾಗದು. ಆದರೂ ಎಲ್ಲರಿಗೂ ಕನಿಷ್ಠ ಮೂಲಭೂತ ವೈದ್ಯಕೀಯ ಸೌಲಭ್ಯ ನೀಡಿ ಹಂತ ಹಂತವಾಗಿ ಉನ್ನತ ವೈದ್ಯಕೀಯ ಸೌಲಭ್ಯ ನೀಡುವ ಸದುದ್ದೇಶ ಹೊಂದಿದೆ. 'ಎಲ್ಲರಿಗೂ ಎಲ್ಲೆಲ್ಲಿಯೂ ಆರೋಗ್ಯ ಎಂಬುದು ಕೇವಲ ವ್ಯಕ್ತಿ ಆಧಾರಿತ ಸೇವೆ ಆಗಿರದೆ, ಜಗತ್ತಿನ ಎಲ್ಲ ಸಮುದಾಯಕ್ಕೆ ಮೂಲಭೂತ ವೈದ್ಯಕೀಯ ಸೌಲಭ್ಯ ನೀಡುವುದೇ ಆಗಿರುತ್ತದೆ. ಉದಾಹರಣೆಗೆ ನೀರಿಗೆ ಫ್ಲೋರೈಡ್ ಮಿಶ್ರಣ ಅಥವಾ ಸೊಳ್ಳೆ ಉತ್ಪಾದನೆಗೆ ಪ್ರೋತ್ಸಾಹಿಸುವ ವಾತಾವರಣವನ್ನು ನಿಯಂತ್ರಿಸವುದು ಅಥವಾ ವೈರಾಣು ಉತ್ಪತ್ತಿಯಾಗದಂತೆ ತಡೆಯುವ ಉದ್ದೇಶ ಹೊಂದಿದೆ. ಎಲ್ಲರಿಗೂ ಆರೋಗ್ಯ ಎಂದರೆ ಕೇವಲ ವೈದ್ಯಕೀಯ ಸೌಲಭ್ಯ ಮತ್ತು ಹಣಕಾಸಿನ ನೆರವು ನೀಡುವುದು ಆಗಿರುವುದಿಲ್ಲ. ಮೂಲಭೂತ ಸೌಲಭ್ಯಗಳಾದ ಶುದ್ದ ನೀರು, ಶುದ್ದ ಗಾಳಿ, ಶುದ್ದ ಬೆಳಕು ನೀಡಿ ರೋಗವನ್ನು ತಡೆಗಟ್ಟುವ ಪ್ರಕ್ರಿಯೆ ಹೆಚ್ಚು ಒತ್ತು ನೀಡುವ ಸದುದ್ದೇಶ ಹೊಂದಿದೆ.

## ಇ–ಸ್ಟಾಂಪಿಂಗ್ ಉದ್ಘಾಟನೆ



**ಮೈಸೂರು :** ದಿನಾಂಕ 02.04.2021 ರಂದು ಮೈಸೂರು ಜಿಲ್ಲೆಯ ಕಲ್ಯಾಣಿ ಸೌಹಾರ್ದ ಸಹಕಾರಿ ನಿ., ಇದರ ಇ–ಸ್ಟಾಂಪಿಂಗ್ ಕೇಂದ್ರವನ್ನು ಮಾನ್ಯ ಶಾಸಕರಾದ ಶ್ರೀ ನಾಗೇಂದ್ರರವರು ಉದ್ಘಾಟಿಸಿದ್ದರು.

## ದೇಣಿಗೆ

**ಕೊಪ್ಪಳ :** ಶ್ರೀ ಶುಕಮುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಗೇರಾ, ಕೊಪ್ಪಳ ಸಹಕಾರಿಯ ವತಿಯಿಂದ ಕೊಪ್ಪಳ ತಾಲೂಕಿನ ಗಿಣಿಗೇರಾ ಕೆರೆಯ ಪುನಶ್ಚೇತನ ಮತ್ತು ಅಭಿವೃದ್ಧಿಗಾಗಿ 11,000/– ರೂ ದೇಣಿಗೆಯನ್ನು ನೀಡಲಾಯಿತು.



**ಕೊಪ್ಪಳ :** ಸಹಕಾರ ಭಾರತಿ ಕೊಪ್ಪಳ ಜಿಲ್ಲೆಯ ವತಿಯಿಂದ ದಿನಾಂಕ 04–03–2021 ರಂದು ಬೆಳಗ್ಗೆ 10:30 ಗಂಟೆಗೆ ಕನಕಗಿರಿ ತಾಲೂಕಿನಲ್ಲಿ ಅಭ್ಯಾಸ ವರ್ಗವನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಕಾರ್ಯಕ್ರಮದ ಉದ್ಘಾಟಕರಾಗಿ ಮಾನ್ಯ ಸಹಕಾರ ಭಾರತೀಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ರಮೇಶ ವೈದ್ಯಜೀ ಹಾಗೂ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ, ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಮಾನ್ಯ ನಿರ್ದೇಶಕರಾದ ಶ್ರೀ ವಿರುಪಾಕ್ಷಪ್ಪ ಮುಷ್ಟಿ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ ಪತ್ತಾರ ರವರು ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ರವೀಂದ್ರನಾಥ ಹಾಗು ಆರ್.ಎಸ್.ಎಸ್ ವಿಭಾಗೀಯ ಕಾರ್ಯವಾಹಕರುಗಳಾದ ಶ್ರೀ ಕೇಶವ ಜಿ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಒಟ್ಟು 129 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-12)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-12)



– ಶ್ರೀ ಯಶವಂತ ಡೋಂಗ್ರೆ




ಎಸ್‌ಡಿಜಿ 12: ಜವಾಬ್ದಾರಿಯುತ ಬಳಸುವಿಕೆ ಮತ್ತು ಉತ್ಪಾದನೆ

ಸುಸ್ಥಿರ ಉತ್ಪಾದನೆ ಮತ್ತು ಬಳಸುವಿಕೆಯ ಮಾದರಿಗಳನ್ನು ಅನುಷ್ಠಾನಗೊಳಿಸುವುದು (Ensure sustainable consumption and production patterns) ಸುಸ್ಥಿರ ಅಭಿವೃದ್ಧಿಯ ಪ್ರಾಥಮಿಕ ಅಗತ್ಯಗಳಲ್ಲೊಂದು. ಉತ್ಪಾದನೆ ಮತ್ತು ಬಳಕೆ ಈ ಎರಡೂ ಪ್ರಕ್ರಿಯೆಗಳು ಸುಸ್ಥಿರ ಮಾದರಿಗಳನ್ನು ಅನುಸರಿಸಬೇಕೆನ್ನುವುದು ಈ ಗುರಿಯ ಉದ್ದೇಶ. ಜಗತ್ತು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಈಗಿರುವ ಉತ್ಪಾದನಾ ಕ್ರಮಗಳಲ್ಲಿ ಹಲವು ಮೂಲಭೂತ ಬದಲಾವಣೆಗಳನ್ನು ತರಬೇಕಾಗುತ್ತದೆ. ಕಚ್ಚಾವಸ್ತುಗಳ ಉಪಯೋಗ, ಉತ್ಪಾದನಾ ತಂತ್ರಜ್ಞಾನದ ಕ್ಷಮತೆ ಮುಂತಾದುವುಗಳು ಇನ್ನೂ ಉನ್ನತ ಮಟ್ಟಕ್ಕೇರಬೇಕಾದ ಅಗತ್ಯವಿದೆ. ಉತ್ಪಾದನೆ ಮತ್ತು ಬಳಕೆಗಳೆರಡೂ ಒಂದಕ್ಕೊಂದು ಪೂರಕವಾಗಿರುವುದರಿಂದ, ಬಳಕೆಯ ವಿಧಾನಗಳಲ್ಲೂ ಬದಲಾವಣೆಗಳಾಗಬೇಕಾಗುತ್ತದೆ. ಹೆಚ್ಚು ದುರ್ಬಳಕೆಗಳಾಗದಂತೆ, ತ್ಯಾಜ್ಯಗಳಿಂದ ಪರಿಸರಕ್ಕೆ ತೊಂದರೆಯಾಗದಂತೆ, ಸೀಮಿತ ಲಭ್ಯತೆಯ ಸಂಪನ್ಮೂಲಗಳನ್ನು ಆದಷ್ಟೂ ಕಡಿಮೆ ಬಳಸುವಂತೆ ಹೊಸ ವಿಧಾನಗಳನ್ನು ಉಪಯೋಗಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸುಸ್ಥಿರ ಉತ್ಪಾದನೆ ಮತ್ತು ಬಳಕೆ ಕುರಿತ ಕಾರ್ಯಕ್ರಮಗಳ ಹತ್ತು ವರ್ಷಗಳ ಚೌಕಟ್ಟನ್ನು ಸಿದ್ಧಪಡಿಸಿ ಎಲ್ಲ ದೇಶಗಳೂ ಕ್ರಮ ಕೈಗೊಳ್ಳಬೇಕೆಂದು ಈ ಗುರಿಯಲ್ಲಿ ತಿಳಿಸಲಾಗಿದೆ. 2030ರ ವೇಳೆಗೆ ನೈಸರ್ಗಿಕ ಸಂಪನ್ಮೂಲಗಳ ಸಮರ್ಥ ನಿರ್ವಹಣೆ ಮತ್ತು ಸುಸ್ಥಿರ ಬಳಕೆಯನ್ನು ಸಾಧಿಸುವುದು, ಮತ್ತು ಆಹಾರ ಉತ್ಪಾದನೆಯಲ್ಲಿ ಕೊಯ್ಲು ಪೂರ್ವ ಮತ್ತು ನಂತರದ ಪೂರೈಕೆ ಸರಪಳಿಯಲ್ಲಿ ಉಂಟಾಗುವ ನಷ್ಟವನ್ನು ಕಡಿಮೆಮಾಡಿ ಜಾಗತಿಕ ತಲಾ ಆಹಾರ ತ್ಯಾಜ್ಯದ ಪ್ರಮಾಣವನ್ನು ಈಗಿರುವ ಪ್ರಮಾಣದ ಅರ್ಧಕ್ಕಿಳಿಸುವುದು ಅತ್ಯಂತ ಅಗತ್ಯವೆಂದು ಈ ಗುರಿಯು ಅಪೇಕ್ಷಿಸುತ್ತದೆ.

2020ರ ವೇಳಗೆ ಸಾಧಿಸಬೇಕಾದ ಇನ್ನು ಕೆಲವು ಅಗತ್ಯಗಳನ್ನೂ ಈ ಗುರಿಯಲ್ಲಿ ನಿಗದಿಪಡಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದುವುಗಳೆಂದರೆ ಪರಿಸರಕ್ಕೆ ಹಾನಿತರುವ ರಾಸಾಯನಿಕಗಳು ಮತ್ತು ಎಲ್ಲ ಬಗೆಯ ತ್ಯಾಜ್ಯಗಳನ್ನು ಅಂತಾರಾಷ್ಟ್ರೀಯ ಮಾನದಂಡಗಳಿಗನುಸಾರವಾಗಿ ನಿರ್ವಹಿಸಿ ಗಾಳಿ, ನೀರು ಮತ್ತು ಮಣ್ಣಿಗೆ ಅವುಗಳ ಬಿಡುಗಡೆಯ ಪ್ರಮಾಣವನ್ನು ಅರ್ಧದಷ್ಟು ಕಡಿಮೆ ಮಾಡುವುದು ಮತ್ತು ತಡೆಗಟ್ಟುವಿಕೆ (ಪ್ರಿವೆಂಶನ್) ಕಡಿತ (ರಿಡಕ್ಷನ್) ಮತ್ತು ಮರುಬಳಕೆ (ರಿ ಯುಸ್) ಪ್ರಕ್ರಿಯೆಗಳನ್ನು ಬಳಸುವುದರ ಮೂಲಕ ಒಟ್ಟಾರೆ ಸಂಪನ್ಮೂಲ ಬಳಕೆಯನ್ನು ಮಿತಿಗೊಳಿಸುವುದು. ಈ ಎರಡೂ ಗುರಿಗಳು ಪರಿಸರ ರಕ್ಷಣೆ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಮಿಗತೆಯ ಮೂಲಕ ಸುಸ್ಥಿರ ಬೆಳವಣಿಗೆಗೆ ಸಹಾಕಾರಿಯಾಗುತ್ತದೆಂದು ಈ ಗುರಿಯು ಪರಿಭಾವಿಸುತ್ತದೆ.

ಸುಸ್ಥಿರ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ಮತ್ತು ಈ ಮಾಹಿತಿಗಳನ್ನು ತಮ್ಮ ವರದಿ ಪ್ರಕ್ರಿಯೆಯಲ್ಲಿ ಸೇರ್ಪಡೆಗೊಳಿಸಲು ಎಲ್ಲ ವ್ಯವಹಾರ ಸಂಸ್ಥೆಗಳಿಗೆ ಅದರಲ್ಲೂ ವಿಶೇಷವಾಗಿ ದೊಡ್ಡ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವುದು, ಸುಸ್ಥಿರ ಖರೀದಿ ಅಭ್ಯಾಸಗಳನ್ನು ಉತ್ತೇಜಿಸುವುದು, ಎಲ್ಲೆಡೆ ಜನರು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕುವಂತೆ ಸುಸ್ಥಿರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು, ಸುಸ್ಥಿರ ಉತ್ಪಾದನಾ ಪ್ರಕ್ರಿಯೆಯು ಸಾಧ್ಯವಾಗುವಂತೆ ಮಾಡಲು ಅಗತ್ಯ ತಂತ್ರಜ್ಞಾನವನ್ನು ಹೊಂದಲು ಸಾಧ್ಯವಾಗುವಂತೆ ಅಭಿವೃದ್ಧಿಶೀಲ ದೇಶಗಳಿಗೆ ನೆರವು ನೀಡುವುದು, ಪ್ರವಾಸೋದ್ಯಮದಂಥ ಉದ್ದಿಮೆಗಳು ಸ್ಥಳೀಯ ಸಂಸ್ಕೃತಿಯನ್ನು ಗೌರವಿಸುವಂತೆ ಮತ್ತು ಸ್ಥಳೀಯ ಉತ್ಪನ್ನಗಳನ್ನು ಬಳಸುವಂತೆ ನೋಡಿಕೊಳ್ಳುವುದು, ಹಾಗೂ ಸುಸ್ಥಿರ ಉತ್ಪಾದನೆ ಮತ್ತು ಬಳಕೆಯನ್ನು ಸಾಧ್ಯವಾಗಿಸಲು ಅಗತ್ಯವಾದ ನೀತಿಗಳು, ಕಾನೂರುಗಳು, ತೆರಿಗೆ ವ್ಯವಸ್ಥೆ ಮುಂತಾದುವುಗಳನ್ನು ಚಾಲ್ತಿಗೆ ತರುವ ಅಗತ್ಯವನ್ನು ಕೂಡ ಈ ಗುರಿಯಲ್ಲಿ ಒತ್ತಿ ಹೇಳಲಾಗಿದೆ.

ಹಾಲಿ ಚಾಲ್ತಿಯಲ್ಲಿರುವ ಉತ್ಪಾದನಾ ಮಾದರಿಗಳು ಮತ್ತು ಬಳಕೆಯ ಕ್ರಮಗಳಿಂದಾಗಿ ಆಹಾರ ಮತ್ತು ಕಚ್ಚಾವಸ್ತುಗಳೆರಡೂ ಅಪವ್ಯಯವಾಗುತ್ತಿರುವುದನ್ನು ಗಮನಿಸಬಹುದಾಗಿದೆ. ಜಗತ್ತಿನಾದ್ಯಂತ ಒಟ್ಟು

ಉಪಯೋಗದಲ್ಲಿರುವ ಆಹಾರ ಪದಾರ್ಥಗಳಲ್ಲಿ ಮೂರನೇ ಒಂದಂಶ ಈ ರೀತಿಯಲ್ಲಿ ಹಾಳಾಗುತ್ತಿದೆ ಎಂದು ಆಹಾರ ಮತ್ತು ಕೃಷಿ ಸಂಸ್ಥೆಯ ಅಧ್ಯಯನದಲ್ಲಿ ಅಂದಾಜಿಸಲಾಗಿದೆ. ಈ ರೀತಿ ಹಾಳಾಗುತ್ತಿರುವ ಆಹಾರದ ವಾರ್ಷಿಕ ಮೌಲ್ಯ ಸುಮಾರು ಒಂದು ಶತಕೋಟಿ ಡಾಲರ್‌ಗಳಷ್ಟಿದ್ದು, ಇದು ಜಗತ್ತಿನ 20 ಕೋಟಿ ಜನರಿಗೆ ವರ್ಷ ಪೂರ್ತಿ ಆಹಾರ ನೀಡಲು ಸಾಕಾಗುವಷ್ಟಾಗುತ್ತದೆ. ಜಗತ್ತಿನಾದ್ಯಂತ ಇಂಗಾಲಾಮ್ಲವನ್ನು ಹೆಚ್ಚಿಸುತ್ತಿರುವ ಮೂಲಗಳಲ್ಲಿ ಆಹಾರ ತ್ಯಾಜ್ಯವು ಮೂರನೆ ಸ್ಥಾನದಲ್ಲಿದೆ. ಇದು ನಮ್ಮ ಬಳಕೆ ವಿಧಾನವು ಸುಸ್ಥಿರವಾಗಿಲ್ಲವೆನ್ನುವುದನ್ನು ತೋರಿಸುತ್ತದೆ. 2012ರಲ್ಲಿ ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆಯು ($ME^1r$) ನಡೆಸಿದ ಅಧ್ಯಯನದ ಪ್ರಕಾರ ಜಗತ್ತಿನಲ್ಲಿ ಪ್ರತಿ ವರ್ಷ ಖನಿಜಗಳು, ಮರಮಟ್ಟುಗಳು, ಪೆಟ್ರೋಲಿಯಂ ಸಂಬಂಧಿತ ಪದಾರ್ಥಗಳು ಮತ್ತು ಜೈವಿಕ ಇಂಧನವನ್ನು ಸೇರಿ ಸುಮಾರು 620 ಕೋಟಿ ಟನ್‌ಗಳಷ್ಟು ಪ್ರಾಕೃತಿಕ ಸಂಪನ್ಮೂಲವನ್ನು ಹೊರತೆಗಯಲಾಗುತ್ತಿದೆ. ಇದು ಸರಾಸರಿ ಲೆಕ್ಕದಲ್ಲಿ ಜಗತ್ತಿನ ಪ್ರತಿ ವ್ಯಕ್ತಿಗೆ ಸುಮಾರು ಹತ್ತು ಟನ್‌ಗಳಷ್ಟಾಗುತ್ತದೆ. ವಿಪರ್ಯಾಸವೆಂದರೆ ಈ ಸಂಪನ್ಮೂಲದಲ್ಲಿ ಸುಮಾರು ಶೇಕಡ 20ರಷ್ಟು ಅಪವ್ಯಯವಾಗುತ್ತದೆ ಅಥವ ತ್ಯಾಜ್ಯವಾಗುತ್ತದೆ. ಇದೇ ವೇಗದಲ್ಲಿ ನೈಸರ್ಗಿಕ ಸಂಪನ್ಮೂಲದ ಬಳಕೆ ನಡೆದರೆ ಮುಂದಿನ 50 ವರ್ಷಗಳಲ್ಲಿ ಈಗ ನಮಗೆ ತಿಳಿದಿರುವ ಪ್ರಾಕೃತಿಕ ಸಂಪನ್ಮೂಲಗಳ ಶೇಕಡ 70 ಭಾಗ ಖಾಲಿಯಾಗುತ್ತದೆ. ಆದರೆ ಒಂದೆಡೆ ತಂತ್ರಜ್ಞಾನವು ದಿನೇ ದಿನೇ ಅಭಿವೃದ್ಧಿ ಹೊಂದಿ ಸಂಪನ್ಮೂಲಗಳ ಉತ್ತಮ ಉಪಯೋಗ ಸಾಧ್ಯವಾಗುತ್ತಿದ್ದರೂ, ಇವುಗಳನ್ನು ಹೊರತೆಗೆಯುವ ಪ್ರಮಾಣವೂ ಏರಿಕೆಯಾಗುತ್ತಿದೆ. ಅಂತೆಯೇ ಉತ್ಪಾದನೆಗಾಗಿ ಸಂಪನ್ಮೂಲಗಳ ವಿನಿಯೋಗದ ಮಾದರಿಗಳು ಮತ್ತು ಉತ್ಪಾದಿತ ವಸ್ತುಗಳ ಬಳಕೆಯ ರೀತಿಗಳೆರಡರಲ್ಲೂ ಸುಧಾರಣೆಯಾಗಬೇಕಾಗಿದೆ.

ಒಟ್ಟಾರೆಯಾಗಿ ಎಸ್‌ಡಿಜಿ 12 ಉತ್ಪಾದನಾ ತಂತ್ರಜ್ಞಾನ ಮತ್ತು ಜನರ ಜೀವನ ಶೈಲಿಗಳ ಮೇಲೆ ಒತ್ತು ನೀಡಿ ಪರಿಸರ ರಕ್ಷಣೆ ಮತ್ತು ಸಂಪನ್ಮೂಲಗಳ ಮಿಗತೆಯ ಮೂಲಕ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಬಹುದೆಂದು ಸೂಚಿಸುತ್ತದೆ.

### ಸಹಕಾರಿ ಸಂಸ್ಥೆಗಳ ಪಾತ್ರ :

ಸಹಕಾರಿ ಮಾದರಿಯೆಂದರೆ ಒಂದು ಪರ್ಯಾಯ ಮಾದರಿ, ಸುಸ್ಥಿರ ಮಾದರಿ. ಆರ್ಥಿಕ ಹಿಂಜರಿತದ ಸಮಯದಲ್ಲೆಲ್ಲ ಸಹಕಾರಿ ಸಂಸ್ಥೆಗಳು ಇದನ್ನು ಶೃತಪಡಿಸಿವೆ. ಸಮುದಾಯದ ಸಮಸ್ಯೆಗಳು ಮತ್ತು ಅಗತ್ಯಗಳ ಆಧಾರದಲ್ಲಿ ವ್ಯವಹಾರ ಚಟುವಟಿಕೆಗಳನ್ನು ಸಂಘಟಿಸುವುದೇ ಸಹಕಾರಿ ಸಂಸ್ಥೆಗಳ ಕಾರ್ಯತಂತ್ರ. ಆದುದರಿಂದ ಸಹಕಾರಿ ಸಂಘಟನೆಗಳು ಸಹಜವಾಗಿಯೇ ಪರಿಸರ ಕಾಳಜಿ, ಸಂಪನ್ಮೂಲಗಳ ಮಿತ ಉಪಯೋಗ, ಉತ್ತಮ ಬಳಕೆ ಮಾದರಿಗಳನ್ನು ಸದಸ್ಯರಿಗೆ ಪರಿಚಯಿಸುವುದು ಮುಂತಾದುವುಗಳನ್ನು ಅಳವಡಿಸಿಕೊಂಡಿರುತ್ತವೆ. ಇಂತಹ ಹಲವಾರು ಉದಾಹರಣೆಗಳು ವಿವಿಧ ದೇಶಗಳಲ್ಲಿ ಲಭ್ಯವಿವೆ. ಇಟಲಿ ದೇಶದ ಅತಿದೊಡ್ಡ ಗ್ರಾಹಕ ಸಹಕಾರಿ ಸಂಘವಾದ 'ಕೋಆಪ್ ಇಟಲಿ' ಉತ್ಪಾದನೆ ಮತ್ತು ಬಳಕೆಗೆ ಸಂಭಂಧಿಸಿದಂತೆ ಹಲವು ಆವಿಷ್ಕಾರಗಳನ್ನು ಮಾಡಿದೆ. ತನ್ನದೇ ಹೆಸರಿನ ಸಾವಯವ ಪದಾರ್ಥಗಳನ್ನು ದೊಡ್ಡಮಟ್ಟದಲ್ಲಿ ತನ್ನ ಸದಸ್ಯ ಗ್ರಾಹಕರಿಗೆ ಒದಗಿಸುತ್ತಿರುವ ಈ ಸಹಕಾರಿ ಸಂಘವು, ಯಾವುದೇ ರಾಸಾಯನಿಕಗಳನ್ನು ಬಳಸದೆ ಹಣ್ಣುಗಳನ್ನು ಬೆಳಸಿ, ಪರಿಸರಕ್ಕೆ ಹಾನಿಯಾಗದಂತೆ ಮತ್ತು ಆರೋಗ್ಯಕರ ಪದಾರ್ಥಗಳು ಸದಸ್ಯರಿಗೆ ದೊರೆಯುವಂತೆ ಮಾಡಿದೆ. ಮೂರು 'ಆರ್' ನೀತಿಯಾದ ಕಡಿಮೆ ಉಪಯೋಗಿಸುವುದು (ರೆಡ್ಯೂಸ್), ಪುನರ್ ಬಳಸುವುದು (ರಿ ಯೂಸ್) ಮತ್ತು ಮರು ಸಂಸ್ಕರಿಸುವುದು (ರಿ ಸೈಕಲ್) ಇವುಗಳ ಮೂಲಕ ಸುಸ್ಥಿರ ಅಭಿವೃದ್ಧಿಯ ಈ ಪ್ರಮುಖ ಗುರಿಯ ಸಾಧನೆಗೆ ತನ್ನ ಕಾಣಿಕೆ ನೀಡುತ್ತಿದೆ. ಜಪಾನಿನಲ್ಲಿ ಮಹಿಳೆಯರೇ ಮುಖ್ಯವಾಗಿ ನಡೆಸುವ ಸೈಕತ್ಸು ಕ್ಲಬ್ ಸಹಕಾರಿ ಸಂಘಗಳು ಆರೋಗ್ಯ, ಪರಿಸರ ಮತ್ತು ಮಿಗತೆ ಎಂಬ ಸೂತ್ರಗಳನ್ನು ಪಾಲಿಸುತ್ತ ತನ್ನ ಸದಸ್ಯರು ಸುಸ್ಥಿರ ಅಭಿವೃದ್ಧಿಯ ಸೂತ್ರಗಳನ್ನು ಪಾಲಿಸುವಂತೆ ನೋಡಿಕೊಳ್ಳುತ್ತಿವೆ. ದಕ್ಷಿಣ ಆಫ್ರಿಕದಲ್ಲಿ ತರಕಾರಿಗಳು ಸರಿಯಾದ ರಕ್ಷಣೆ ಇಲ್ಲದೆ ದೊಡ್ಡ ಪ್ರಮಾಣದಲ್ಲಿ ಹಾಳಾಗುತ್ತಿದ್ದನ್ನು ಗಮನಿಸಿದ ಮಹಿಳಾ ಸಹಕಾರಿ ಸಂಘವಾದ ಐಎಂಎಐ ಸಾಗುವಳಿ ಸಹಕಾರಿ ಸಂಘವು ತರಕಾರಿಗಳಿಂದ ಉಪ್ಪಿನಕಾಯಿ ಮಾಡುವ ಘಟಕವನ್ನು ಆರಂಭಿಸುವುದರ ಮೂಲಕ ತರಕಾರಿಗಳು ಹಾಳಾಗುವುದರಿಂದ ತಡೆಯುವುದರ ಜೊತೆಗೆ ತನ್ನ ಸದಸ್ಯರಿಗೆ ಆದಾಯದ ಹೊಸ ಮೂಲವೂ ದೊರೆಯುವಂತೆ ಮಾಡಿದೆ. ಬ್ರಿಟನ್‌ನ ಮೂರನೇ ಅತಿದೊಡ್ಡ ಪ್ರವಾಸೋದ್ಯಮ ಸಂಸ್ಥೆಯಾದ ಮಿಡ್ ಕೌಂಟೀಸ್ ಸಹಕಾರಿ ಸಂಘವು ಸುಸ್ಥಿರ ಪ್ರವಾಸಯೋಜನೆಗಳನ್ನು ಸಂಘಟಿಸುತ್ತದೆ. ಪ್ರವಾಸಿಗರು ವಿವಿಧ ಪ್ರದೇಶಗಳನ್ನು ಸಂದರ್ಶಿಸುವುದರಿಂದಾಗುವ ಇಂಗಾಲಾಮ್ಲ ಹೊರಸೂಸುವಿಕೆ, ತ್ಯಾಜ್ಯ ಹರಡುವಿಕೆ, ನೀರಿನ ಅತಿಯಾದ ಬಳಕೆ ಇವುಗಳನ್ನು ತಡೆಯುವಂತೆ ಮತ್ತು ಸ್ಥಳೀಯ ಸಂಸ್ಕೃತಿಗೆ ಪೂರಕವಾಗಿರುವಂತೆ ಪ್ರವಾಸ ಕಾರ್ಯಕ್ರಮಗಳನ್ನು ರೂಪಿಸುವುದರ ಮೂಲಕ ಈ ಸಹಕಾರಿ ಸಂಘವು ಸುಸ್ಥಿರ ಪ್ರವಾಸೋದ್ಯಮಕ್ಕೆ ಮಾದರಿಯಾಗಿದೆ. 'ಟೋಗೋ'ದಲ್ಲಿ ಯುವ ಕೃಷಿಕರೇ ಸೇರಿ ಆರಂಭಿಸಿರುವ 'ಕೋಆಪರೇಟಿವ್ ಆಫ್ ಯಂಗ್ ಪ್ರೊಫೆಶನಲ್ ಪ್ರೊಡ್ಯೂಸರ್ಸ್ ಆಫ್ ಆರ್ಗಾನಿಕ್ ಪೈನಾಪಲ್



Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 32
Licensed to post without Prepayment License No. PMG BG/WPP-384/2020-2022.

(CJPPAB)' ಪರಿಸರಕ್ಕೆ ಹಾನಿಯಾಗದಂತೆ ಮತ್ತು ಸಾವಯವ ವಿಧಾನಗಳ ಮೂಲಕ ಅನಾನಸ್ ಹಣ್ಣುಗಳನ್ನು ಬೆಳೆಯುತ್ತ ಅದನ್ನು ದೊಡ್ಡ ಪ್ರಮಾಣದಲ್ಲಿ ಇಟಲಿ ದೇಶಕ್ಕೆ ರಫ್ತು ಮಾಡುತ್ತಿದೆ.

ಭಾರತದಲ್ಲಿಯೂ ಸಹಕಾರಿ ಸಂಘಗಳು ಪರಿಸರ ಕಾಳಜಿ ಮತ್ತು ಉತ್ಪಾದನೆ ಹಾಗೂ ಬಳಕೆಯಲ್ಲಿ ಹೊಸ ಮಾದರಿಗಳನ್ನು ಅನುಷ್ಠಾನಕ್ಕೆ ತರುತ್ತಿರುವ ಉದಾಹರಣೆಗಳಿವೆ. ಕಾರ್ಬನ್ ಹೊರಸೂಸುವಿಕೆ ತಡೆಗಟ್ಟಲು ಅನುಕೂಲವಾಗುವ ಡಿಜಿಟಲೀಕರಣದ ಕಡೆ ಬಹುತೇಕ ಸಹಕಾರಿ ಸಂಘಗಳು ಒಲವು ತೋರುತ್ತಿವೆ. ಹೈದರಾಬಾದಿನಲ್ಲಿ ಮುಖ್ಯ ಕಛೇರಿಯನ್ನು ಹೊಂದಿರುವ ಚೇತನಾ ಆರ್ಗಾನಿಕ್ 978 ಕೃಷಿಕ ಸ್ವಸಹಾಯ ಸಂಘಗಳನ್ನು ಹೊಂದಿದ್ದು ಇವುಗಳನ್ನು ಜಿಲ್ಲಾ ಮಟ್ಟದಲ್ಲಿ 13 ಸಹಕಾರಿ ಸಂಘಗಳಾಗಿ ಸಂಘಟಿಸಿ ಸಾವಯವ ಮತ್ತು ಸುಸ್ಥಿರ ವಿಧಾನದಲ್ಲಿ ಹತ್ತಿಯನ್ನು ಬೆಳೆಯುತ್ತಿರುವುದಲ್ಲದೆ, ಪರಿಸರ ಸ್ನೇಹಿ ಮಾದರಿಯ ಮೂಲಕ ಬಟ್ಟೆ ಉತ್ಪಾದನೆಯನ್ನೂ ಉತ್ತೇಜಿಸುತ್ತಿದೆ. ಕರ್ನಾಟಕದ ಮಂಡ್ಯದಲ್ಲಿರುವ ಮಂಡ್ಯ ಸಾವಯವ ಕೃಷಿಕರ ಸಹಕಾರಿ ಸಂಘವು ಇತ್ತೀಚಿನ ಇನ್ನೊಂದು ಉದಾಹರಣೆಯಾಗಿದ್ದು ಈ ಸಂಸ್ಥೆಯು ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸುತ್ತಾ ಪರಿಸರ ಪ್ರಜ್ಞೆಯ ಉತ್ತಮ ಸಹಕಾರಿ ಮಾದರಿಯಾಗಿದೆ. ಹೀಗೆಯೇ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಸಾಯನಿಕಗಳನ್ನು ಬಳಸದಿರುವ ಮತ್ತು ಸಾವಯವ ಗೊಬ್ಬರ ಹಾಗೂ ಕೃಷಿ ಪದ್ಧತಿಯನ್ನು ಉತ್ತೇಜಿಸುತ್ತಿರುವ ಹಲವು ಸಹಕಾರಿ ಸಂಘಗಳನ್ನು ನಮ್ಮ ದೇಶದಲ್ಲಿ ಕಾಣಬಹುದು.

ಸುಸ್ಥಿರ ಉತ್ಪಾದನೆ ಮತ್ತು ಬಳಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸಹಕಾರಿ ಸಂಘಟನೆಗಳು ಈ ಕೆಳಗೆ ಸೂಚಿಸಿದಂತೆ ಹಲವು ಉಪಕ್ರಮಗಳನ್ನು ತೆಗೆದುಕೊಳ್ಳಬಹುದಾಗಿದೆ

1. ಕೃಷಿ ಸಹಕಾರಿ ಸಂಘಗಳು ತಮ್ಮ ಸದಸ್ಯರು ನಡೆಸುವ ಕೃಷಿಚಟುವಟಿಕೆಗಳಲ್ಲಿ ರಾಸಾಯನಿಕಗಳ ಬಳಕೆಯನ್ನು ಕಡಿಮೆ ಮಾಡಲು ಮತ್ತು ಸ್ಥಳೀಯ ಹಾಗೂ ಸಾವಯವ ಪದಾರ್ಥಗಳ ಬಳಕೆಯನ್ನು ವೃದ್ಧಿಸಲು ಅಗತ್ಯ ಮಾಹಿತಿ ನೀಡುವುದು, ತರಬೇತಿ ನೀಡುವುದು, ಮುಂತಾದ ಚಟುವಟಿಕೆಗಳನ್ನು ನಡೆಸಬಹುದು.
2. ತಾವು ಮಾರಾಟ ಮಾಡುವ ಗೊಬ್ಬರ, ಬೀಜಗಳು ಮತ್ತಿತರ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಈ ವಿಷಯಗಳನ್ನು ಪರಿಗಣಿಸುವುದು ಮತ್ತು ಸಾಧ್ಯವಾದಷ್ಟು ಸಾಯವಯ ಮೂಲದ ಸಾಮಗ್ರಿಗಳನ್ನೆ ಮಾರಾಟ ಮಾಡಲು ಪ್ರಯತ್ನ ಮಾಡಬಹುದು.
3. ಪತ್ತಿನ ಸಹಕಾರಿ ಸಂಘಗಳು ಸುಸ್ಥಿರ ಉತ್ಪಾದನೆ ಮತ್ತು ಬಳಕೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಉತ್ತೇಜಿಸಲು ಅಂತಹ ಚಟುವಟಿಕೆಗಳಿಗೆ ಕಡಿಮೆ ಬಡ್ಡಿಯ ಸಾಲ ಯೋಜನೆಗಳನ್ನು ರೂಪಿಸಬಹುದು.
4. ನೀರಿನ ಸುಸ್ಥಿರ ಬಳಕೆ ಮತ್ತು ನಿರ್ವಹಣೆಗಾಗಿ ನೀರು ನಿರ್ವಹಣಾ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಸಂಯುಕ್ತ ಸಹಕಾರಿಯು ಕಾರ್ಯಯೋಜನೆಗಳು ಮತ್ತು ಉತ್ತೇಜನಾ ಚಟುವಟಿಕೆಗಳನ್ನು ನಡೆಸಬಹುದು
5. ಉತ್ಪಾದನಾ ಸಹಕಾರಿ ಸಂಘಟನೆಗಳು ತಮ್ಮ ಉತ್ಪಾದನಾ ಪ್ರಕ್ರಿಯೆಯಲ್ಲಿ ನೀರು, ವಿದ್ಯುಚ್ಛಕ್ತಿ ಮುಂತಾದುವುಗಳ ಮಿತವಾದ ಬಳಕೆ, ಕಚ್ಚಾ ಸಾಮಗ್ರಿಗಳು ಮತ್ತಿತರ ಪರಿಕರಗಳಲ್ಲಿ ತ್ಯಾಜ್ಯಗಳನ್ನು ಕಡಿಮೆಮಾಡುವುದು, ಬಳಸಿದ ಮತ್ತು ಮಲಿನ ನೀರು ಮತ್ತು ತ್ಯಾಜ್ಯಗಳನ್ನು ವಿಲೇವಾರಿ ಮಾಡಲು ವೈಜ್ಞಾನಿಕ ಮಾರ್ಗಗಳನ್ನು ಬಳಸುವುದು ಮುಂತಾದುವುಗಳಿಗೆ ಆದ್ಯತೆ ನೀಡಬೇಕು
6. ತ್ಯಾಜ್ಯಗಳ ಮರುಬಳಕೆ, ಸಂಸ್ಕರಣ ಮತ್ತು ತ್ಯಾಜ್ಯಗಳಿಂದ ಇಂಧನ ಉತ್ಪಾದನೆ ಮುಂತಾದ ಚಟುವಟಿಕೆಗಳನ್ನು ಸಹಕಾರಿ ಸಂಘಟನೆಗಳು ಕೈಗೆತ್ತಿಕೊಳ್ಳಬಹುದು ಮತ್ತು ಅಂತಹ ಚಟುವಟಿಕೆಗಳಿಗೆ ಉತ್ತೇಜನ ನೀಡಬಹುದು.
7. ಸಹಕಾರಿ ಸಂಸ್ಥೆಗಳು ತಾವು ಬಳಸುವ ವಿವಿಧ ಕಛೇರಿ ಸಾಮಾಗ್ರಿ ವಾಹನಗಳು, ವಿದ್ಯುಚ್ಛಕ್ತಿ ಮುಂತಾದುವುಗಳಲ್ಲಿ ಮಿಗತೆ ಸಾಧಿಸಲು, ಪರಿಸರ ಸ್ನೇಹಿ ಮೂಲಗಳ ಸಾಮಗ್ರಿಗಳನ್ನು ಬಳಸಲು ಮತ್ತು ಬಳಸಿದ ವಸ್ತುಗಳನ್ನು ಪುನರ್‌ಬಳಕೆಮಾಡುವುದು ಮುಂತಾದುವುಗಳನ್ನು ಆರಂಭಿಸಬಹುದು.

ಮೇಲಿನ ಸಲಹೆಗಳು ಕೇವಲ ದಿಕ್ಸೂಚಿ ಮಾತ್ರ. ಸಹಕಾರಿ ಸಂಘಗಳು ತಾವು ನಡೆಸುತ್ತಿರುವ ಮುಖ್ಯ ವ್ಯವಹಾರ, ತಮ್ಮ ಭೌಗೋಳಿಕ ಮತ್ತು ಸಾಮಾಜಿಕ ಪರಿಸರ ಇವುಗಳ ಆಧಾರದಲ್ಲಿ ವಿವಿಧ ಚಟುವಟಿಕೆಗಳನ್ನು ಗ್ರಹಿಸಿ, ಯೋಜಿಸಿ ಚಾಲ್ತಿಗೆ ತರುವುದರ ಮೂಲಕ ಸುಸ್ಥಿರ ಉತ್ಪಾದನೆ ಮತ್ತು ಬಳಕೆಯ ಬಗೆಗಿನ ಗುರಿಗಳಿಗೆ ತಮ್ಮದೇ ರೀತಿಯಿಂದ ದೇಣಿಗೆ ನೀಡಬಹುದಾಗಿದೆ.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು-560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1-ಕೆ-ಬ್ಲಾಕ್, ರಾಜಾಜಿನಗರ, ಬೆಂಗಳೂರು-560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು-570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ಡಾ. ಎನ್. ಎಸ್. ಪಾಟೀಲ, ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472-270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010